


ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 12 ಶನಿವಾರ 2025

ಸಂಪುಟ: 46 | ಸಂಚಿಕೆ: 86 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ನಮಗೆ ದೆಹಲಿಯಲ್ಲಿ ದೇವಸ್ಥಾನವಿದೆ...



• ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾರ್ಮಿಕ ನುಡಿ • ಐದು ವರ್ಷ ನಾನೇ ಮುಖ್ಯಮಂತ್ರಿ ಎಂದು ಸಿದ್ದರಾಮಯ್ಯ ಹೇಳಿಲ್ಲ; ನೀವು ಕೇಳಿದ್ದಕ್ಕೆ ಹಾಗೆ ಹೇಳಿದ್ದಾರೆ

ಬೆಂಗಳೂರು, ಜು. 11(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿರುವ ಹೇಳಿಕೆಗಳಿಗೆ ಪ್ರತಿಕ್ರಿಯಿಸುವ ಅವಶ್ಯಕತೆ ಇಲ್ಲ ಎಂದು ಉಪ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಖಾರವಾಗಿ ತಿಳಿಸಿದ್ದಾರೆ.

ದೆಹಲಿಯಿಂದ ಹಿಂತಿರುಗುತ್ತಿದ್ದಂತೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನೀವು ಕೇಳಿದ ಪ್ರಶ್ನೆಗಳಿಗೆ ಅವರು ಉತ್ತರಿಸಿದ್ದಾರೆ. ಇದಕ್ಕೆಲ್ಲಾ ನಾನು ಏಕೆ ಪ್ರತಿಕ್ರಿಯಿಸಲಿ ಎಂದರು.

ನನಗಿಲ್ಲದ ಚಿಂತೆ ನಿಮಗೇಕೆ. ನನ್ನ ಬಗ್ಗೆ ನೀವೇ ಗಾಬರಿ ಆದಂತಿದೆ. ಮುಖ್ಯ ಮಂತ್ರಿ ನೀಡಿರುವ ಹೇಳಿಕೆಗೆಲ್ಲಾ ನಾನು ಉತ್ತರಿಸುವ ಅಗತ್ಯವಿಲ್ಲ, ನಾನು ಪಕ್ಷದ ರಾಜ್ಯ ಘಟಕದ ಮುಖ್ಯಸ್ಥನಾಗಿದ್ದೇನೆ.

ಐದು ವರ್ಷ ನಾನೇ ಮುಖ್ಯಮಂತ್ರಿ ಎಂಬುದಾಗಿ ಅವರೇನೂ ಸ್ವಯಂ ಪ್ರೇರಿತರಾಗಿ ಹೇಳಿಲ್ಲ. ಮಾಧ್ಯಮದವರು ಕೇಳಿದ ಪ್ರಶ್ನೆಗಳಿಗಷ್ಟೇ ಉತ್ತರಿಸಿದ್ದಾರೆ.

ಅದನ್ನೇ ಮುಂದಿಟ್ಟುಕೊಂಡು ನನ್ನನ್ನು ಕೆದಕುವುದರಿಂದ ನಿಮಗೆ ಏನೂ ಸಿಗುವುದಿಲ್ಲ ಎಂದರು.

ಸಿದ್ದರಾಮಯ್ಯ ಈ ಹಿಂದೆ ಐದು ವರ್ಷ ನಾನೇ ಮುಖ್ಯಮಂತ್ರಿ ಎಂಬುದಾಗಿ ಹೇಳಿದ್ದಾಗ, ನೀವು ನನ್ನ ಬಳಿ ಆಯ್ಕೆ ಇಲ್ಲ ಎಂದಿದ್ದೀರಿ. ಈಗಲೂ ನೀವು ಅದೇ ಸ್ಥಿತಿಯಲ್ಲಿ ಇದ್ದೀರಾ ಎಂಬ ಪ್ರಶ್ನೆಗೆ, ನಿಮಗೆ ನಮ್ಮ ವಿಚಾರದಲ್ಲಿ ಗಾಬರಿ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ. ನಮಗೆ ದೆಹಲಿಯಲ್ಲಿ ದೇವಸ್ಥಾನವಿದೆ ಎಂದು ಮಾರ್ಮಿಕವಾಗಿ ತಿಳಿಸಿದರು.

ಪಕ್ಷ ನನಗೆ ಸಂಘಟನೆ ಹಾಗೂ ಉಪಮುಖ್ಯಮಂತ್ರಿ ಹುದ್ದೆ ನೀಡಿದ್ದು, ನನ್ನ ಗಮನ ಪಕ್ಷ ಹಾಗೂ ಸರ್ಕಾರದ ಹಿತಾಸಕ್ತಿ ಕಾಪಾಡುವುದರತ್ತ ಮಾತ್ರ ಇದೆ. ನಾಯಕತ್ವ ಬದಲಾವಣೆ ವಿಚಾರವಾಗಿ ನೀವು ನನಗೆ ಹೇಗೆ ತಿರುಗಿಸಿ ಕೇಳಿದರೂ ನಾನಂತೂ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ನಿಮ್ಮ ತಂತ್ರಗಳಿಗೆ ಬಲಿಯಾಗುವುದಿಲ್ಲ. ■ 6ನೇ ಪುಟಕ್ಕೆ

ಬೇಕಿದ್ದರೆ ಶಾಸಕರ ಪರೇಡ್ ನಡೆಯಲಿ!

ಬೆಂಗಳೂರು, ಜು. 11(ಕೆಎಂಶಿ)– ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಅಧಿಕಾರ ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ. ಬೇಕಿದ್ದರೆ ಶಾಸಕರ ಪರೇಡ್ ನಡೆಸಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಸ್ಪಷ್ಟವಾಗಿ ತಿಳಿಸಿದ್ದಾರೆ.




ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಭೇಟಿ ಸಾಧ್ಯವಾಗದಿದ್ದಾಗ, ನಿನ್ನೆ ರಾತ್ರಿ ಖರ್ಗೆ ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ತಮ್ಮ ನಿಲುವನ್ನು ಅವರ ಗಮನಕ್ಕೆ ತಂದಿದ್ದಾರೆ. ಯಾವ ಕಾರಣಕ್ಕೆ ಶಿವಕುಮಾರ್ ಅವರಿಗೆ ಅಧಿಕಾರ ನೀಡಬಾರದೆಂಬ ಮಾಹಿತಿ ಯನ್ನು ಖರ್ಗೆ ಮುಂದಿಟ್ಟು, ನಾನೇನು ಅಧಿಕಾರಕ್ಕೆ ಅಂಟಿ ಕೊಂಡು ಕೂರಬೇಕೆಂದಿಲ್ಲ, ವರಿಷ್ಠರ ತೀರ್ಮಾನಕ್ಕೆ ಬದ್ಧನಾಗಿರುತ್ತೇನೆ.

ಆದರೆ, ನನ್ನಿಂದ ತೆರವಾಗುವ ಸ್ಥಾನಕ್ಕೆ ಪರಿಶಿಷ್ಟ ಜಾತಿ, ವರ್ಗ ಇಲ್ಲವೇ ಹಿಂದುಳಿದ ಸಮುದಾಯದವರನ್ನೇ ಕೂರಿಸಿ. ಪಕ್ಷಕ್ಕೆ ನಿಮ್ಮ ಸೇವೆ ಹೇಳಲಾಗದಷ್ಟಿದೆ. ರಾಜ್ಯದ ಮುಖ್ಯ ಮಂತ್ರಿಯಾಗಿ ನೀವು ಅಧಿಕಾರ ವಹಿಸಿ ಕೊಳ್ಳುವುದಾದರೆ, ನಾನು ತಕ್ಷಣವೇ ಸ್ಥಾನ ತ್ಯಜಿಸಲು ಸಿದ್ಧ. ಎಐಸಿಸಿ ಅಧ್ಯಕ್ಷ ಸ್ಥಾನ ತೆರವು ಸಾಧ್ಯವಿಲ್ಲವೆಂದಾದರೆ, ನೀವೇ ಮುಂದೆ ನಿಂತು ಪರಿಶಿಷ್ಟ ಜಾತಿ, ವರ್ಗ ಅಥವಾ ಹಿಂದುಳಿದ ಸಮುದಾಯದವರನ್ನು ಆಯ್ಕೆ ಮಾಡಿ.

ಶಿವಕುಮಾರ್ ಬಗ್ಗೆ ನಾನು ಹೆಚ್ಚು ಹೇಳುವ ಅಗತ್ಯವಿಲ್ಲ, ನಿಮಗೆ ಎಲ್ಲವೂ ತಿಳಿದಿದೆ. ಅವರಿಗೆ ಸಚಿವರು, ಶಾಸಕರ ಬೆಂಬಲವಿಲ್ಲ. ಹೀಗಿದ್ದಾಗ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನನ್ನಾಗಿ ಹೇಗೆ ಆಯ್ಕೆ ಮಾಡುತ್ತೀರಿ, ■ 6ನೇ ಪುಟಕ್ಕೆ

ಕರಿಕಲ್ಲು ಕ್ವಾರಿ ಬಳಿ ಚಿರತೆ ಕಳೇಬರ ಪತ್ತೆ

ವಿಷಪ್ರಾಶನ ಶಂಕೆ




ಚಾಮರಾಜನಗರ, ಜು. 11–ತಾಲೂಕಿನ ಕೊತ್ತಲವಾಡಿಯ ಕರಿಕಲ್ಲು ಕ್ವಾರಿಯೊಂದರ ಬಳಿ ಚಿರತೆಯೊಂದರ ಕಳೇಬರ ಪತ್ತೆಯಾಗಿದ್ದು, ವಿಷಪ್ರಾಶನ ಶಂಕೆ ವ್ಯಕ್ತವಾಗಿದೆ.

ಪ್ರದೀಪ್ ಎಂಬುವವರಿಗೆ ಸೇರಿದ ಕರಿಕಲ್ಲು ಕ್ವಾರಿ ಸಮೀಪ ಕಲ್ಲಿನ ಮೇಲೆ ಸುಮಾರು 5ರಿಂದ 6 ವರ್ಷದ ಗಂಡು ಚಿರತೆಯ ಕಳೇಬರ ಪತ್ತೆಯಾಗಿದೆ. ಎರಡು ಮೂರು ದಿನಗಳ ಹಿಂದೆಯೇ ಮೃತಪಟ್ಟಿರಬಹುದೆಂದು ಶಂಕಿಸಲಾಗುತ್ತಿದೆ. ಇದರ ಸಮೀಪ ದಲ್ಲಿಯೇ ಕರು ಹಾಗೂ ನಾಯಿಯ ಕಳೇಬರ ಕೂಡ ಪತ್ತೆಯಾಗಿರುವುದು ಹಲವು ಅನುಮಾನಗಳಿಗೆ ಎಡೆಮಾಡಿ ಕೊಟ್ಟಿದೆ. ಚಿರತೆಯ ಕಳೇಬರವನ್ನು ನೋಡಿದ ಸ್ಥಳೀಯರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದು, ಸ್ಥಳಕ್ಕೆ ಆಗಮಿಸಿದ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ. ಬಂಡೀಪುರದ ಶ್ವಾನದಳದಿಂದ ತಪಾಸಣೆ ನಡೆಸಲಾಗಿದೆ. ಪಶು ವೈದ್ಯರಾದ ಡಾ.ವಾಸಿಂ, ಡಾ.ಮೂರ್ತಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಚಿರತೆಯ ಕಳೇಬರವನ್ನು ಸುಡಲಾಯಿತು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಅರಣ್ಯ ಇಲಾಖೆಯ ಅಧಿಕಾರಿಗಳು ತನಿಖೆ ಕೈಗೊಂಡಿದ್ದಾರೆ. ■ 6ನೇ ಪುಟಕ್ಕೆ



ವಿದ್ಯುತ್ ಚಾಲಿತ ಟ್ರಕ್‌ಗಳಿಗೆ ಆರ್ಥಿಕ ಉತ್ತೇಜನ ಯೋಜನೆ

ಸರಕು ಸಾಗಾಣೆ ವಲಯದಲ್ಲಿ ಇಂಗಾಲ ಹೊರ ಸೂಸುವಿಕೆ ಶೂನ್ಯ ಮಟ್ಟಕ್ಕೆ ಇಳಿಸುವ ಬದ್ಧತೆ ಹಿನ್ನೆಲೆಯಲ್ಲಿ ಯೋಜನೆ ಜಾರಿ



ಬೆಂಗಳೂರು, ಜು. 11(ಕೆಎಂಶಿ)– ಸರಕು ಸಾಗಾಣೆ ವಲಯದಲ್ಲಿ ಇಂಗಾಲ ಹೊರ ಸೂಸುವಿಕೆ ಶೂನ್ಯ ಮಟ್ಟಕ್ಕೆ ಇಳಿಸುವ ಬದ್ಧತೆಯನ್ನು ಪುನರುಚ್ಚರಿಸಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ, ಮೊದಲ ಬಾರಿಗೆ ವಿದ್ಯುತ್ ಚಾಲಿತ ಟ್ರಕ್ (ಇ–ಟ್ರಕ್)ಗಳಿಗೆ ಆರ್ಥಿಕ ಉತ್ತೇಜನ ಯೋಜನೆ ಆರಂಭಿಸಿದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ.


ದೆಹಲಿ ಸಚಿವಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಯೋಜನೆ ವಿವರ ಪ್ರಕಟಿಸಿದ್ದು, ಪಿಎಂ ಇ–ಡ್ರೈವ್ ಯೋಜನೆಯಡಿ ಟ್ರಕ್‌ಗಳಿಗೆ ಪ್ರೋತ್ಸಾಹ ಧನ ಕೊಡಲಾಗುವುದು ಎಂದರು. ದೇಶದಲ್ಲಿ ಸಮೂಹ ಸಾರಿಗೆ ಹಾಗೂ ಸರಕು ಸಾಗಣೆ ವ್ಯವಸ್ಥೆಯಲ್ಲಿ ಇಂಗಾಲ ಹೊರಸೂಸುವಿಕೆ ಪೂರ್ಣವಾಗಿ ತಗ್ಗಿಸುವಲ್ಲಿ ಪ್ರಧಾನಿ ಅವರ ಮಹತ್ವಾಕಾಂಕ್ಷೆಯ ಪಿಎಂ ಇ–ಡ್ರೈವ್ ಯೋಜನೆ ಅನುಷ್ಠಾನಕ್ಕೆ ತರಲಾಗಿದೆ. ಸ್ವಚ್ಛ, ದಕ್ಷ ಮತ್ತು ಸುಸ್ಥಿರ ಸರಕು ಸಾಗಣೆಗೆ ಪೂರಕವಾಗಿ ■ 6ನೇ ಪುಟಕ್ಕೆ

ಬೇಕರಿ, ಕಾಫಿ, ಟೀ ಶಾಪ್‌ಗಳಿಗೂ ಜಿಎಸ್‌ಟಿ ಬ್ರಹ್ಮಾಸ್ತ್ರ

ಬೆಂಗಳೂರು, ಜು.11– ಬೇಕರಿ, ಕಾಂಡಿಮೆಂಟ್ಸ್, ಕಾಫಿ–ಟೀ ವ್ಯಾಪಾರ ಮಾಡುವ ಅಂಗಡಿಗಳ ಕಳೆದ 4 ವರ್ಷದ ವಹಿವಾಟನ್ನು ಗಮನಿಸಿ, ವಾಣಿಜ್ಯ ತೆರಿಗೆ ಇಲಾಖೆ ಜಿಎಸ್‌ಟಿ ಕಟ್ಟುವಂತೆ ನೋಟಿಸ್ ನೀಡುವ ಮೂಲಕ ಬಿಗ್ ಶಾಕ್ ನೀಡಿದೆ.

ದೂರದೂರುಗಳಿಂದ ನಗರಗಳಿಗೆ ಬಂದು ಸಾವಿರಾರು ಜನರು ಬೇಕರಿ, ಟೀ ಶಾಪ್, ಪಾನ್ ಶಾಪ್, ಕಾಂಡಿಮೆಂಟ್ ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ. ಇಂತಹ ಶಾಪ್‌ಗಳಲ್ಲಿ ಇವತ್ತಿನ ಡಿಜಿಟಲ್ ದುನಿಯಾದಲ್ಲಿ ಅತೀ ಹೆಚ್ಚು ವ್ಯವಹಾರ ಆಗುತ್ತಿರುವುದು ಆನ್‌ಲೈನ್ ಪೇಮೆಂಟ್ ಅಂದರೆ ಗೂಗಲ್‌ಪೇ, ಪೆಟಿಎಂ, ಫೋನ್ ಪೇ ಮೂಲಕವೇ. ಟೀ, ಸಿಗರೇಟ್, ಕಾಫಿ, ತಿಂಡಿ, ಬೀಡಾ ಗ್ರಾಹಕರು ಸಣ್ಣಪುಟ್ಟ ಖರೀದಿಗೂ ಡಿಜಿಟಲ್ ಪೇಮೆಂಟ್ ಮಾಡುತ್ತಿದ್ದಾರೆ. ಹೀಗೆ ವ್ಯಾಪಾರ ಮಾಡುತ್ತಿರುವ ಅಂಗಡಿಗಳ ಕಳೆದ ನಾಲ್ಕು ವರ್ಷದ ವಹಿವಾಟನ್ನು ಗಮನಿಸಿರುವ ವಾಣಿಜ್ಯ ತೆರಿಗೆ ಇಲಾಖೆಯು ನಿಮ್ಮ ವ್ಯಾಪಾರ ವಹಿವಾಟು ಲಕ್ಷದಿಂದ ಕೋಟಿವರೆಗೆ ಆಗಿದೆ. ಅದಕ್ಕೆ ಜಿಎಸ್‌ಟಿ ಕಟ್ಟಬೇಕು ಎಂದು ಸಾವಿರಾರು ಮಾಲೀಕರಿಗೆ ನೋಟಿಸ್ ನೀಡಿದೆ. ಹೀಗೆ ನೋಟಿಸ್ ಪಡೆದವರು ಅಯ್ಯೋ ನಾವು ವರ್ಷ ಪೂರ್ತಿ ದುಡಿದರೂ 2–3 ಲಕ್ಷ ರೂ. ಉಳಿತಾಯ ಆಗದು. ಈಗ ಇಷ್ಟೊಂದು ಟ್ಯಾಕ್ಸ್ ಎಲ್ಲಿಂದ ಕಟ್ಟುವುದು ಎಂದು ಅಳಲು ತೋಡಿಕೊಂಡಿದ್ದಾರೆ.







ನಾಳೆ ಒಡೆಯರ್ ಕಪ್ ಬ್ಯಾಡ್ಮಿಂಟನ್ ಪಂದ್ಯಾವಳಿ

ಮೈಸೂರು, ಜು.11(ಜಿಎ)–ಬಿದಿರು ಸ್ಪೋರ್ಟ್ಸ್ ಅಸೋಸಿಯೇಷನ್ ವತಿಯಿಂದ ಜು.13 ರಂದು ಬೆಳಗ್ಗೆ 10 ಗಂಟೆಗೆ ಕೆ.ಸಿ.ಬಡಾವಣೆಯ ಫ್ರೆಂಡ್ಸ್ ಸ್ಪೋರ್ಟ್ಸ್ ರ್ಝೋನ್ ಬ್ಯಾಡ್ಮಿಂಟನ್ ಅಕಾಡೆಮಿಯಲ್ಲಿ ಒಡೆಯರ್ ಕಪ್ 2025 ಬ್ಯಾಡ್ಮಿಂಟನ್ ಪಂದ್ಯಾವಳಿ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಅಸೋಸಿಯೇಷನ್‌ನ ಕಾರ್ಯದರ್ಶಿ ಅನಿಲ್‌ಕುಮಾರ್ ಈ ವಿಷಯ ತಿಳಿಸಿ, ವಿಜೇತರಿಗೆ ಒಟ್ಟು ಒಂದು ಲಕ್ಷ ನಗದು ಬಹುಮಾನ, ಉಚಿತ ರ್‍ಯಾಕೆಟ್‌ಗಳು, ಗಿಫ್ಟ್ ಹ್ಯಾಂಪರ್‌ಗಳನ್ನು ನೀಡಲಾಗುವುದು ಎಂದರು. ಇದು ಡಬಲ್ಸ್ ಪಂದ್ಯಾವಳಿ ಆಗಿದೆ. ಶಾಸಕ ಟಿ.ಎಸ್. ಶ್ರೀವತ್ಸ ಪಂದ್ಯಾವಳಿ ಉದ್ಘಾಟಿಸುವರು. ಪಾಲಿಕೆ ಮಾಜಿ ಮೇಯರ್ ಶಿವಕುಮಾರ್, ಉದ್ಯಮಿ ಚೇತನ್ ವಿಶ್ವನಾಥ್, ಅಂತಾರಾಷ್ಟ್ರೀಯ ಬ್ಯಾಡ್ಮಿಂಟನ್ ಆಟಗಾರರಾದ ಸುನಿಲ್ ಗ್ಲಾಡ್ಸನ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಹೆಚ್ಚಿನ ಮಾಹಿತಿಗೆ ದೂ.9902363089 ಸಂಪರ್ಕಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ಕೆ.ವಿ.ನಾಗರಾಜ್, ಪ್ರಭಾಕರ್, ಮನೋಹರ್ ಉಪಸ್ಥಿತರಿದ್ದರು.

ಪ್ರಮಥ ಸ್ನೇಹಬಳಗದ ವತಿಯಿಂದ ಅನ್ನ ಸಂತರ್ಪಣೆ



ಮೂರನೇ ಆಷಾಢ ಶುಕ್ರವಾರದ ನಿಮಿತ್ತ ಮೈಸೂರಿನ ಅಗ್ರಹಾರದ ತ್ಯಾಗರಾಜ ರಸ್ತೆಯಲ್ಲಿರುವ ಪ್ರಮಥ ಸ್ನೇಹ ಬಳಗದ ಆಶ್ರಯದಲ್ಲಿ ನಡೆದ ಶ್ರೀ ಚಾಮುಂಡೇಶ್ವರಿ ಪೂಜಾ ಮಹೋತ್ಸವದಲ್ಲಿ ನೂರಾರು ಭಕ್ತರಿಗೆ ಪ್ರಸಾದ ವಿತರಿಸಲಾಯಿತು. ಈ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಡಿ.ಮಂಜುನಾಥ್, ನಾಗರಾಜ್.ಎನ್, ಯಶವಂತ್ ಕುಮಾರ್, ಬಿ.ಎಂ.ಎಸ್. ಪ್ರಸಾದ್, ಪುಷ್ಪರಾಜ್, ಸಾಹಿತಿ ಎಸ್.ರಾಮಪ್ರಸಾದ್, ಬಿ.ಕೆ.ಪುಟ್ಟಮಾದಪ್ಪ, ಗಣೇಶ್ ಲಾಡ್, ಸಮಾಜ ಸೇವಕ ಡಾ.ಶಿವರುದ್ರಪ್ಪ, ಚಂದ್ರಶೇಖರ್, ಗಾಯಕ ರೇವಣ್ಣ, ಜಾನಪದ ಪರಿಷತ್ ಕ್ಯಾತನಹಳ್ಳಿ ಪ್ರಕಾಶ್, ಪ್ರಾಂಶುಪಾಲರಾದ ಡಾ.ಕಾವೇರಿ ಪ್ರಕಾಶ್, ವಿನಯ್ ಕುಮಾರ್.ಜೆ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಶೃಂಗೇರಿ ಶಂಕರಮಠದಲ್ಲಿ —

ಪೌರಕಾರ್ಮಿಕ ಮಹಿಳೆಯರಿಂದ ಸಾಮೂಹಿಕ ಲಲಿತ ಸಹಸ್ರನಾಮ ಪಾರಾಯಣ

ಮೈಸೂರು, ಜು.11(ಎಂಕೆ)– ಮೈಸೂರಿನ ಅಗ್ರಹಾರದಲ್ಲಿರುವ ಶೃಂಗೇರಿ ಶಂಕರಮಠದಲ್ಲಿ ಆಷಾಢಮಾಸದ ಅಂಗವಾಗಿ 150ಕ್ಕೂ ಹೆಚ್ಚು ಪೌರಕಾರ್ಮಿಕ ಮಹಿಳೆಯರಿಂದ ಸಾಮೂಹಿಕ ಲಲಿತ ಸಹಸ್ರನಾಮ ಪಾರಾಯಣ ಕಾರ್ಯಕ್ರಮ ಶುಕ್ರವಾರ ನಡೆಯಿತು.

ಚಾಮುಂಡಿಪುರಂನ ಬನ್ನಾರಿಯಮ್ಮ ತಂಡ, ವಿಶ್ವೇಶ್ವರನಗರದ ದೇವಸೇನಾ, ದುರ್ಗಾದೇವಿ, ರೇಣುಕಾ ದೇವಿ, ಕಾಮಾಕ್ಷಿ ದೇವಿ, ಶಾರದಾದೇವಿ, ಕರುಮಾರಿಯಮ್ಮ ಹಾಗೂ ಮೀನಾಕ್ಷಿದೇವಿ ತಂಡ ಸೇರಿದಂತೆ ವಿವಿಧ ತಂಡಗಳಿಂದ ಸಾಮೂಹಿಕವಾಗಿ ಲಲಿತ ಸಹಸ್ರನಾಮ ಕುಂಕುಮಾರ್ಚನೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶಾಸಕ ಟಿ.ಎಸ್. ಶ್ರೀವತ್ಸ ಮಾತನಾಡಿ, ಕಳೆದ ಆರೇಳು ತಿಂಗಳಿಂದ ಶಂಕರಮಠದಲ್ಲಿ ಸಮಾಜಮುಖಿ ಕಾರ್ಯಕ್ರಮಗಳು ನಡೆಯುತ್ತಿವೆ. ಎಲ್ಲಾ ಸಮುದಾಯ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುವ ಮೂಲಕ ಆರಂಭಿಸಿ, ಇಂದು ಪೌರಕಾರ್ಮಿಕ ಮಹಿಳೆಯರಿಂದ ಲಲಿತ ಸಹಸ್ರನಾಮ ಪಾರಾಯಣ ಕಾರ್ಯಕ್ರಮ ನಡೆಯುತ್ತಿದೆ. ಆಚಾರ್ಯರಾದ ಶಂಕರಾಚಾರ್ಯರು, ಮಧ್ವಾಚಾರ್ಯರು, ರಾಮಾನುಜಾಚಾರ್ಯರು ಕೂಡ ಸಮಾಜದಲ್ಲಿ ಅಸಮಾನತೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದರು ಎಂಬುದನ್ನು ಕೇಳಿ ತಿಳಿದು ಕೊಂಡಿದ್ದೆವು. ಆದರೆ, ಇವತ್ತು ಅದರ ಅನುಭವವಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು. ಮಂತ್ರಗಳನ್ನು ಪಠಿಸಲು ಸಂಸ್ಕೃತ ಅಧ್ಯಯನ ಮಾಡಬೇಕು ಎಂಬ ವಿಚಾರದಲ್ಲಿ ಸಂಸ್ಕೃತ ಭಾಷೆ ಕೆಲವರ ಸ್ವತ್ತಲ್ಲ. ದೇವರನ್ನು ಪೂಜಿಸುವ ಶ್ಲೋಕಗಳನ್ನು ಕಲಿಯಲು ಯಾವುದೇ ಜಾತಿಯ ಸಂಕೋಲೆಗಳಿಲ್ಲ. ಎಲ್ಲರಿಗೂ ಒಳಿತಾಗಲಿ ಎನ್ನುವುದಕ್ಕೋಸ್ಕರ ದೇವರ ಧ್ಯಾನ ಮಾಡುವುದಾಗಿದೆ ಎಂದರು.

ವಾಪಸ್ ಕರೆತರುವ ಕೆಲಸ!: ಕಳೆದ ಆರೇಳು ವರ್ಷದ ಹಿಂದೆ ಬಡವರು ಹಾಗೂ ಪೌರಕಾರ್ಮಿಕರು ಇರುವ ಕಾಲೋನಿಗಳಲ್ಲಿ ಮತಾಂತರ ಪ್ರಕ್ರಿಯೆ ನಡೆಯುತ್ತಿತ್ತು. ಮತಾಂತರ ಪ್ರಕಿಯೆ ನಡೆಸಲು ಪೌರಕಾರ್ಮಿಕರ ಕಾಲೋನಿಗಳು ಸೂಕ್ತ ಸ್ಥಳಗಳಾಗಿದ್ದವು. ಇದೆಲ್ಲವನ್ನು ಗಮನಿಸಿ, ಮತಾಂತರ ವಿರುದ್ಧ ಧ್ವನಿ ಎತ್ತಿದ್ದ ಆರ್‌ಎಸ್‌ಎಸ್ ಮತಾಂತರಗೊಂಡವರನ್ನು ಮತ್ತೆ ತಮ್ಮ ಮೂಲ ಧರ್ಮಕ್ಕೆ ವಾಪಸ್ ಕರೆದುಕೊಂಡು ಬರುವ ಕೆಲಸ ಮಾಡುತ್ತಿದೆ ಎಂದು ತಿಳಿಸಿದರು. ನಂತರ ಪೌರಕಾರ್ಮಿಕ ಮಹಿಳೆಯರಿಗೆ ಬಾಗಿನ ನೀಡಲಾಯಿತು. ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಸಂಘಟನಾ ಕಾರ್ಯದರ್ಶಿ ಡಾ.ಲಕ್ಷ್ಮಿದೇವಿ ನಗರಪಾಲಿಕೆ ಮಾಜಿ ಸದಸ್ಯೆ ಸೌಭಾಗ್ಯ ಮೂರ್ತಿ, ಮಹಿಳಾ ಮುಖಂಡರಾದ ಕಲ್ಪನಾ ರಾಮಚಂದ್ರ, ಮಠದ ವ್ಯವಸ್ಥಾಪಕ ಶೇಷಾದ್ರಿ, ಮುಖಂಡರಾದ ಹರೀಶ್, ಎಂ.ಆರ್.ಬಾಲಕೃಷ್ಣ, ಅಜಯ್‌ಶಾಸ್ತ್ರಿ, ರಂಗನಾಥ್ ಮತ್ತಿತರರಿದ್ದರು.



ಮೈಸೂರಿನ ಶೃಂಗೇರಿ ಶಂಕರಮಠದಲ್ಲಿ ನಡೆದ ಸಾಮೂಹಿಕ ಲಲಿತ ಸಹಸ್ರನಾಮ ಪಾರಾಯಣ ಕಾರ್ಯಕ್ರಮದಲ್ಲಿ ಪೌರಕಾರ್ಮಿಕ ಮಹಿಳೆಯರಿಗೆ ಬಾಗಿನ ವಿತರಣೆ ಮಾಡಲಾಯಿತು.

ಮೇಕೆಗಳ ಕಳವು; ಸಂತೆಯಲ್ಲಿ ಮಾರುತ್ತಿದ್ದವನು ವಶಕ್ಕೆ

ಮೈಸೂರು, ಜು.11– ಮೈಸೂರಿನಲ್ಲಿ ಕದ್ದ ಮೇಕೆಗಳನ್ನು ಪಾಂಡವಪುರ ಸಂತೆಯಲ್ಲಿ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಮೇಕೆಗಳ ಮಾಲೀಕ ಸ್ನೇಹಿತನ ನೆರವಿನಿಂದ ಹಿಡಿದು ಪೊಲೀಸರಿಗೆ ಒಪ್ಪಿಸಿರುವ ಘಟನೆ ನಡೆದಿದೆ.

ಮೇಕೆ ಹಾಗೂ ಹಸು ಸಾಕಾಣಿಕೆ ಮತ್ತು ಮಾರಾಟ ಮಾಡುವ ರಾಮಕೃಷ್ಣನಗರ ಐ ಬ್ಲಾಕ್ ನಿವಾಸಿ ರವಿಕುಮಾರ್ ನೀಡಿದ ದೂರಿನನ್ವಯ, ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕಳ್ಳನೆಂದು ಕರೆತಂದು ವಶಕ್ಕೆ ನೀಡಿರುವ ವ್ಯಕ್ತಿಯ ವಿಚಾರಣೆ ನಡೆಸುತ್ತಿದ್ದಾರೆ.

ರವಿಕುಮಾರ್ ಬಳಿ ಸದ್ಯ 22 ಹಸು ಹಾಗೂ 10 ಮೇಕೆಗಳಿವೆ. ನಿನ್ನೆ ಮುಂಜಾನೆ 5.30ರ ಸಮಯದಲ್ಲಿ ಕೊಟ್ಟಿಗೆಯಲ್ಲಿದ್ದ 7 ಮೇಕೆಗಳನ್ನು ಕಾಂಪೌಂಡ್ ಒಳಗೆ ಬಿಟ್ಟು, ಹಸುಗಳ ಹಾಲು ಕರೆದು ಡೈರಿಗೆ ಹೋಗಿ ಬರುವಷ್ಟರಲ್ಲಿ ಸ್ನೇಹಿತ ಮಧು ಕರೆ ಮಾಡಿದ್ದಾರೆ. ನಿನ್ನ 2 ಮೇಕೆಗಳು ಪಾಂಡವಪುರ ಸಂತೆಯಲ್ಲಿವೆ, ಯಾರಿಗಾದರೂ ಮಾರಾಟ ಮಾಡಿದೆಯಾ ಎಂದು ಕೇಳಿದ್ದಾರೆ. ಆಗ ರವಿಕುಮಾರ್ ಗಾಬರಿಯಿಂದ ಹೋಗಿ ನೋಡಿದಾಗ 4 ಮೇಕೆಗಳು ಇರಲಿಲ್ಲ. ಕೂಡಲೇ ಸ್ನೇಹಿತ ಮಧುಗೆ ವಿಷಯ ತಿಳಿಸಿದ್ದಾರೆ. ಬಳಿಕ ಅವರು ಸಂತೆಯಲ್ಲಿ ಮೇಕೆ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಹಿಡಿದುಕೊಂಡಿದ್ದಾರೆ. ಕೂಡಲೇ ರವಿ ಕುಮಾರ್ ಪಾಂಡವಪುರಕ್ಕೆ ಹೋಗಿ ಆ ವ್ಯಕ್ತಿಯನ್ನು ಹಿಡಿದು ತಂದು, ಪೊಲೀಸರಿಗೆ ಒಪ್ಪಿಸಿದ್ದಾರೆ.

ನಾಯಕತ್ವ ಗೊಂದಲ ಹಿನ್ನೆಲೆ

ಉಸ್ತುವಾರಿ ಸುರ್ಜೇವಾಲ ಬದಲಾವಣೆಗೆ ಸಿಎಂ ಸಿದ್ದರಾಮಯ್ಯ ಬಣ ಕಾರ್ಯತಂತ್ರ

ಬಹಿರಂಗವಾಗಿಯೇ ಹರಿಹಾಯ್ದ ಸಚಿವ ಕೆ.ಎನ್. ರಾಜಣ್ಣ

ಬೆಂಗಳೂರು, ಜು.11– ಐದು ವರ್ಷಗಳ ಕಾಲ ನಾನೇ ಮುಖ್ಯಮಂತ್ರಿ ಎಂದು ಹೇಳುವ ಮೂಲಕ ಮುಖ್ಯಮಂತ್ರಿ ಬದಲಾವಣೆ ಕುರಿತಾದ ಚರ್ಚೆಗಳಿಗೆ ಸಿದ್ದರಾಮಯ್ಯ ತೆರೆ ಎಳೆದ ಬೆನ್ನಲ್ಲೇ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಬದಲಾವಣೆಗೆ ವೇದಿಕೆ ಸಜ್ಜುಗೊಳ್ಳತೊಡಗಿದೆ.

ಸುರ್ಜೇವಾಲ ಅವರ ಕಾರ್ಯವೈಖರಿಯ ಬಗ್ಗೆ ಮೊದಲಿನಿಂದಲೂ ಅಸಮಾಧಾನಗೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಇದೀಗ ತಮ್ಮ ಆಪ್ತ ಬಣದ ಮೂಲಕ ಸುರ್ಜೇವಾಲ ಹಠಾವೋ ತಂತ್ರ ರೂಪಿಸತೊಡಗಿದ್ದಾರೆ.

ಸದ್ಯ ಉಂಟಾಗಿದ್ದ ನಾಯಕತ್ವ ಬದಲಾವಣೆ ಕುರಿತಾದ ಚರ್ಚೆಗೆ ಸುರ್ಜೇವಾಲ ಅವರೇ ಕಾರಣ. ಅನುದಾನ ಹಂಚಿಕೆ ಮತ್ತು ಕೆಲವು ಮಂತ್ರಿಗಳ ಬಗ್ಗೆ ಶಾಸಕರು ಹೊಂದಿರುವ ಅಪಸ್ವರವನ್ನೇ ಪ್ರಮುಖವಾಗಿಟ್ಟುಕೊಂಡು ಬೆಂಗಳೂರಿಗೆ ಆಗಮಿಸಿದ ಅವರು ಪ್ರತಿಯೊಬ್ಬ ಕಾಂಗ್ರೆಸ್ ಶಾಸಕರ ಜೊತೆಗೆ ವೈಯಕ್ತಿಕವಾಗಿ ಮಾತನಾಡುವ ಮೂಲಕ ಗೊಂದಲ ಮೂಡಿಸಿದ್ದಾರೆ. ಸರ್ಕಾರದ ಕಾರ್ಯವೈಖರಿ ಮಂತ್ರಿಗಳ ಕುರಿತಾಗಿ ಶಾಸಕರ ಅಭಿಪ್ರಾಯ ಕೇಳಿದ ಅವರು ಇದರ ಜೊತೆಯಲ್ಲೇ ರಾಜ್ಯದಲ್ಲಿ ನಾಯಕತ್ವ ಬದಲಾವಣೆಯಾಗಬೇಕಾ, ಮುಖ್ಯಮಂತ್ರಿ ಬದಲಾಯಿಸಿದರೆ ನಿಮ್ಮ ನಿಲುವು ಏನಾಗಲಿದೆ ಎಂಬ ಪ್ರಶ್ನೆ ಕೇಳುವ ಮೂಲಕ ಅನಗತ್ಯ ಗೊಂದಲ ಮೂಡಿಸಿದ್ದಾರೆ ಎಂದು ಸಿದ್ದರಾಮಯ್ಯ ಆಪ್ತ ಬಣ ಆಪಾದಿಸಿದೆ.

ರಾಜ್ಯ ಕಾಂಗ್ರೆಸ್ಸಿನಲ್ಲಿ ನಾಯಕತ್ವ ವಿಚಾರವಾಗಿ ಗೊಂದಲ ಉಂಟಾಗಲು ಇವರ ವರ್ತನೆಯ ಕಾರಣವಾಗಿದೆ. ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಹಲವಾರು ಕಾರಣಗಳ ಮೂಲಕ ಇವರು ಅನಗತ್ಯ ಹಸ್ತಕ್ಷೇಪ ಮಾಡುತ್ತಿದ್ದಾರೆ. ಹೀಗಾಗಿ ಇವರನ್ನು ಬದಲಾಯಿಸಿ ಸರ್ಕಾರ ಮತ್ತು ಪಕ್ಷದ ನಡುವೆ ಉತ್ತಮ ಸಮನ್ವಯ ಸಾಧಿಸುವ ಮೂಲಕ ಪಕ್ಷ ಸಂಘಟನೆಗೆ ಶ್ರಮಿಸುವ ವ್ಯಕ್ತಿಯನ್ನು ರಾಜ್ಯ ಕಾಂಗ್ರೆಸ್ ಉಸ್ತುವಾರಿಯಾಗಿ ನೇಮಿಸಬೇಕು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರಿಗೆ ಮನವಿ ಸಲ್ಲಿಸಲು ತೀರ್ಮಾನಿಸಿದ್ದಾರೆ ಎಂದು ಗೊತ್ತಾಗಿದೆ.



ಕೆ.ಎನ್.ರಾಜಣ್ಣ

ಸಮಾಧಾನ ತಂದಿಲ್ಲ: ಈ ನಡುವೆ ಸುರ್ಜೇವಾಲಾ ಅವರ ಕಾರ್ಯವೈಖರಿಯ ಬಗ್ಗೆ ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿರುವ ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರು ರಾಜ್ಯ ಕಾಂಗ್ರೆಸ್ ಉಸ್ತುವಾರಿಯಾಗಿ ಅವರು ನಡೆದುಕೊಳ್ಳುತ್ತಿರುವ ರೀತಿ ತಮಗೆ ಸಮಾಧಾನ ತಂದಿಲ್ಲ ಎಂದು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಶಾಸಕರು ಅಸಮಾಧಾನ ಹೊಂದಿದ್ದಾರೆ ಎಂಬ ನೆಪದಲ್ಲಿ ಸುರ್ಜೇವಾಲ ರಾಜ್ಯಕ್ಕೆ ಭೇಟಿ ನೀಡಿ ಅಭಿಪ್ರಾಯ ಸಂಗ್ರಹಿಸಿರುವುದು ತರವಲ್ಲ.ಅವರು ಬಂದು ನಡೆಸಿದ ಪ್ರಕ್ರಿಯೆ ಬಗ್ಗೆ ನನಗೆ ಸಮಾಧಾನವಿಲ್ಲ ಎಂದು ಹೇಳಿದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಜಯಂತಿ ನಟರಾಜನ್ ಅವರು ತೆಲಂಗಾಣಕ್ಕೆ ಭೇಟಿ ನೀಡಿದ್ದರು. ಅವರು ಅಲ್ಲಿ ಒಂದೇ ದಿನಕ್ಕೆ ವಾಪಸ್ ಹೋಗಿದ್ದಾರೆ. ಆದರೆ ರಾಜ್ಯದಲ್ಲಿ ಏನಾಗಿದೆ ನೋಡಿ ಎಂದು ಪ್ರಶ್ನಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪಕ್ಷದ ಹೈಕಮಾಂಡ್, ಇಲ್ಲವೆ ಶಾಸಕರು ಬದಲಾವಣೆ ಮಾಡಬೇಕು. ಶಾಸಕರು ಬದಲಾಯಿಸಲು ತಯಾರಿಲ್ಲ. ಹೈಕಮಾಂಡ್ ಸಹ ಬದಲಾವಣೆ ಮಾಡುವುದಿಲ್ಲ ಅಂದುಕೊಂಡಿದ್ದೇನೆ ಎಂದರು. ದೇಶದಲ್ಲಿ ಹಿಂದುಳಿದ ವರ್ಗಗಳನ್ನು ಸಂಘಟಿಸುವ ದೃಷ್ಟಿಯಿಂದ ಎಐಸಿಸಿ ರಚಿಸಿರುವ ಒಬಿಸಿ ಸಲಹಾ ಮಂಡಳಿ ನಾಯಕತ್ವವನ್ನು ಸಿದ್ದರಾಮಯ್ಯ ಒಪ್ಪಿಕೊಳ್ಳುವುದು ಅನುಮಾನ. ಅವರಿಗೆ ಹಿಂದಿ ಬರುವುದಿಲ್ಲ. ರಾಷ್ಟ್ರ ಮಟ್ಟಕ್ಕೆ ಹೋಗಿ ಏನು ಮಾಡುತ್ತಾರೆ. ದೆಹಲಿಯಲ್ಲಿ ಹಿಂದಿ ಬರದಿದ್ದರೆ ಏನೂ ನಡೆಯುವುದಿಲ್ಲ ಎಂದು ತಿಳಿಸಿದರು.

ನಾಳೆ ಮೈಸೂರಲ್ಲಿ ಗುಣಮಟ್ಟ ಪರಿಕಲ್ಪನೆ ಕುರಿತು ಕಾರ್ಯಕ್ರಮ

ಮೈಸೂರು, ಜು.11(ಜಿಎ)–ಕ್ವಾಲಿಟಿ ಸರ್ಕಲ್ ಫೋರಂ ಇಂಡಿಯಾ ಮೈಸೂರು ವಿಭಾಗದ ವತಿಯಿಂದ ಜು.13 ರಂದು ಬೆಳಗ್ಗೆ 8.30ಕ್ಕೆ ನಗರದ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜು ಸಭಾಂಗಣದಲ್ಲಿ ಗುಣಮಟ್ಟ ಪರಿಕಲ್ಪನೆ ವಿಷಯ ಕುರಿತ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಲಹೆಗಾರ ಟಿ.ವಿ. ವೆಂಕಟರಾಮ್ ಈ ವಿಷಯ ತಿಳಿಸಿ, ಕಾಲೇಜು ಪ್ರಾಚಾರ್ಯರಾದ ಡಾ.ಬಿ.ಸದಾಶಿವೇಗೌಡ, ನಾಗರಾಜ ಗರ್ಗೇಶ್ವರಿ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಸಂಸ್ಥೆಯ ಮೈಸೂರು ವಿಭಾಗದ ಅಧ್ಯಕ್ಷರಾದ ಆರ್.ಸಿ. ಸುಚಿತ್ರಾ ಅಧ್ಯಕ್ಷತೆ ವಹಿಸುವರು. ಇದೇ ವೇಳೆ ಗುಣಮಟ್ಟ ಕುರಿತ ಸ್ಪರ್ಧೆಗಳಲ್ಲಿ ಪಾಲ್ಗೊಂಡವರಿಗೆ ಬಹುಮಾನ ವಿತರಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷ ಅಬ್ದುಲ್ ಕರೀಂ ಉಪಸ್ಥಿತರಿದ್ದರು.

ನೂತನ ಡಿಸಿಪಿ ಬಿಂದುಮಣಿ ಅವರಿಗೆ ಅಭಿನಂದನೆ

ಇತ್ತೀಚೆಗೆ ಮೈಸೂರು ನಗರದ ಉಪಪೊಲೀಸ್ ಆಯುಕ್ತ (ಕಾನೂನು ಹಾಗೂ ಸುವ್ಯವಸ್ಥೆ) ರಾಗಿ ಅಧಿಕಾರ ಸ್ವೀಕರಿಸಿದ ಬಿಂದು ಮಣಿ ಅವರನ್ನು ಖ್ಯಾತ ಲೇಖಕ ಹಾಗೂ ಡಿಆರ್‌ಡಿಒ ಮಾಜಿ ಪ್ರಧಾನ ಸಾರ್ವಜನಿಕ ಸಂಪರ್ಕ ಅಧಿಕಾರಿ ಜಯಪ್ರಕಾಶ್ ರಾವ್, ಜೆಪಿ ನಗರ ಹಿರಿಯ ನಾಗರಿಕರ ಸಂಘ ಹಾಗೂ ಅಖಿಲ ಭಾರತೀಯ ಸಾರ್ವಜನಿಕ ಸಂಪರ್ಕ ಪರಿಷತ್ತು ಪರವಾಗಿ ತಾವು ಬರೆದ ಮಾಜಿ ರಾಷ್ಟ್ರಪತಿ ಡಾ.ಅಬ್ದುಲ್ ಕಲಾಂ ಅವರ ಜೀವನ ಚರಿತ್ರೆ 'ಅಗ್ನಿಯ ರೆಕ್ಕೆಗಳು' ಪುಸ್ತಕ ನೀಡಿ ಅಭಿನಂದಿಸಿದರು.



ಕೆಪಿಎಸ್‌ಗಳಲ್ಲಿ ಎಲ್‌ಕೆಜಿಯಿಂದ ಪಿಯುಸಿವರೆಗಿನ ವಿದ್ಯಾರ್ಥಿಗಳಿಗೆ ಸಾರಿಗೆ ಬಸ್‌ನಲ್ಲಿ ಉಚಿತ ಪ್ರಯಾಣ

ಬೆಂಗಳೂರು, ಜು. 11(ಕೆಎಂಶಿ)– ರಾಜ್ಯಾದ್ಯಂತ ಕರ್ನಾಟಕ ಪಬ್ಲಿಕ್ ಶಾಲೆ (ಕೆಪಿಎಸ್)ಗಳಲ್ಲಿ ವ್ಯಾಸಂಗ ಮಾಡುವ ಎಲ್‌ಕೆಜಿಯಿಂದ ಪಿಯುಸಿವರೆಗಿನ ವಿದ್ಯಾರ್ಥಿಗಳಿಗೆ ರಾಜ್ಯ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸಲು ನಿರ್ಧರಿಸಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.



ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಸರ್ಕಾರಿ ಶಾಲೆಗಳನ್ನು ಬಲಪಡಿಸುವ ಪ್ರಮುಖ ಹೆಜ್ಜೆಯಾಗಿ ಹಾಗೂ ಶಾಲಾ ಮಕ್ಕಳ ಭವಿಷ್ಯ ಉಜ್ವಲಗೊಳಿಸಲು ಸರ್ಕಾರ ಬದ್ಧವಾಗಿದೆ ಎಂದಿದ್ದಾರೆ.

ಸರ್ಕಾರಿ ಶಾಲಾ ಮಕ್ಕಳ ಹಾಜರಾತಿ, ಗುಣಮಟ್ಟ ಹೆಚ್ಚಿಸಲು ಈ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ. ಬಡವರ ಮಕ್ಕಳಿಗೆ ಶೈಕ್ಷಣಿಕ ಹಾಗೂ ಆರ್ಥಿಕ ಬಲ ನೀಡುವುದು ಸರ್ಕಾರದ ಚಿಂತನೆಯಾಗಿದ್ದು, ಸರ್ಕಾರಿ ಶಾಲೆಗಳ ಸಬಲೀಕರಣಕ್ಕೂ ಈ ಸೌಲಭ್ಯ ಸಹಾಯಕವಾಗಲಿದೆ.

ಈಗಾಗಲೇ ಕರ್ನಾಟಕ ಸರ್ಕಾರ ಕಳೆದ ಒಂದು ವರ್ಷಕ್ಕೂ ಹೆಚ್ಚು ಸಮಯದಿಂದ ಶಕ್ತಿ ಯೋಜನೆ ಮೂಲಕ ಮಹಿಳೆಯರಿಗೆ ಉಚಿತ ಬಸ್ ಸೇವೆ ಒದಗಿಸುತ್ತಿದ್ದು, ರಾಜ್ಯಾದ್ಯಂತ ಮಹಿಳೆಯರು ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಉಚಿತ ಟಿಕೆಟ್ ಪಡೆದು ಸಂಚರಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಇಂದು ಕೆಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಜು.11– ಮೇಟಗಳ್ಳಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ಕಾರ್ಯ ನಿಮಿತ್ತ ಮೇಟಗಳ್ಳಿ ಕೈಗಾರಿಕಾ ಪ್ರದೇಶ, ಹೆಬ್ಬಾಳ್ ಕೈಗಾರಿಕಾ ಪ್ರದೇಶ, ರೈಲ್ವೆ ಲೇಔಟ್ ಸುತ್ತಮುತ್ತ, ತ್ರಿವೇಣಿ ಗೇರ್ಸ್ ಸುತ್ತಮುತ್ತ, Baruka, ವಾಜಮಂಗಲ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಜೆ.ಎಸ್.ಎಸ್ ಬಡಾವಣೆ 2ನೇ ಹಂತ, ಲಾಲ್ ಬಹದ್ದೂರ್ ಶಾಸ್ತ್ರಿ ನಗರ, ಶಾಂತ ವೇರಿ ಗೋಪಾಲಗೌಡ ನಗರ, ಸುಖದಾಯಿ ಬಡಾವಣೆ, ಸಹೃದಯ ಬಡಾವಣೆ, ಸಪ್ತ ಮಾತೃಕ ಬಡಾವಣೆ, ಯಾಂದಳ್ಳಿ ಗ್ರಾಮ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ಜುಲೈ 12 ರಂದು ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ನಿಧನ

ಎಸ್.ಪಿ. ಚಂದ್ರಕಾಂತ್




ಮೈಸೂರು, ಜು.11– ಮೈಸೂರಿನ ಕೈಗಾರಿಕೋದ್ಯಮಿ ಎಸ್.ಪಿ. ಚಂದ್ರಕಾಂತ್ (87) ಶುಕ್ರವಾರ ರಮಾವಿಲಾಸ ರಸ್ತೆ ಮಲ್ಲಮ್ಮ ಮರಿಮಲ್ಲಪ್ಪ ಶಿಕ್ಷಣ ಸಂಸ್ಥೆ ಎದುರಿನ ತಮ್ಮ ಸ್ವಗೃಹದಲ್ಲಿ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶನಿವಾರ ಬೆಳಗ್ಗೆ 10.30 ಗಂಟೆ ನಂತರ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರ ಘಾಟ್‌ನಲ್ಲಿ ನೆರವೇರುವುದೆಂದು ಕುಟುಂಬದ ಮೂಲಗಳು ತಿಳಿಸಿವೆ.

ಮಂಜುನಾಥ್



ಮೈಸೂರು: ಮೈಸೂರಿನ ಮೇಟಗಳ್ಳಿ ನಿವಾಸಿ ಚಿಕ್ಕ ಅರಸಯ್ಯ ಅವರ ಪುತ್ರ ಮಂಜುನಾಥ್ (33) ಶುಕ್ರವಾರ ನಿಧನರಾದರು. ಅವಿವಾಹಿತರಾದ ಅವರು, ತಂದೆ, ತಾಯಿ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಮೇಟಗಳ್ಳಿ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರೊ. ಕೆಂಪವೀರಯ್ಯ



ಮೈಸೂರು: ಮೈಸೂರು ಮಹಾರಾಣಿ ಕಾಲೇಜು ನಿವೃತ್ತ ಪ್ರೊಫೆಸರ್ ವಿ.ಕೆಂಪವೀರಯ್ಯ (84) ಅವರು ಅನಾರೋಗ್ಯದಿಂದ ಸರಸ್ವತಿಪುರಂನಲ್ಲಿರುವ ತಮ್ಮ ನಿವಾಸದಲ್ಲಿ ಶುಕ್ರವಾರ ನಿಧನರಾದರು. ಶನಿವಾರ (ಜು.12) ಮಧ್ಯಾಹ್ನ 12 ಗಂಟೆಗೆ ಮೈಸೂರಿನ ಕೆ.ಜಿ.ಕೊಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ದಿವಂಗತರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.07.2025 ಶನಿವಾರ, ಮಳೆ ನಕ್ಷತ್ರ: ಪುನರ್ವಸು, 6.07.2025 ರಿಂದ 19.07.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಉಷಾ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ವೆರಿಕೋಸ್ ವೇನ್ಸ್ ಮತ್ತು ವೆರಿಕೋಸ್ ಅಲ್ಸರ್‌ಗಳ ಚಿಕಿತ್ಸಾ ಶಿಬಿರ, ಡಯಾಬಿಟಿಕ್ ರೆಟಿನೋಪತಿ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಕಣ್ಣಿನ ಪೊರೆ, ದೃಷ್ಟಿದೋಷ, ಮಧುಮೇಹದಿಂದ ಉಂಟಾಗುವ ಕಣ್ಣಿನ ಕಾಯಿಲೆ, ರಾತ್ರಿ ಕುರುಡುತನ ಉಚಿತ ಚಿಕಿತ್ಸಾ ಶಿಬಿರ, ಕುತ್ತಿಗೆ ನೋವು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ವಿಜಯ ವಿಠ್ಠಲ ವಿದ್ಯಾಸಂಸ್ಥೆ :** ಶ್ರೀಮತಿ ನಂಜನಗೂಡು ತಿರುಮಲಾಂಬ ಅವರಿಗೆ ನುಡಿನಮನ, ಎ. ಅನಂತ ಅಯ್ಯಂಗಾರ್ ಮತ್ತು ಕಮಲಮ್ಮ ಸ್ಮರಣಾರ್ಥ ದತ್ತಿ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ : ವಿಜಯ ವಿಠ್ಠಲ ವಿದ್ಯಾಸಂಸ್ಥೆ ಕಾರ್ಯದರ್ಶಿ ಸಿ.ಎ. ವಿಶ್ವನಾಥ್, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ವಿಜ್ಞಾನ ಸಾಹಿತಿ ನಂಜನಗೂಡು ಸತ್ಯನಾರಾಯಣ ಅವರಿಂದ ಉಪನ್ಯಾಸ, ಉಪಸ್ಥಿತರು : ಹಿರಿಯ ಸಮಾಜ ಸೇವಕ ಡಾ. ಪುಷ್ಪಾ ಅಯ್ಯಂಗಾರ್, ಸ್ಥಳ: ವಿಜಯ ವಿಠ್ಠಲ ವಿದ್ಯಾಸಂಸ್ಥೆ, ಸರಸ್ವತಿಪುರಂ, ಬೆಳಗ್ಗೆ 9.30ಕ್ಕೆ.

■ **ಅಮೃತ ಕೃಪಾ ಆಸ್ಪತ್ರೆ :** ಅಮೃತ ಜ್ಯೋತಿ ಉಚಿತ ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಅಮೃತಕೃಪಾ ಆಸ್ಪತ್ರೆ, ರೂಪಾನಗರ, ಬೆಳಗ್ಗೆ 10 ರಿಂದ.

■ **ಶ್ರೀ ಪ್ರಸನ್ನ ಸಾಯಿ ಮಂದಿರ :** 87ನೇ ಗುರುಪೂರ್ಣಿಮಾ ಮಹೋತ್ಸವ, ಬೆಳಗ್ಗೆ 7.30ಕ್ಕೆ ಕಾಕಡಾರತಿ, ರಾತ್ರಿ 10.30ಕ್ಕೆ ಶ್ರೀ ಶ್ರೀ ಸಾಯಿಬಾಬಾರವರ ವಿಜೃಂಭಣೆ ಉತ್ಸವ, ಸ್ಥಳ: ಶ್ರೀ ಪ್ರಸನ್ನ ಸಾಯಿ ಮಂದಿರ, ತ್ಯಾಗರಾಜ ರಸ್ತೆ, ಕೆ.ಆರ್. ಮೊಹಲ್ಲಾ.

■ **ಜಾಗತಿಕ ಲಿಂಗಾಯತ ಮಹಾಸಭಾ, ಜಿಲ್ಲಾ ಘಟಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಜಯಪುರದ ವಚನ ಸಂಗ್ರಹ ಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋ ಧನಾ ಕೇಂದ್ರ :** ವಚನ ಸಂಗ್ರಹ ಪಿತಾಮಹ ಡಾ.ಫಕೀರಪ್ಪ ಗುರುಬಸಪ್ಪ ಹಳಕಟ್ಟಿ ಅವರ ಜಯಂತ್ಯುತ್ಸವ ಹಾಗೂ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ, ಸಾನ್ನಿಧ್ಯ: ಶ್ರೀ ಹೊಸಮಠದ ಚಿದಾನಂದ ಸ್ವಾಮೀಜಿ, ಉದ್ಘಾಟನೆ ; ಪ್ರೊ.ಅರವಿಂದ ಮಾಲಗತ್ತಿ, ಕಿರು ಪುಸ್ತಕ ಬಿಡುಗಡೆ : ಶ್ರೀ ನಟರಾಜ ಸ್ವಾಮೀಜಿ, ಸಮ್ಮುಖ : ಶ್ರೀ ರಾಮ ಯೋಗೀಶ್ವರ ಮಠದ ಶ್ರೀ ಶಿವಬಸವ ಸ್ವಾಮೀಜಿ, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಆನಂದಕುಮಾರ್ ಕಂಬಳಿಹಾಳ್ ವಚನ ಗಾಯನ, ಸ್ಥಳ: ಶ್ರೀ ಹೊಸಮಠ, ಬೆಳಗ್ಗೆ 10.30ಕ್ಕೆ

■ **ಚಾಮರಾಜೇಶ್ವರಿ ಅಕ್ಕನ ಬಳಗ :** ಪ್ರಥಮ ವಾರ್ಷಿಕೋತ್ಸವ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಶ್ರೀಮತಿ ಗೀತಾ ಮಹದೇವಪ್ರಸಾದ್, ಅಧ್ಯಕ್ಷತೆ : ಪಿಂಚಣಿ ಮತ್ತು ಸಣ್ಣ ಉಳಿತಾಯ ಇಲಾಖೆ ನಿರ್ದೇಶಕರಾದ ಶ್ರೀಮತಿ ಶಾಂತಾ ಎಲ್. ಹುಲಮನಿ, ಮುಖ್ಯ ಅತಿಥಿಗಳು : ಹಿರಿಯ ಪ್ರಾಧ್ಯಾಪಕ ಡಾ. ಡಿ.ಎಸ್. ಗುರು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಉಪಾಧ್ಯಕ್ಷ ಎಂ. ಚಿನ್ನಸ್ವಾಮಿ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಬೆಳಗ್ಗೆ 10.30ಕ್ಕೆ.

■ **ಮೈಸೂರು ಉತ್ತರ ರೋಟರಿ ಸಮುದಾಯ ದಳ :** ಪದಗ್ರಹಣ ಸಮಾರಂಭ, ಉಪಸ್ಥಿತರು : ಆರ್‌ಸಿಸಿ ಜಿಲ್ಲಾ ಉಪಾಧ್ಯಕ್ಷ ರೋ. ಎಸ್.ಎನ್. ರಾಘವೇಂದ್ರ, ಯಶಸ್ವಿ ಎಸ್. ಸೋಮಶೇಖರ್, ಎಸ್.ಎಚ್. ಜಗದೀಶ್, ಎನ್. ಸಂದೇಶ್, ಎಂ.ಎಲ್. ನಾಗೇಶ್, ರೋಟರಿ ಮೈಸೂರು ಉತ್ತರ ಅಧ್ಯಕ್ಷ ಎಂ. ಚಂದ್ರಶೇಖರ್, ಆರ್‌ಸಿಸಿ ಕಾರ್ಯಾಧ್ಯಕ್ಷ ಎಂ.ಕೆ. ಶ್ರೀಧರ್, ನಿಯೋಜಿತ ಅಧ್ಯಕ್ಷ ವಿರೂಪಾಕ್ಷ, ಅಧ್ಯಕ್ಷತೆ : ಮೈಸೂರು ಉತ್ತರ ರೋಟರಿ ಸಮುದಾಯ ದಳದ ಗೌರವಾಧ್ಯಕ್ಷ ಸ್ವಾಮಿ (ಎಂ. ರಾಜೇಶ್), ಗೋವಿಂದಸ್ವಾಮಿ, ಸ್ಥಳ: ಗ್ರಾಮ ಪಂಚಾಯಿತಿ ಸಮುದಾಯ ಭವನ, ಇಲವಾಲ, ಬೆಳಗ್ಗೆ 10.30ಕ್ಕೆ.

■ **ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ, ಚೈಲ್ಡ್ ಫಂಡ್ ಇಂಟರ್‌ನ್ಯಾಷನಲ್ :** ಶಿಕ್ಷಣ ಪ್ರತಿ ಮಗುವಿನ ಮೂಲಭೂತ ಹಕ್ಕು ಕುರಿತು ಜಾಗೃತಿ ಹಾಗೂ ಮಕ್ಕಳಿಗೆ ಶೈಕ್ಷಣಿಕ ಸಾಮಾಗ್ರಿಗಳ ವಿತರಣೆ, ಉದ್ಘಾಟನೆ : ಶಾಸಕ ತನ್ವೀರ್ ಸೇಠ್, ಅಧ್ಯಕ್ಷತೆ : ಕರ್ನಾಟಕ ರಾಜ್ಯ ಮಾಹಿತಿ ಹಕ್ಕು ಆಯೋಗದ ಮಾಜಿ ಆಯುಕ್ತ ಚಂದ್ರೇಗೌಡ, ಮುಖ್ಯ ಅತಿಥಿಗಳು : ಅಪರ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು, ಸ್ಥಳ: ಜಗನ್ಮೋಹನ ಅರಮನೆ, ಬೆಳಗ್ಗೆ 11.30ಕ್ಕೆ.

■ **ನಮನ್ ಫೌಂಡೇಷನ್ :** ಪಿರಿಯಾಪಟ್ಟಣದ ನಮನ್ ಫೌಂಡೇಷನ್‌ಗೆ ಕೋಡಿ ಸ್ವಾಮೀಜಿ, ಡಾ. ಶಿವಾನಂದ ಶಿವಯೋಗಿ ರಾಜೇಂದ್ರ ಮಹಾಸ್ವಾಮೀಜಿಗಳ ಕೃತಜ್ಞತಾಪೂರ್ವಕ ಭೇಟಿ, ಸ್ಥಳ: ಕಂಪಲಾಪುರ, ಪಿರಿಯಾಪಟ್ಟಣ, ಮಧ್ಯಾಹ್ನ 3ಕ್ಕೆ.

■ **ಕಲಾ ಗಂಗೋತ್ರಿ ಫೌಂಡೇಷನ್ :** ಶ್ರೀಮತಿ ಅಖಿಲ ಚೇತನ್ ಅವರ ಶಿಷ್ಯೆ ಚಿ. ಇಂಚರ ಮೊಟ್ಟನ (ಶ್ರೀಮತಿ ಉಷಾ ಗಣಪತಿ ಮತ್ತು ಶ್ರೀ ಸುಬ್ರಮಣಿ ಮೊಟ್ಟನ) ಅವರಿಂದ ನೃತ್ಯಾರಾಧನೆ, ಉದ್ಘಾಟನೆ : ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠಾಧೀಶ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಅತಿಥಿಗಳು : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ : ಶ್ರೀ ಸರ್ವೇಶ್ವರ ನೃತ್ಯಕಲಾ ಮಂದಿರದ ಶ್ರೀಮತಿ ವಿದುಷಿ ಪಂಕಜಾ ರಾಮಕೃಷ್ಣ, ಸ್ಥಳ: ರಮಾಗೋವಿಂದ ರಂಗಮಂದಿರ, ಶ್ರೀ ಶಿರಡಿ ಸಾಯಿಬಾಬಾ ಮಂದಿರ ರಸ್ತೆ, ರಾಮಕೃಷ್ಣನಗರ, ಸಂಜೆ 4ಕ್ಕೆ.

■ **ನಿನಾದ್ ಮ್ಯೂಸಿಕಲ್ ಟ್ರಸ್ಟ್, ಪ್ರಸನ್ನ ಫಿಲಂ ಹಿಟ್ಸ್ ಗ್ರೂಪ್ :** ಬಾನಿಗೊಂದು ಎಲ್ಲೆ ಎಲ್ಲಿದೆ ಸಂಗೀತ ಸಂಜೆ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 4.30ಕ್ಕೆ.

■ **ಶ್ರೀ ಶಾರದಾಮೃತಂ ಧ್ಯಾನ ಸೇವಾ ಚಾರಿಟಬಲ್ ಟ್ರಸ್ಟ್, ಶ್ರೀ ದುರ್ಗಾ ಸಪ್ತಶತಿ ಋಷಿ ಪ್ರಜ್ಞಾ ಆಂದೋಲನ :** ನಾಗದೋಷ ಪರಿಹಾರಾರ್ಥವಾಗಿ ಉಚಿತ ಸಾಮೂಹಿಕ ಆಶ್ಲೇಷಾ ಬಲಿಪೂಜೆ, ಸ್ಥಳ: ಚಾಮುಂಡಿಬೆಟ್ಟದ ತಪ್ಪಲು ಬಳಿಯ ಜೇನುಗವಿ ಅವಧೂತ ಶ್ರೀ ನಂಜುಂಡಪ್ಪನವರ ಆಶ್ರಮ, ಸಂಜೆ 4.30 ರಿಂದ.

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 888, ಕಥೆ ಹೇಳುವವರು: ಓಂಕಾರಪ್ರಿಯ ಬಾಗೇಪಲ್ಲಿ, ಸಂಸ್ಥಾಪಕ ಅಧ್ಯಕ್ಷರು, ಕನ್ನಡ ಸಂಸ್ಕೃತಿ ಸೇವಾ ಭಾರತಿ, ಭಾಗ್ಯನಗರ, ಚಿಕ್ಕಬಳ್ಳಾಪುರ ಜಿಲ್ಲೆ, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.

■ **ಕಲಾಸುರುಚಿ, ಕುತೂಹಲಿ–ಕನ್ನಡ, ಸುರುಚಿ ರಂಗಮನೆ :** ಸೈನ್ಸ್ ಸಂಜೆ ಕಾರ್ಯಕ್ರಮ, ನಂ.476, ಚಿತ್ರಭಾನು ರಸ್ತೆ, ಸಿಎಫ್‌ಟಿಆರ್‌ಐ ನಿವೃತ್ತ ವಿಜ್ಞಾನಿ ಬಿ ವಿ ಸತ್ಯೇಂದ್ರರಾವ್ ಅವರಿಂದ 'ಅಕ್ಕಿ' ಕುರಿತು ಕನ್ನಡದಲ್ಲಿ ಭಾಷಣ, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಸಂಜೆ 6.30 ರಿಂದ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ವಿದ್ವಾನ್ ಗಣೇಶ್‌ಶರ್ಮಾ ಅವರಿಂದ ಶ್ರೀಮದ್ ಭಾಗವತ ಪ್ರವಚನ, ಸ್ಥಳ: ಶ್ರೀ ರಾಮಮಂದಿರದ ಆವರಣ, ಶಿವರಾಂಪೇಟೆ, ಸಂಜೆ 6.30 ರಿಂದ 7.45 ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ತತ್ವ ದರ್ಪಣ–ಕೊರಡು ಕೊನರಿಸಿದ ಪಾಶ್ಚಾತ್ಯ ತತ್ವಜ್ಞಾನಿಗಳು, ಪ್ರಸ್ತುತಿ: ಪ್ರೊ.ವಿ.ಎನ್.ಶೇಷಗಿರಿರಾವ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಮನೆಮನೆಯ ಹಣತೆ–ಪ್ರಾಯೋಜಿತ ಸರಣಿ ಕಾರ್ಯಕ್ರಮ, ಪ್ರಾಯೋಜಕರು–ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಬಾಂಬೆ ಎಸ್. ಜಯಶ್ರೀ – ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ–ಜಯಲಕ್ಷ್ಮಮ್ಮ ಮತ್ತು ಸಂಗಡಿಗರಿಂದ ಗಿರಿಜೆ ಹಾಡು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿಹಾಡು, ಭಾಗವಹಿಸುತ್ತಾರೆ–ಬನ್ನೂರು ಯಾಚೇನಹಳ್ಳಿಯ ಚೆನ್ನಾಜಮ್ಮ ಮತ್ತು ಸಂಗಡಿಗರು, ಪ್ರಸ್ತುತಿ–ಡಾ. ಮೈಸೂರು ಉಮೇಶ್, 3.30 ಮಕ್ಕಳ ಮಂಟಪ–ಡಿ.ಎ.ವಿ. ಪಬ್ಲಿಕ್ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ–ಗೋವಿಂದನ ಹಾಡು, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ), 6.50 ಕೃಷಿರಂಗ:ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮೌಲ್ಯವರ್ಧನೆಯ ಪ್ರಾಮುಖ್ಯತೆ ಕುರಿತು ಸಂವಾದ ಭಾಗವಹಿಸುತ್ತಾರೆ–ಚಾಮರಾಜನಗರದ ಮೀನಾಕ್ಷಿ ಹಾಗೂ ಅವರ ಮಗ ಸಿ.ವಿ. ಶ್ರೀನಿಧಿ, ಪ್ರಸ್ತುತಿ: ಎನ್. ಕೇಶವಮೂರ್ತಿ, 8.00 ಸವಿನೆನಪು, 8.30 ಹಿಂದಿ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಮೊಹಮದ್ ಸಮಿ– ತಬಲ ವಾದನ, ಮನ್‌ಮೋಹನ್ ನಾಯಕ್–ಪಖ್ವಾಜ್ ವಾದನ

ಮಹಿಳಾ ಸ್ವಸಹಾಯ ಗುಂಪುಗಳ ಸದಸ್ಯರ ಸಾಲ ಮರುಪಾವತಿಯಲ್ಲಿ ಲಕ್ಷಾಂತರ ದುರುಪಯೋಗ ಆರೋಪ

ಮುಖ್ಯ ಪುಸ್ತಕ ಬರಹಗಾರರ ವಿರುದ್ಧ ಪ್ರಕರಣ ದಾಖಲು

ಕ್ರೈಂ ಬಾಕ್ಸ್

ಮೈಸೂರು, ಜು.11– ಮಹಿಳಾ ಸ್ವಸಹಾಯ ಗುಂಪುಗಳ ಸದಸ್ಯರ ಸಾಲ ಮರುಪಾವತಿಯ ಲಕ್ಷಾಂತರ ರೂ. ಹಣವನ್ನು ದುರುಪಯೋಗ ಮಾಡಿಕೊಂಡಿರುವ ಆರೋಪದಡಿ ಮುಖ್ಯ ಪುಸ್ತಕ ಬರಹಗಾರರೊಬ್ಬರ ವಿರುದ್ಧ ಮೈಸೂರಿನ ಇಲವಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ತಾಲೂಕು ಗುಂಗ್ರಾಲ್‌ಛತ್ರ ಹಾಗೂ ಆನಂದೂರು ಗ್ರಾಮ ಪಂಚಾಯ್ತಿ ಮಟ್ಟದ ಒಕ್ಕೂಟ ವ್ಯಾಪ್ತಿಯಲ್ಲಿ 2019ರ ಜೂ.18ರಿಂದ 2023ರ ಆ.18ರವರೆಗೆ 37 ಲಕ್ಷಕ್ಕೂ ಹೆಚ್ಚು ಹಣ ದುರುಪಯೋಗ ಮಾಡಿಕೊಳ್ಳಲಾಗಿದೆ ಎಂದು ತಾಲೂಕು ಯೋಜನಾಧಿಕಾರಿ ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಲಾಗಿದೆ.

ಸರ್ಕಾರದ ಆದೇಶದನ್ವಯ ಸಂಜೀವಿನಿ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟದ ಮೂಲಕ ಗ್ರಾಮೀಣ ಮಹಿಳೆಯರಿಗೆ ಸಾಲ ಸೌಲಭ್ಯ ನೀಡಲಾಗುತ್ತಿದೆ. ಗ್ರಾಪಂ ಮಟ್ಟದ ಒಕ್ಕೂಟದಲ್ಲಿನ ಮಹಿಳಾ ಸ್ವಸಹಾಯ ಗುಂಪುಗಳನ್ನು ಗುರುತಿಸಿ, ಅಗತ್ಯವುಳ್ಳ ಸದಸ್ಯರಿಗೆ ಸಾಲ ವಿತರಿಸುವುದರ ಜೊತೆಗೆ ಮರುಪಾವತಿ, ವಸೂಲಾತಿ ಜವಾಬ್ದಾರಿಯನ್ನು ಮುಖ್ಯ ಪುಸ್ತಕ ಬರಹಗಾರರು ನಿರ್ವಹಿಸುತ್ತಾರೆ. ಆದರೆ 2019ರ ಜೂ.18ರಿಂದ 2023ರ ಆ.18ರವರೆಗೆ ಗುಂಗ್ರಾಲ್ ಛತ್ರ ಹಾಗೂ ಆನಂದೂರು ಗ್ರಾಪಂ ಒಕ್ಕೂಟಗಳ ಮುಖ್ಯ ಪುಸ್ತಕ ಬರಹಗಾರರಾಗಿ ಕಾರ್ಯ ನಿರ್ವಹಿಸಿದವರು, ಮಹಿಳಾ ಸ್ವಸಹಾಯ ಸಂಘಗಳಿಂದ ಸಾಲ ಮರು ಪಾವತಿ, ವಸೂಲಾತಿ ಹಣಕ್ಕೆ ರಶೀದಿ ನೀಡಿ ಹಣ ಪಡೆದಿದ್ದಾರೆ. ಆದರೆ ಭಾಗಶಃ ಹಣವನ್ನು ಬ್ಯಾಂಕ್‌ಗೆ ಜಮಾ ಮಾಡದೆ, ನಗದು ಪುಸ್ತಕದಲ್ಲೂ ನಮೂದು ಮಾಡಿಲ್ಲ.

ಲೆಕ್ಕ ಪರಿಶೋಧನೆ ವೇಳೆ ಗುಂಗ್ರಾಲ್ ಛತ್ರ ಗ್ರಾಪಂ ಒಕ್ಕೂಟದಲ್ಲಿ 22,29,112 ರೂ. ಹಾಗೂ ಆನಂದೂರು ಗ್ರಾಪಂ ಒಕ್ಕೂಟದಲ್ಲಿ 15,05,896 ರೂ. ಸೇರಿ ಒಟ್ಟು 37.35 ಲಕ್ಷ ರೂ. ದುರುಪಯೋಗವಾಗಿರುವುದು ದೃಢಪಟ್ಟಿದೆ. ಮುಖ್ಯ ಪುಸ್ತಕ ಬರಹಗಾರರಾಗಿ ಸಾರ್ವಜನಿಕ ಹಣವನ್ನು ದುರುಪಯೋಗಪಡಿಸಿಕೊಂಡು ಸರ್ಕಾರಕ್ಕೆ ವಂಚಿಸಲು ಯತ್ನಿಸಿದ್ದಲ್ಲದೆ, ದಾಖಲೆಗಳನ್ನು ನಾಶ ಮಾಡಲಾಗಿದೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಪಾರ್ಟ್‌ಟೈಂ ಜಾಬ್ ನೆಪದಲ್ಲಿ ಯುವಕನಿಗೆ 6.70 ಲಕ್ಷ ವಂಚನೆ

ಮೈಸೂರು, ಜು.11– ಆನ್‌ಲೈನ್ ಪಾರ್ಟ್‌ಟೈಂ ಜಾಬ್ ನೆಪದಲ್ಲಿ ಯುವಕನಿಗೆ ಆರೂವರೆ ಲಕ್ಷಕ್ಕೂ ಹೆಚ್ಚು ಹಣ ವಂಚಿಸಿರುವ ಬಗ್ಗೆ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಮೇಟಗಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ನಾಗನಹಳ್ಳಿ ಗ್ರಾಮದ 27 ವರ್ಷದ ಯುವಕ, ಇನ್ಸ್ಟಾಗ್ರಾಮ್‌ನಲ್ಲಿ ಕಾಣಿಸಿದ ಪಾರ್ಟ್‌ಟೈಂ ಜಾಬ್ ಜಾಹಿರಾತು ಲಿಂಕ್ ಮೇಲೆ ಕ್ಲಿಕ್ ಮಾಡಿ, ವಂಚಕರ ಬಲೆಗೆ ಸಿಲುಕಿ ಹಣ ಕಳೆದುಕೊಂಡಿದ್ದಾನೆ.

ಪಾರ್ಟ್‌ಟೈಂ ಜಾಬ್ ಮೂಲಕ ಹೆಚ್ಚು ಹಣ ಸಂಪಾದಿಸಬಹುದು ಎಂಬ ಆಸೆಯಿಂದ ಜಾಹಿರಾತು ಲಿಂಕ್ ಮೂಲಕ ಅಪರಿಚಿತ ವ್ಯಕ್ತಿಗೆ ಮೆಸೇಜ್ ಮಾಡಿದ್ದಾನೆ. ಆ ಕಡೆಯಿಂದ ಪ್ರತಿಕ್ರಿಯಿಸಿದ ವ್ಯಕ್ತಿ, ಗೂಗಲ್ ರಿವ್ಯೂ ಜಾಬ್ ಬಗ್ಗೆ ತಿಳಿಸಿ ಮತ್ತೊಂದು ಲಿಂಕ್ ಕಳುಹಿಸಿದ್ದಾನೆ. ಅಲ್ಲದೆ ಟೆಲಿಗ್ರಾಂ ಮೂಲಕವೇ ಮೆಸೇಜ್ ಮಾಡುವಂತೆ ತಿಳಿಸಿದ್ದಾನೆ. ಅದರಂತೆ ಯುವಕ ಟೆಲಿಗ್ರಾಂ ಮೂಲಕ ಸಂಪರ್ಕಿಸಿ, ಹಣ ಹೂಡಿಕೆ ಮಾಡಿ ಗೂಗಲ್ ರಿವ್ಯೂ ಟಾಸ್ಕ್ ಮಾಡಿದ್ದಾರೆ.

ಆರಂಭದಲ್ಲಿ 700 ರೂ., 2 ಸಾವಿರ ಹಾಗೂ 4 ಸಾವಿರ ರೂ. ಹೂಡಿಕೆಗೆ ವಂಚಕರು ಲಾಭ ನೀಡಿ, ನಂಬಿಕೆ ಗಿಟ್ಟಿಸಿಕೊಂಡಿದ್ದಾರೆ. ನಂತರದಲ್ಲಿ ಯುವಕ ಹಂತ ಹಂತವಾಗಿ ವರ್ಗಾವಣೆ ಮಾಡಿದ್ದ ಒಟ್ಟು 6,69,675 ರೂ.ಗೆ ಯಾವುದೇ ಲಾಭ ನೀಡಿಲ್ಲ. ಆತಂಕದಿಂದ ಹಣ ವಾಪಸ್ ಪಡೆಯಲು ಮುಂದಾದಾಗ ಅದೂ ಸಾಧ್ಯವಾಗಿಲ್ಲ. ಎಷ್ಟು ಬಾರಿ ಪ್ರಯತ್ನಿಸಿದರು ಯಾರೂ ಸಂಪರ್ಕಕ್ಕೆ ಸಿಕ್ಕಿಲ್ಲ. ಇದರಿಂದ ಮೋಸ ಹೋಗಿರುವುದು ಅರಿವಾಗಿ ಯುವಕ ಪೊಲೀಸರಿಗೆ ದೂರು ನೀಡಿದ್ದಾನೆ.

ಕೆ.ಆರ್.ಆಸ್ಪತ್ರೆ ರೋಗಿಗಳಿಗೆ ರಾತ್ರಿ ಊಟ ಮಧ್ಯಾಹ್ನವೇ ಪೂರೈಕೆ!

ಒಣಗಿ ತಂಗಳಾದ ಅನ್ನ-ಸಾಂಬಾರ್ ಕಸದ ಬುಟ್ಟಿಗೆ



ಮೈಸೂರಿನ ಕೆ.ಆರ್.ಆಸ್ಪತ್ರೆ



ಒಳರೋಗಿಗಳಿಗೆ ನೀಡಲು ತಯಾರಿಸಿರುವ ಅನ್ನ



ಕಸದ ಬುಟ್ಟಿಯಲ್ಲಿ ಚೆಲ್ಲಿರುವ ಅನ್ನ ಸಾಂಬಾರ್

ಮೈಸೂರು, ಜು.11(ಎಂಕೆ)– ಮೈಸೂರಿನ ದೊಡ್ಡಾಸ್ಪತ್ರೆಯ ಒಳರೋಗಿಗಳಿಗೆ ತಂಗಳು ತಿನ್ನುವ ದೌರ್ಭಾಗ್ಯ... ರಾತ್ರಿ ಊಟ ಮಧ್ಯಾಹ್ನವೇ ವಿತರಣೆ... ಒಣಗಿ ಸಪ್ಪೆಯಾದ ಅನ್ನ–ಸಾರು ಕಸದ ಬುಟ್ಟಿ ಪಾಲಾಗುತ್ತಿದೆ...!

ಹೌದು! ಮೈಸೂರಿನ ದೊಡ್ಡಾಸ್ಪತ್ರೆ ಖ್ಯಾತಿಯ ಕೆ.ಆರ್.ಆಸ್ಪತ್ರೆ, ಚೆಲುವಾಂಬ, ಟ್ರಾಮಾಕೇರ್, ಪಿಕೆಟಿವಿ ಆಸ್ಪತ್ರೆಗಳಲ್ಲಿ ಹೊಟ್ಟೆಗೆ ಸೇರಿ ಹಸಿವನ್ನು ನೀಗಿಸಬೇಕಾದ ಅನ್ನ, ಕಸದ ಬುಟ್ಟಿಪಾಲಾಗುತ್ತಿದೆ. ಅದು ತಿಂದು ಬಿಟ್ಟಿರುವುದಲ್ಲ... ತಿನ್ನಲಾಗದೆ ಬಿಟ್ಟಿರುವ ಅನ್ನ...

ಒಳರೋಗಿಗಳು ಕಾಯಿಲೆ ಅಥವಾ ಇನ್ನಿತರೆ ಆರೋಗ್ಯ ಸಮಸ್ಯೆಗಳಿಂದ ಗುಣಮುಖರಾಗಲಿ, ದೇಹಕ್ಕೆ ಪುಷ್ಟಿ ದೊರಕಲೆಂದೇ ತಾಜಾ ತರಕಾರಿಗಳನ್ನು ಬಳಸಿ ಊಟ–ತಿಂಡಿ ವಿತರಣೆ ಮಾಡುತ್ತಿದ್ದರೂ ಸೂಕ್ತ ಸಮಯದಲ್ಲಿ ನೀಡದಿರುವುದು ರಾಶಿ ರಾಶಿ ಆಹಾರ ಮಣ್ಣು ಸೇರುವಂತೆ ಮಾಡಿದೆ. ತುತ್ತು ಅನ್ನವಿಲ್ಲದೆ ಹಸಿವಿನಿಂದ ನರಳುವವರ ನಡುವೆ, ತಿನ್ನಲು ಸಾಧ್ಯವಾಗದೆ ಕಸದ ಬುಟ್ಟಿಗೆ ಬಿಸಾಡುತ್ತಿರುವ ಅನ್ನ, ಸಾಂಬಾರ್, ತರಕಾರಿ ಪಲ್ಯವನ್ನು ನೋಡಿದರೆ ಶ್ರಮಜೀವಿಗಳ ಕರುಳು ಹಿಂಡಿದಂತಾಗುತ್ತದೆ.

ಆಸ್ಪತ್ರೆಯಲ್ಲಿನ ವೇಳಾ ಪಟ್ಟಿಯ ಪ್ರಕಾರ ಬೆಳಗ್ಗೆ 8.30ಕ್ಕೆ ತಿಂಡಿ(ಇಡ್ಲಿ, ಉಪ್ಪಿಟ್ಟು, ಟೊಮೊಟೊ ಬಾತ್, ಪಲಾವ್, ಟೀ, ಕಾಫಿ, ಬ್ರೆಡ್), ಮಧ್ಯಾಹ್ನ 12 ಗಂಟೆಗೆ ಊಟ(1 ಚಪಾತಿ, ರೈಸ್, ಸಾಂಬಾರ್, ಪಲ್ಯ, ಮೊಸರು), ಸಂಜೆ 4 ಗಂಟೆಗೆ ಕಾಫಿ ಮತ್ತು ಟೀ ಹಾಗೂ ರಾತ್ರಿ ಊಟ ಸಂಜೆ 7 ಗಂಟೆ(1 ಚಪಾತಿ, ರೈಸ್, ಸಾಂಬಾರ್, ಪಲ್ಯ, ಮಜ್ಜಿಗೆ) ವಿತರಣೆ ಯಾಗಬೇಕು. ಆದರೆ, ರಾತ್ರಿ ಊಟವನ್ನು ಮಧ್ಯಾಹ್ನ 3 ರಿಂದ 5 ಗಂಟೆಯೊಳಗೆ ನೀಡುತ್ತಿರುವುದರಿಂದಾಗಿ ರಾತ್ರಿ ವೇಳೆ ತಿನ್ನಲಾಗದೆ ಬಿಸಾಡುತ್ತಿದ್ದಾರೆ.

ರಾತ್ರಿ ಊಟವನ್ನು 5 ಗಂಟೆ ಮುಂಚಿತವಾಗಿ ಅಂದರೆ ಮಧ್ಯಾಹ್ನವೇ ನೀಡುವುದರಿಂದ ರಾತ್ರಿ ವೇಳೆಗೆ ಸಪ್ಪೆಯಾಗಿರೋ ತಂಗಳು ತಿನ್ನಲಾಗದೆ ಬಹುತೇಕ ಒಳರೋಗಿಗಳು ಬಿಸಾಡುತ್ತಿದ್ದಾರೆ. ಹಳೆ ಜಯದೇವ ಕಟ್ಟಡದಲ್ಲಿರುವ ಅನಾಥ ಒಳರೋಗಿಗಳಿಗೆ ಊಟವನ್ನು ಪಾರ್ಸಲ್ ಕವರ್‌ನಲ್ಲಿ ಪ್ಯಾಕ್ ಮಾಡಿ ನೀಡಲಾಗುತ್ತಿದ್ದು, ಆ ಊಟವನ್ನು ತಿನ್ನದೆ ಚೆಲ್ಲುತ್ತಿದ್ದಾರೆ.

ಕೆ.ಆರ್.ಆಸ್ಪತ್ರೆ, ಚೆಲುವಾಂಬ, ಟ್ರಾಮಾಕೇರ್, ಸೂಪರ್ ಸ್ಪೆಷಾಲಿಟಿ, ಪಿಕೆಟಿಬಿ ಸೇರಿ ಪ್ರತಿನಿತ್ಯ ಸುಮಾರು 850 ಮಂದಿ ಒಳ ರೋಗಿಗಳಿಗೆ ದಿನ ಮೂರು ಹೊತ್ತು ಊಟ ವಿತರಣೆ ಮಾಡಲಾಗುತ್ತಿದೆ. ಬೆಳಗ್ಗೆ ಮತ್ತು ಮಧ್ಯಾಹ್ನಕ್ಕಿಂತ ರಾತ್ರಿ ವೇಳೆಯ ಊಟವನ್ನು ಹಲವು ಮಂದಿ ತಿನ್ನದೆ ಹೊರಗಡೆಯ ಹೋಟೆಲ್‌ಗಳಿಂದ ತರಿಸಿ ಕೊಳ್ಳುವುದು ಸಾಮಾನ್ಯವಾಗಿದೆ.

ನೀರು ಬಿಟ್ಟುಕೊಂಡಿರುತ್ತೇ: ಮಧ್ಯಾಹ್ನ ಮಾಡಿರುವ ಅನ್ನ ರಾತ್ರಿ ವೇಳೆಗೆ ನೀರು ಬಿಟ್ಟುಕೊಂಡಂತಾಗಿ ಮೆತ್ತಾಗುತ್ತದೆ. ಸಾಂಬರ್, ರಸಂ ಎಲ್ಲವೂ ತಣ್ಣಗಿರುತ್ತದೆ. ಪ್ರತ್ಯೇಕ ಬಾಕ್ಸ್‌ಗಳಿದ್ದರೆ ಹಾಕಿಸಿಕೊಂಡು ಇಟ್ಟುಕೊಳ್ಳಬಹುದು. ಆದರೆ ಬಾಕ್ಸ್ ಇಲ್ಲದಿದ್ದರೆ ಒಂದೇ ತಟ್ಟೆಗೆ ಚಪಾತಿ, ಅನ್ನ, ಸಾಂಬರ್ ಎಲ್ಲವನ್ನೂ ಹಾಕಿಸಿಕೊಳ್ಳಬೇಕು. ಮಧ್ಯಾಹ್ನ ಅನ್ನಕ್ಕೆ ಸಾಂಬರ್ ಮಿಕ್ಸ್ ಮಾಡಿ ರಾತ್ರಿಯವರೆಗೆ ಇಟ್ಟುಕೊಂಡು ತಿನ್ನಲು ಕಷ್ಟ ಎಂದು ಕೆ.ಆರ್.ಆಸ್ಪತ್ರೆಯ ಕೆಲ ಒಳ ರೋಗಿಗಳು 'ಮೈಸೂರು ಮಿತ್ರ'ನಲ್ಲಿ ತಮ್ಮ ಬವಣೆ ತಿಳಿಸಿದರು.

ಊಟ ಬಿಸಿಯಾಗಿರಲ್ಲ: ರಾತ್ರಿ ವೇಳೆ ಚಳಿ ಇರಲಿದ್ದು, ತಣ್ಣಗಿರುವ ಊಟ ತಿನ್ನೋದು ಕಷ್ಟ, ಊಟ ಬಿಸಿ ಇದ್ದರೆ ಚೆನ್ನಾಗಿರುತ್ತೆ. ಆದರೆ, ಐದಾರು ಗಂಟೆ ಮುಂಚಿತವಾಗಿಯೇ ರಾತ್ರಿ ಊಟ ಕೊಟ್ಟು ತಿಂದರೆ ತಿನ್ನಲ್ಲಿ, ಬಿಟ್ಟರೆ ಬಿಡಲಿ ಎಂಬಂತಾಗಿದೆ. ರೋಗಿಗಳಿಗೆ ಸರಿಯಾದ ಸಮಯಕ್ಕೆ ಊಟ ಕೊಡಬೇಕು ಎನ್ನುವ ಮನಸ್ಥಿತಿಯೂ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಸದ ಬುಟ್ಟಿಯಲ್ಲೆಲ್ಲಾ ಅನ್ನದ ರಾಶಿ: ಬೆಳಗ್ಗೆ ಆಸ್ಪತ್ರೆಯ ವಾರ್ಡ್‌ಗಳಲ್ಲಿ ಕ್ಲೀನ್ ಮಾಡುವಾಗ ಕಸದ ಬುಟ್ಟಿಗಳನ್ನು ನೋಡಿದರೆ ಅನ್ನ–ಸಾಂಬಾರ್ ತುಂಬಿರಲಿದೆ. ಅಲ್ಲದೆ ಪ್ಯಾಕೆಟ್‌ಗಳು ಬಿದ್ದಿರಲಿದ್ದು, ವಾರ್ಡ್‌ಗಳಲ್ಲಿರುವ ಕೆಲವರನ್ನು ಬಿಟ್ಟರೆ, ಬಹುತೇಕ ರೋಗಿಗಳು ತಿನ್ನದೆ ಬಿಸಾಡಿರುತ್ತಾರೆ ಎಂದು ಕೆಲ ಸ್ವಚ್ಛತಾ ಸಿಬ್ಬಂದಿ ತಿಳಿಸಿದರು.

ಫುಡ್ ಮೆನುನಲ್ಲಿರುವಂತೆ ಕೊಡಲ್ಲ....!

ಆಸ್ಪತ್ರೆಯ ಫುಡ್ ಮೆನುನಲ್ಲಿ ಮಧ್ಯಾಹ್ನ ಒಂದು ಕಪ್ ಮೊಸರು, ರಾತ್ರಿ ವೇಳೆ ಮಜ್ಜಿಗೆ ಕೊಡಬೇಕು ಎಂದಿದೆ. ಆದರೆ, ಒಂದೇ ಒಂದು ದಿನವೂ ಮೊಸರು, ಮಜ್ಜಿಗೆ ಕೊಟ್ಟಿಲ್ಲ. ಚೆಲುವಾಂಬ ಮತ್ತು ಪಿಕೆಟಿಬಿ ಆಸ್ಪತ್ರೆಗಳಿಗೆ ಮೊಟ್ಟೆ ನೀಡಲಾಗುತ್ತದೆ. ವಿಶೇಷ ದಿನಗಳಲ್ಲಿ ವಿಶೇಷ ಅಡುಗೆ ಮಾಡಲಾಗುತ್ತಿತ್ತು. ಈಗ ಅದ್ಯಾವುದೂ ಇಲ್ಲ. ಪ್ರತೀ ದಿನ ಒಂದೇ ತರಹದ ತರಕಾರಿ ಸಾರು. ಭಾನುವಾರ ಬೆಳಗ್ಗೆ ತಿಂಡಿ ಬದಲು ಮೂರು ಪೀಸ್ ಬ್ರೆಡ್–ಕಾಫಿ ನೀಡಲಾಗುತ್ತದೆ.

– ಕೆ.ಆರ್. ಆಸ್ಪತ್ರೆ ಒಳ ರೋಗಿಗಳು

ಪಾಲಿಕೆ ನೌಕರರ ಬೇಡಿಕೆ ಸಂಬಂಧ ಅಧಿಕಾರಿಗಳಿಗೆ ಮನವರಿಕೆ

ಮಾಜಿ ಸಚಿವ ಸುರೇಶ್ ಕುಮಾರ್ ಭರವಸೆ



ಮಾಜಿ ಸಚಿವ ಸುರೇಶ್ ಕುಮಾರ್ ಅವರಿಗೆ ನಗರಪಾಲಿಕೆ ನೌಕರರು ವಿವಿಧ ಬೇಡಿಕೆಗಳ ಮನವಿ ಪತ್ರವನ್ನು ನೀಡಿದರು.

ಮೈಸೂರು, ಜು.11(ಎಂಕೆ)– ನಗರಪಾಲಿಕೆ ನೌಕರರ ನ್ಯಾಯಯುತ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡುವುದರ ಜೊತೆಗೆ ಇನ್ನೆರಡ್ಮೂರು ದಿನಗಳ ಬಳಿಕ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗಳನ್ನು ಖುದ್ದಾಗಿ ಭೇಟಿ ಮಾಡಿ, ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಮನವರಿಕೆ ಮಾಡಿಕೊಡಲಾಗುವುದು ಎಂದು ಮಾಜಿ ಸಚಿವ ಸುರೇಶ್ ಕುಮಾರ್ ಭರವಸೆ ನೀಡಿದರು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘಗಳ ಪರಿಷತ್ತು ನೀಡಿರುವ ಮುಷ್ಕರ ಬೆಂಬಲಿಸಿ ಮೈಸೂರು ನಗರಪಾಲಿಕೆ ನೌಕರರು, ಪೌರಕಾರ್ಮಿಕರ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಅವರು, ಪಾಲಿಕೆ ನೌಕರರು ಕೇಳುತ್ತಿರುವ ನ್ಯಾಯಯುತ ಬೇಡಿಕೆಗಳ ಹೋರಾಟಕ್ಕೆ ಜೊತೆಯಾಗಿ ನಾವು ನಿಲ್ಲುತ್ತೇವೆ. 2008 ರಿಂದ 2013ರವರೆಗೆ ನಾನು ರಾಜ್ಯದ ಕಾನೂನು ಸಂಸದೀಯ ಹಾಗೂ ನಗರಾಭಿವೃದ್ಧಿ ಸಚಿವನಾಗಿದ್ದಾಗ ಬೆಂಗಳೂರು ಹೊರತುಪಡಿಸಿ ಪಾಲಿಕೆ ನೌಕರರಿಗಿದ್ದ ಷರತ್ತುಗಳು ಮತ್ತು ನಿಬಂಧನೆಗಳಿಗೆ ತಿದ್ದುಪಡಿ ತರಲಾಗಿತ್ತು. 2019ರಲ್ಲಿ ನಮ್ಮದೇ ಸರ್ಕಾರವಿತ್ತು. ಆಗ ಈ ಬೇಡಿಕೆಗಳ ಬಗ್ಗೆ ಕೇಳಲಿಲ್ಲ. ಆದರೂ 7ನೇ ವೇತನ ಆಯೋಗದ ಶಿಫಾರಸ್ಸಿನನ್ವಯ ಸೌಲಭ್ಯಗಳನ್ನು ತಮಗೂ ಒದಗಿಸುವಂತೆ ಹಾಗೂ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಲಾಗುವುದು ಎಂದು ಭರವಸೆ ನೀಡಿದರು. ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಮೇಯರ್ ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಟೀಚರ್ : ಆನೆ ದೊಡ್ಡದಾ, ಇರುವೆ ದೊಡ್ಡದಾ?
ಸರ್ದಾರ್‌ನ ಮಗ : ಹಾಗೆಲ್ಲಾ ಸುಮ್ನೆ ಸುಮ್ನೆ ಹೇಳಕ್ಕಾಗಲ್ಲಾ. Date of Birth ಬೇಕು ಟೀಚರ್

ಮೈಸೂರು ಮಿತ್ರ

ಶನಿವಾರ, 12 ಜುಲೈ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಪ್ರಯತ್ನಿಸಿ ಸೋಲಾದರೆ ಅದು ಸೋಲಲ್ಲ. ಯಾವುದೇ ಪ್ರಯತ್ನ ಮಾಡದೆ ಇರುವುದು ನಿಜವಾದ ಸೋಲು. – ಅನಾಮಿಕ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕುರಿ ಕಾಯೋದಕ್ಕೆ ತೋಳನನ್ನು ಕಳಿಸಿದರಂತೆ.

ನಿಮ್ಮ ಪತ್ರಗಳು

■ ನೀರಿನ ಸಮೀಪದಲ್ಲಿ ಎಚ್ಚರ ವಹಿಸಿ



ಮಾನ್ಯರೆ,

ರಾಜ್ಯದ ಹಲವೆಡೆ ಮಳೆಯ ಆರ್ಭಟ ಜೋರಾಗಿದ್ದು, ಎಲ್ಲಾ ನದಿ ಹಾಗೂ ಅಣೆಕಟ್ಟೆಗಳು ಬಹುತೇಕ ಭರ್ತಿ ಆಗಿವೆ. ಈ ಸಮಯದಲ್ಲಿ ಜನ ಸಾಮಾನ್ಯರು ಮತ್ತು ಪ್ರವಾಸಿಗರು ಆದೃಶ್ಯ ವೈಭವವನ್ನು ಕಣ್ತುಂಬಿಕೊಳ್ಳಲು ಹೆಚ್ಚಿನ ಸಂಖ್ಯೆಯಲ್ಲಿ ನದಿ ಹಾಗೂ ಅಣೆಕಟ್ಟೆಗಳ ಸಮೀಪ ಹೋಗುವುದನ್ನು ಕಾಣಬಹುದು. ಇದನ್ನು ಕಣ್ತುಂಬಿಕೊಳ್ಳುವುದು ಒಳ್ಳೆಯದೇ. ಅದರೆ ಕೆಲವರು ರೀಲ್ಸ್ ಮತ್ತು ಫೋಟೋ ಹುಚ್ಚಿಗೆ ನದಿ ಸಮೀಪಕ್ಕೆ ಮತ್ತು ಅಣೆಕಟ್ಟೆ ಮೇಲೆ ಹತ್ತುವುದು, ನೀರಿನ ಕೆಳಗೆ ಇಳಿಯುವುದು ಮಾಡುತ್ತಾರೆ. ಇದು ಅಪಾಯಕರ ಮತ್ತು ಪ್ರಾಣಕ್ಕೆ ಆಹ್ವಾನ ನೀಡಿದಂತಾಗುತ್ತದೆ. ಅದರಲ್ಲಿ ಯುವಕರೇ ಹೆಚ್ಚಾಗಿ ಇದನ್ನು ಮಾಡುತ್ತಿದ್ದಾರೆ. ಆದ್ದರಿಂದ ನದಿ, ಅಣೆಕಟ್ಟು ಸಮೀಪದಲ್ಲಿ ಆದಷ್ಟು ಎಚ್ಚರ ವಹಿಸಬೇಕು. ನದಿ, ಅಣೆಕಟ್ಟೆ ಸುತ್ತಮುತ್ತಲೂ ಸೂಕ್ತವಾದ ಸುರಕ್ಷತೆಗೆ ಹೆಚ್ಚಿನ ಗಮನ ವಹಿಸಬೇಕು.

–ಸಿ. ಕಿಶೋರ್, ಮೈಸೂರು

■ ಸ್ವಾತಂತ್ರ್ಯ ಹೋರಾಟಗಾರ ರಾಮಸ್ವಾಮಿಗೆ ಅವಮಾನ



ಮಾನ್ಯರೆ,

ರಾಮಸ್ವಾಮಿಯವರು ದೇಶದ ಸ್ವಾತಂತ್ರ್ಯಕ್ಕೆ ನಡೆಸಿದ ಹೋರಾಟದ ಕಥೆ ಕೇಳುತ್ತಿದ್ದರೆ ಎಂತಹವರಿಗಾದರೂ ಮೈ ನವಿರೇಳುತ್ತದೆ. ಅಂತಹ ಮಹಾನ್ ಹೋರಾಟಗಾರನ ನೆನಪಿಗಾಗಿ ಮೈಸೂರಲ್ಲಿ ರಾಮಸ್ವಾಮಿ ಸರ್ಕಲ್ ಸ್ಥಾಪನೆಯಾಗಿ ಜಗತ್ಪ್ರಸಿದ್ಧಿಯಾಗಿದೆ. ಇಂತಹ ಸರ್ಕಲ್ ಅನ್ನು ಯಾವ ರೀತಿ ಅವಮಾನಿಸಿದ್ದಾರೆ ನೋಡಿ. ಆ ಚಿತ್ರದಲ್ಲಿರುವ ವ್ಯಕ್ತಿ ಯಾರಿಗೋ ಅತ್ಯಾಪ್ತನಾಗಿರಬಹುದು ಹಾಗೂ ಪ್ರೀತಿ ಪಾತ್ರನಾಗಿರಬಹುದು. ಆತನಿಗೆ ಶ್ರದ್ಧಾಂಜಲಿ ಅರ್ಪಿಸುವ ಭರದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರನನ್ನು ಮರೆತರಲ್ಲಾ. ನಗರಪಾಲಿಕೆಯವರು ಈ ರೀತಿಯ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕೆಂದು ಈ ಮೂಲಕ ಮನವಿ.

–ಮೈ ನಾ ನರೇಂದ್ರ, ಮೈಸೂರು.

■ ನಟಿ ಭಾವನರ ತಾಯ್ತನದ ಬಗ್ಗೆ ಗೌರವ ಇರಲಿ

ಮಾನ್ಯರೆ,

ನಟಿ ಭಾವನಾ ಅವರ ಐವಿಎಫ್ ಗರ್ಭಧಾರಣೆ ಹಲವು ಆಯಾಮಗಳಲ್ಲಿ ಚರ್ಚೆಗೆ ಒಳಗಾಗಿದೆ. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಪರ ವಿರೋಧ ಹಾಗೂ ಟೀಕೆಗಳ ಸುರಿಮಳೆಯು ಪ್ರತಿನಿತ್ಯ ನಡೆಯುತ್ತಿರುವುದನ್ನು ಕಾಣಬಹುದಾಗಿದೆ. ಆದರೆ ವಾಸ್ತವವಾಗಿ 2021ರ ಅಸಿಸ್ಟೆಡ್ ರಿಪ್ರೋಡಕ್ಟಿವ್ ಟೆಕ್ನಾಲಜಿ ಕಾಯಿದೆ ಸಂತಾನೋತ್ಪತ್ತಿ ತಂತ್ರಜ್ಞಾನಗಳ ನೈತಿಕ ಮತ್ತು ಸುರಕ್ಷಿತ ಬಳಕೆಯನ್ನು ಎತ್ತಿ ಹಿಡಿದಿದ್ದು, ಈ ಪ್ರಕಾರ ಒಂಟಿ ಅಥವಾ ಅವಿವಾಹಿತ ಮಹಿಳೆ ತಾನು ಬಯಸಿದಾಗ ತಾಯ್ತನವನ್ನು ಸಂಭ್ರಮಿಸಬಹುದು ಹಾಗೂ ಅದರಲ್ಲೂ ಐವಿಎಫ್ ಚಿಕಿತ್ಸೆ ವಿಧಾನ ಆಯ್ಕೆ ಮಾಡಿಕೊಳ್ಳಬಹುದು ಎಂದಿದೆ.

ತಾಯ್ತನ ಎನ್ನುವುದು ಸ್ತ್ರೀಯೊಬ್ಬಳ ಖಾಸಗಿತನವಾಗಿದ್ದು, ಆಕೆ ತಾಯಿಯಾಗುವುದು ಜೀವನಕ್ಕೆ ಅಪಾರ ಸಂತೋಷ ಮತ್ತು ಬೆಳಕನ್ನು ತರುತ್ತದೆ. ತನ್ನ ಮಗುವಿನೊಂದಿಗಿನ ನನ್ನ ಸಂಪರ್ಕವು ಪವಿತ್ರವೆಂದು ಭಾವಿಸುತ್ತಾಳೆ. ತಾಯ್ತನ ಎಂಬುದು ಪ್ರತಿಯೊಬ್ಬ ಹೆಂಗಸಿಗೂ ಅತ್ಯಂತ ಶ್ರೇಷ್ಠ ಮತ್ತು ಕಠಿಣವಾದ ವಿಷಯವಾಗಿದೆ. ನಟಿ ಭಾವನಾ ಅವರು ಐವಿಎಫ್ ಮೂಲಕ ತಾಯಿಯಾಗಿ ಮಕ್ಕಳಿಗೆ ಜನ್ಮ ನೀಡಲು ಮುಂದಾಗುತ್ತಿದ್ದಾರೆ ಎಂದರೆ ಅದು ಅವರ ಖಾಸಗಿ ವಿಷಯ ಹಾಗೂ ವೈಯಕ್ತಿಕ ನಿರ್ಧಾರ. ಹೀಗಿರುವಾಗ ಅವರ ತಾಯ್ತನವನ್ನು ಜನರು ಗೌರವಿಸಬೇಕೆ ಹೊರತು, ಸಾಮಾಜಿಕ ಜಾಲತಾಣಗಳಲ್ಲಿ ಹೃದಯ ಶೂನ್ಯರಾಗಿ ಹಗುರವಾಗಿ ಮಾತನಾಡುವುದನ್ನು ನಿಲ್ಲಿಸಬೇಕಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

■ ಜಲಪುರಿ ಪೊಲೀಸ್ ಕ್ವಾಟ್ರರ್ಸ್‌ನಲ್ಲಿ ನೀರಿನ ಸಮಸ್ಯೆ ಬಗೆಹರಿಸಿ

ಮಾನ್ಯರೆ,

ಮೈಸೂರಿನ ಜಲಪುರಿ ಪೊಲೀಸ್ ಕ್ವಾಟ್ರರ್ಸ್‌ನಲ್ಲಿ ನೀರಿನ ಸಮಸ್ಯೆ ಉಂಟಾಗಿದೆ. ಇಲ್ಲಿ ಹಳೆಯ ನೀರಿನ ಪೈಪ್ ಲೈನ್ ಇರುವುದರಿಂದ ನೀರು ಬರದೆ ತುಂಬಾ ತೊಂದರೆಯಾಗಿದೆ. ನೀರು ಬಿಡುವವರಿಗೆ ಕರೆ ಮಾಡಿ ಕೇಳಿದರೆ ಹೊಸ ಲೈನ್ ಕಲೆಕ್ಷನ್ ಹಾಕಿಸಿಕೊಳ್ಳಿ ಎಂದು ಹೇಳುತ್ತಾರೆ. ಹೊಸ ಲೈನ್ ಹಾಕಿಸಿಕೊಳ್ಳಲು ಸುಮಾರು 20–25 ಸಾವಿರ ಖರ್ಚು ಆಗುತ್ತದೆ. ಜಲಪುರಿ ಪೊಲೀಸ್ ಕ್ವಾಟ್ರರ್ಸ್‌ನಲ್ಲಿ ಹಳೆ ಕಲೆಕ್ಷನ್ ಇರುವ ಮನೆಗಳು ಸುಮಾರು 150ಕ್ಕಿಂತ ಹೆಚ್ಚು ಮನೆಗಳು ಇದ್ದು, ಸಂಬಂಧಪಟ್ಟ ಪೊಲೀಸ್ ಇಲಾಖೆಯ ಅಧಿಕಾರಿಗಳು ಈ ಸಮಸ್ಯೆ ಪರಿಹರಿಸಬೇಕೆಂದು ಮನವಿ.

– ನೊಂದ ನಿವಾಸಿಗಳು, ಜಲಪುರಿ ಪೊಲೀಸ್ ಕ್ವಾಟ್ರರ್ಸ್, ಮೈಸೂರು.

■ ಬೀದಿ ನಾಯಿಗಳ ಹಾವಳಿಯಿಂದ ರಕ್ಷಿಸಿ



ಮಾನ್ಯರೆ,

ಮೈಸೂರು–ಗದ್ದಿಗೆ ರಸ್ತೆ ಬೋಗಾದಿಯ ಎಸ್‌ಬಿಎಂ ಬಡಾವಣೆ ಸಿ ಬ್ಲಾಕ್ 2ನೇ ಮುಖ್ಯ ರಸ್ತೆ 8ನೇ ಅಡ್ಡರಸ್ತೆಯಲ್ಲಿ ಎಂಟು ಹತ್ತು ನಾಯಿಗಳು ಇಲ್ಲಿನ ಮಕ್ಕಳು, ನಿವಾಸಿಗಳಿಗೆ ಹಾಗೂ ಈ ರಸ್ತೆಗೆ ಬರುವವರಿಗೆ ನಿರಂತರ ಉಪದ್ರವ ನೀಡುತ್ತಿವೆ. ಇವುಗಳಿಗೆ ತುರ್ತಾಗಿ ಲಸಿಕೆ ಹಾಕಿಸಿ ಸಾರ್ವಜನಿಕರನ್ನು ರಕ್ಷಿಸಬೇಕು ಎಂದು ಸಂಬಂಧಪಟ್ಟವರಲ್ಲಿ ಮನವಿ ಮಾಡುತ್ತೇವೆ.

– ಲಕ್ಷ್ಮಣ್ ಗೋರ್ಲಕಟ್ಟೆ, ಎಸ್‌ಬಿಎಂ ಬಡಾವಣೆ, ಬೋಗಾದಿ ಮೈಸೂರು



ಆರ್.ಪಿ. ಜಗದೀಶ್
ಹಿರಿಯ ಪತ್ರಕರ್ತರು,
ಮೊ: 98450 48051

ಸಕಾಲಿಕ

ಮುಖ್ಯಮಂತ್ರಿ ಸಿದ್ದರಾಮಯ್ಯ ದೆಹಲಿಯಲ್ಲೇ ಕೂತು ಸವಾಲ್: ಕಾಂಗ್ರೆಸ್ ಹೈಕಮಾಂಡ್‌ಗೆ ಅಗ್ನಿಪರೀಕ್ಷೆ!



ಈ ತಮಾಷೆ ನೋಡಿಕೊಂಡೂ ಬಿಜೆಪಿ ಪ್ರತಿಭಟಿಸದೆ ಎಲ್ಲವನ್ನೂ ಜನತೆಗೆ ಒಪ್ಪಿಸಿದಂತೆ ಕಾಣುತ್ತಿದೆ. ಏಕೆಂದರೆ ಎಲ್ಲಾ ಪಕ್ಷದವರಿಗೂ ಅವರದೇ ಚಿಂತೆ. ಅಂದರೆ ಮಾಜಿ ಪ್ರಧಾನ ಮಂತ್ರಿ ದೇವೇಗೌಡರಿಗೆ ಅವರ ಮೊಮ್ಮಗ ನಿಖಿಲ್‌ಗೆ ರಾಜ್ಯಾಧ್ಯಕ್ಷ ಪಟ್ಟಾಭಿಷೇಕ ಮಾಡುವ ಕನಸು. ಬಿಜೆಪಿಯ ರಾಜಾಹುಲಿ ಬಿ.ಎಸ್. ಯಡಿಯೂರಪ್ಪನವರಿಗೆ ಅವರ ಮುದ್ದಿನ ಮಗ, ಭಾವಿ ಮುಖ್ಯಮಂತ್ರಿ ಬಿ.ವೈ. ವಿಜಯೇಂದ್ರಗೆ ಈಗ ರಾಜ್ಯಾಧ್ಯಕ್ಷ ಪಟ್ಟಾಭಿಷೇಕವನ್ನು ಅಧಿಕೃತಗೊಳಿಸಿ ಸೈ ಎನಿಸಿಕೊಳ್ಳಬೇಕೆಂಬ ಹಂಬಲ.

ಮುಂದಿನ ಮೂರು ವರ್ಷ ನಾನೇ ಮುಖ್ಯಮಂತ್ರಿ. ಮಾತ್ರವಲ್ಲ 2028ರ ವಿಧಾನಸಭಾ ಚುನಾವಣೆಯೂ ನನ್ನದೇ ನೇತೃತ್ವದಲ್ಲಿ ನಡೆಯಲಿದೆ. ಮೇಲಾಗಿ ಮುಖ್ಯಮಂತ್ರಿ ಖುರ್ಚಿಯೂ ಈಗ ಖಾಲಿ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಹೈಕಮಾಂಡ್ ಮೂಗಿನ ಕೆಳಗೆ ನೇರ ನೇರ ಮಾತುಗಳಲ್ಲಿ ಗುಡುಗಿದ್ದಾರೆ. ಇದು ಕಾಂಗ್ರೆಸ್ ಹೈಕಮಾಂಡ್ ತಾಕತ್ತಿಗೆ ಅಗ್ನಿ ಪರೀಕ್ಷೆ ಇದ್ದಂತೆ. ಅಲ್ಲದೆ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಹೆಚ್ಚು ಶಾಸಕರ ಬೆಂಬಲವಿಲ್ಲ ಎನ್ನುವುದನ್ನು ಅವರೇ ಸ್ಪಷ್ಟಪಡಿಸಿದ್ದಾರೆ. ಅಂದ ಮೇಲೆ ಹೈಕಮಾಂಡ್‌ನ ಮುಂದಿನ ನಡೆ ಇನ್ನು ನಿಗೂಢ.

ಹೇಳಬೇಕಾದ್ದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮುಲಾಜಿಲ್ಲದೆ ಹೇಳಿದ ಮೇಲೆ ಇನ್ನೂ ಹೈಕಮಾಂಡ್ ಕೆಲಸ ವೇನು? ಕಾಂಗ್ರೆಸ್‌ನ ಅಪದ್ಬಾಂಧವ ಡಿ.ಕೆ.ಶಿವಕುಮಾರ್ ಭವಿಷ್ಯ, ಮೇಲಾಗಿ ಶ್ರೀ ಅಜ್ಜಯ್ಯನ ಭವಿಷ್ಯ ವಾಣಿಯ ಗತಿಯೇನಾಗಬೇಕು? ಅಲ್ಲದೆ ಈ ಹೇಳಿಕೆಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಇನ್ನು ಸ್ಟ್ರಾಂಗ್ ಎಂಬುದನ್ನು ಸಾರಿ ಸಾರಿ ಹೇಳುತ್ತಿವೆ ಅಲ್ಲವೆ?

ಕೊಬ್ಬಿದ ಟಗರು ಗುಟುರು ಹಾಕುತ್ತಾ, ಎದುರಾಳಿಯ ಜಂಗಾಬಲವನ್ನೇ ಅಡಗಿಸುವಂತೆ ಘರ್ಜಿಸುತ್ತಿರುವುದರಿಂದ ಕನಕಪುರದ ಬಂಡೆ ಮಂಜಿನ ಗಡ್ಡೆಯಂತೆ ನಿಧಾನವಾಗಿ ಕರಗಿ ನೀರಾಗುತ್ತಿರುವಂತೆ ಕಾಣುತ್ತಿದೆ. ಕಷ್ಟ ಕಾಲದಲ್ಲೆಲ್ಲಾ ಕಾಂಗ್ರೆಸ್ ಮನೆ ಬಾಗಿಲು ಕಾದ ಡಿ.ಕೆ. ಶಿವಕುಮಾರ್‌ಗೆ ಎಂತಹ ಸ್ಥಿತಿ ಬಂತಲ್ವಾ. ಈ ರಂಪಾಟ ಇಂದಿಗೆ ನಿಲ್ಲುವುದಿಲ್ಲ ಬಿಡಿ.

ಟಗರಿನ ಗುಟುರಿಗೆ ಹೈಕಮಾಂಡ್‌ನ ತ್ರಿಮೂರ್ತಿಗಳಾದ ಅಮ್ಮ, ಮಕ್ಕಳು ತಲೆಮರೆಸಿಕೊಂಡಿದ್ದಾರೆ. ಸಿದ್ದರಾಮಯ್ಯ ಅವರನ್ನು ಮುಖಾಮುಖಿ ಎದುರಿಸುವ ಧೈರ್ಯವಿಲ್ಲದೆ ಅಡಗಿಕೊಂಡಿದ್ದಾರೆ. ಹೆಸರಿಗೆ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಮಾತ್ರ ಅಂಜದೆ–ಅಳುಕದೆ ಶಾಸಕರ–ಸಚಿವರ ದುಃಖ–ದುಮ್ಮಾನಗಳಿಗೆ ಕಿವಿಗೊಡುತ್ತಿದ್ದಾರೆ. ಅದೂ ಏನೂ ಅಂದ್ರೆ ಒಂದು ಕಿವಿಯಲ್ಲಿ ಕೇಳಿಸಿಕೊಳ್ಳುವುದು, ಇನ್ನೊಂದು ಕಿವಿಯಲ್ಲಿ ಬಿಡುವುದು. ಏಕೆಂದರೆ ಅವರ ಕೈಯ್ಯಲ್ಲಿ ಅಧಿಕಾರವಿಲ್ಲ!

ಸಿಎಂ ಜತೆ ಅವರ ಬಲಗೈ ಭಂಟರಂತಿರುವ ಕೆಲವು ಸಚಿವರು ದೆಹಲಿಯಲ್ಲಿ ಬಿಡಾರ ಹೂಡಿ ಮಲ್ಲಿಕಾರ್ಜುನ ಖರ್ಗೆ ಮುಂದೆ ಕಿಂದರಿ ಭಾರಿಸುತ್ತಿದ್ದಾರೆ. ಇದನ್ನೆಲ್ಲಾ ನೋಡಿಯೂ ನೋಡದಂತೆ ಅಂದರೆ ಗಾಂಧೀಜಿ ಅವರ ಮೂರು ಕೋತಿಗಳ ಸೂತ್ರಕ್ಕೆ ತಲೆಬಾಗಿ ಡಿ.ಕೆ. ಶಿವಕುಮಾರ್ ಮೌನಕ್ಕೆ ಜಾರಿದ್ದಾರೆ. ಕಾಂಗ್ರೆಸ್‌ನ ಈ ಅಧಿಕಾರ ಕಿತ್ತಾಟದ ಕಣ್ಣಾ ಮುಚ್ಚಾಲೆ ಆಟ ರಾಜ್ಯ ಮಾತ್ರವಲ್ಲ ದೇಶದ ಜನತೆಗೆ ಭರಪೂರ ಮನರಂಜನೆ ನೀಡುತ್ತಿದೆ. ಅಲ್ಲದೇ ದೇಶದ ಮುಂದೆ ರಾಜ್ಯದ ಜನತೆ ತಲೆ ತಗ್ಗಿಸುವಂತೆ ಮಾಡಿದೆ.

ಈ ಹಿಂದೆ ರಾಜಸ್ಥಾನ, ಛತ್ತೀಸ್‌ಗಢದಲ್ಲಿಯೂ ಇಂತಹ ಪರಿಸ್ಥಿತಿಯನ್ನು ಸಮರ್ಥ ರೀತಿ ನಿರ್ವಹಿಸಲಾಗದ ಕಾಂಗ್ರೆಸ್ ಹೈಕಮಾಂಡ್ ಅಲ್ಲಿ ಅಧಿಕಾರವನ್ನೇ ಕಳೆದುಕೊಳ್ಳಬೇಕಾಗಿದ್ದನ್ನು ಜನ ಇನ್ನೂ ಮರೆತಿಲ್ಲ. ಅದೇ ಮಾದರಿ ಸರ್ಕಸ್‌ಗೆ ಈಗ ಕರ್ನಾಟಕ ಸಾಕ್ಷಿಯಾಗಿದೆ.

ಕಾಂಗ್ರೆಸ್‌ನ ಧೀರ ಯೋಧನಂತೆ, ಯಾವುದೇ ರಾಜ್ಯದ ಕಾಂಗ್ರೆಸ್‌ನ ಜಟಿಲ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯುತ್ತಿದ್ದ ಡಿಕೆಎಸ್ ಪಾಲಿಗೆ ಈಗ ಎಲ್ಲವೂ ಶೂನ್ಯ. ಎಲ್ಲರೂ ಕೈ ಎತ್ತಿದಂತೆ ಭಾಸವಾಗುತ್ತಿದೆ. ಇಲ್ಲಿಯವರೆಗೆ ದರ್ಶನ ಮಾಡಿದ ದೇವರು ಹಾಗೂ ಅಜ್ಜಯ್ಯನ ಮನದ ಮಾತು ನೆನೆದು, ತುಟಿಪಿಟಿಕ್ ಎನ್ನದೆ ಎಲ್ಲವನ್ನೂ ಶಿವನ ಪಾದಕ್ಕೆ ಸಮರ್ಪಿಸಿ ಕೈ ಮುಗಿದು ನಿಂತಿದ್ದಾರೆ. ಆಸೆ ಈಡೇರುವುದೇ ಕಾದು ನೋಡಬೇಕು.

ರಾಜ್ಯದ ಬಡಜನತೆಗೆ ನೀಡಿರುವ 5+1 ಗ್ಯಾರಂಟಿ ಜಾರಿ ವಿಚಾರದಲ್ಲಿ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಕೈ ಮೇಲೆತ್ತಿ ಜೋಡಿ ಎತ್ತಿನ ಜಯದ ಸಂಕೇತ ನೀಡುತ್ತಿದ್ದರು. ಆದರೆ, ಈ ಧುರೀಣರು ಈಗ ಜಿದ್ದಾ ಜಿದ್ದಿಗೆ ಬಿದ್ದು, ಒಂದು ಎತ್ತು ಚಂಡಿ ಹಿಡಿದಂತೆ ಗಾಡಿ ರಸ್ತೆಯಲ್ಲಿ ನಿಂತಿದೆ. ರಾಜ್ಯದ ಅಭಿವೃದ್ಧಿ ಪಥಕ್ಕೆ ಗರಬಡಿದಂತಾಗಿದೆ. ಎಲ್ಲಿದೆ ಸರ್ಕಾರ ಎನ್ನುವಂತಾಗಿದೆ.

ಹೈಕಮಾಂಡ್‌ಗೆ ಸೆಡ್ಡು ಹೊಡೆದರೂ ಎಲ್ಲವೂ ಹೈಕಮಾಂಡ್ ಹೇಳಿದಂತೆ ಎನ್ನುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಾಜೂಕುತನಕ್ಕೆ ಎಂಥವರೂ ತಲೆದೂಗಬೇಕು.

ಈ ನಡುವೆ, ರಾಜ್ಯದ ಉಸ್ತುವಾರಿ ರಣದೀಪ್ ಸುರ್ಜೇವಾಲ ಬಂದ ದಾರಿಗೆ ಸುಂಕವಿಲ್ಲ ಎಂಬಂತೆ, ಶಾಸಕರ ಅಭಿಪ್ರಾಯ ಸಂಗ್ರಹಿಸುವ ನೆಪದಲ್ಲಿ ತೆರೆಮರೆಗೆ ಸರಿದಿದ್ದಾರೆ. ಹಾದಿ–ಬೀದಿಯಲ್ಲಿ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಪರ–ವಿರೋಧ ಜಗಳ ನಡೆಯುತ್ತಿದ್ದರೆ, ಸುರ್ಜೇವಾಲ ಅವರು ನಡೆಸುವ ಶಾಸಕರ ಅಭಿಪ್ರಾಯಕ್ಕೆ ಮೂರು ಕಾಸಿನ ಮನ್ನಣೆ ಇರುವುದಿಲ್ಲ.


ರಾಜ್ಯದ ಜನತೆಯ ಕಷ್ಟ–ಸುಖ ನಿರ್ಲಕ್ಷಿಸಿ ದೆಹಲಿಯಲ್ಲಿ ಕುರ್ಚಿ ಕಾದಾಟದ ನಾಟಕ ಪ್ರದರ್ಶನ ಮಾಡುತ್ತಿದ್ದರೆ, ಇದೇನು ಪ್ರಜಾಪ್ರಭುತ್ವವೇ ಇಲ್ಲ ಸರ್ವಾಧಿಕಾರದ ಸೂಚನೆಯೇ?

ಈ ತಮಾಷೆ ನೋಡಿಕೊಂಡೂ ಬಿಜೆಪಿ ಪ್ರತಿಭಟಿಸದೆ ಎಲ್ಲವನ್ನೂ ಜನತೆಗೆ ಒಪ್ಪಿಸಿದಂತೆ ಕಾಣುತ್ತಿದೆ. ಏಕೆಂದರೆ ಎಲ್ಲಾ ಪಕ್ಷದವರಿಗೂ ಅವರದೇ ಚಿಂತೆ. ಅಂದರೆ ಮಾಜಿ ಪ್ರಧಾನ ಮಂತ್ರಿ ದೇವೇಗೌಡರಿಗೆ ಅವರ ಮೊಮ್ಮಗ ನಿಖಿಲ್‌ಗೆ ರಾಜ್ಯಾಧ್ಯಕ್ಷ ಪಟ್ಟಾಭಿಷೇಕ ಮಾಡುವ ಕನಸು. ಬಿಜೆಪಿಯ ರಾಜಾಹುಲಿ ಬಿ.ಎಸ್. ಯಡಿಯೂರಪ್ಪನವರಿಗೆ ಅವರ ಮುದ್ದಿನ ಮಗ, ಭಾವಿ ಮುಖ್ಯಮಂತ್ರಿ ಬಿ.ವೈ. ವಿಜಯೇಂದ್ರಗೆ ಈಗ ರಾಜ್ಯಾಧ್ಯಕ್ಷ ಪಟ್ಟಾಭಿಷೇಕವನ್ನು ಅಧಿಕೃತಗೊಳಿಸಿ ಸೈ ಎನಿಸಿಕೊಳ್ಳಬೇಕೆಂಬ ಹಂಬಲ. ರಾಜ್ಯದ ಜನತೆಯ ಬಗ್ಗೆ ಯಾವ ಪಕ್ಷಕ್ಕೂ ಕಿಂಚಿತ್ತೂ ಕಾಳಜಿ ಕಾಣುತ್ತಿಲ್ಲ. ಅಯ್ಯೋ, ಏನಪ್ಪಾ ಇದು ಗ್ರಹಚಾರ ಎಂದು ರಾಜ್ಯದ ಜನ ತಮ್ಮ ತಲೆ ತಾವೇ ಸವರಿಕೊಳ್ಳುವಂತಾಗಿದೆ.

ಕನ್ನಡವೇ ಬದುಕಾಗಿದ್ದ ಆಲೂರು ವೆಂಕಟರಾಯರು



ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167



ಜು.12, ಕನ್ನಡ ಕುಲ ಪುರೋಹಿತ ಆಲೂರು ವೆಂಕಟರಾಯರ ಜನ್ಮ ದಿನಾಚರಣೆ. ತನ್ನಿಮಿತ್ತ ಈ ಲೇಖನ.

ಒಮ್ಮೆ ಧಾರವಾಡದಲ್ಲಿ ಸಾರ್ವಜನಿಕ ಗಣೇಶೋತ್ಸವದಲ್ಲಿ ಮರಾಠಿ ಹಾಡುಗಳ ಸಮ್ಮೇಳನವೇ ನಡೆಯುತ್ತಿತ್ತು. ಅಲ್ಲಿ ಒಂದು ಹಾಡು ಕೂಡ ಕನ್ನಡದ್ದಾಗಿರಲಿಲ್ಲ. ಅಲ್ಲೇ ಕುಳಿತಿದ್ದ ಕನ್ನಡದ ಕೆಚ್ಚಿನ ಬಾಲಕನೊಬ್ಬ ಇದನ್ನು ಪ್ರತಿಭಟಿಸುವಂತೆ ಅಲ್ಲಿಂದ ಮೇಲೆದ್ದು ಹೊರಟ. ಅವನ ಸ್ನೇಹಿತರೂ ಅವನನ್ನು ಹಿಂಬಾಲಿಸಿದರು. ಗಣೇಶೋತ್ಸವದಲ್ಲಿ ಕನ್ನಡ ಗೀತೆಗಳನ್ನ ಏಕೆ ಹಾಡಬಾರದೆಂದು ಒಂದು ಕ್ಷಣ ಆ ಬಾಲಕ ಯೋಚಿಸಿದ. ಆದರೆ, ಕನ್ನಡ ಗೀತೆಗಳಿಗೂ ಬರವಿದ್ದ ಆ ಕಾಲದಲ್ಲಿ ಅವು ಸಿಗುವುದಾದರೂ ಎಲ್ಲಿ? ಬಾಲಕ ಯೋಚಿಸುತ್ತಾ ಸುಮ್ಮನೆ ಕೂರಲಿಲ್ಲ. ಕೂಡಲೇ ಲಕ್ಷ್ಮಣ ಘಟಿಕಾರ ಎಂಬ ತನ್ನ ಗೆಳೆಯನೊಬ್ಬನಿಂದ ಹದಿನೈದು ಕನ್ನಡ ಗೀತೆಗಳನ್ನು ಬರೆಸಿದ. ವೆಂಕಟ ಎಂಬ ಮತ್ತೊಬ್ಬ ಗೆಳೆಯ ಗಜಾನನಸ್ತವನ ಎಂಬ ಹೆಸರಿನಲ್ಲಿ ಅವುಗಳನ್ನು ಪ್ರಕಟಿಸಿಯೂ ಬಿಟ್ಟ. ಮರಾಠಿಗರ ದೌರ್ಜನ್ಯಕ್ಕೆ ಸೆಡ್ಡು ಹೊಡೆಯುವಂತೆ ಆ ಬಾಲಕ ತನ್ನ ಗೆಳೆಯರ ಗುಂಪನ್ನು ಕಟ್ಟಿಕೊಂಡು ಗಣೇಶೋತ್ಸವದಲ್ಲಿ ಭರ್ಜರಿಯಾಗಿ ಕನ್ನಡಗೀತೆಗಳ ಕಾರ್ಯಕ್ರಮವನ್ನು ನಡೆಸಿಯೇ ಬಿಟ್ಟ.

ಹೀಗೆ ಸ್ವಾಭಿಮಾನದಿಂದ ಪ್ರಚಂಡ ಕನ್ನಡಾಭಿಮಾನವನ್ನು ಪ್ರದರ್ಶಿಸಿದ ಆ ಧೀರ ಬಾಲಕನೇ **ಕರ್ನಾಟಕ ಕುಲ ಪುರೋಹಿತ ಆಲೂರು ವೆಂಕಟರಾಯರು**. ಆಗ ಬಾಲಕ ವೆಂಕಟರಾಯರ ವಯಸ್ಸು ಹತ್ತೋ, ಹನ್ನೊಂದೋ ಇರಬೇಕು. ಇನ್ನೂ ಆರನೆಯ ತರಗತಿಯ ವಿದ್ಯಾರ್ಥಿಯಾಗಿದ್ದರಷ್ಟೆ. ಆಗಲೇ ಅವರಲ್ಲಿ ಕನ್ನಡ ಪ್ರೇಮ ದಮನಿ ದಮನಿಗಳಲ್ಲೂ ತುಂಬಿ ತುಳುಕುತ್ತಿತ್ತು. ಇದರ ಪರಿಣಾಮ ಕನ್ನಡ ಗೀತೆಗಳನ್ನು ಪ್ರಕಟಿಸಿ ಗಣೇಶೋತ್ಸವದಲ್ಲಿ ಹಾಡಿಸಿ ಮರಾಠಿಗರಿಗೆ ಅವರು ಬಾಲ್ಯದಲ್ಲೇ ಸವಾಲಾಗಿ ನಿಂತರು. ಆದರೆ ಆಗ ಅವರು ಪ್ರಕಟಿಸಿದ್ದ ಕನ್ನಡ ಗೀತೆಗಳ ಗಜಾನನಸ್ತವನ ಕೃತಿ ಪೊಲೀಸರ ಕೆಂಗಣ್ಣಿಗೆ ಬಿದ್ದು ದೇಶದ್ರೋಹ ಕೆಲಸ ಮಾಡುತ್ತಿದ್ದಾರೆಂದು ಉಯಿಲೆಬ್ಬಿಸಿ ಕೃತಿಯ ಪ್ರತಿಗಳನ್ನು ಮುಟ್ಟುಗೋಲು ಹಾಕಿಕೊಂಡದ್ದೂ ಉಂಟು. ಆದರೆ ಆಲೂರರು ಇದಕ್ಕೆ ಅಂಜದೆ, ಅಳುಕದೆ ಬಾಲ್ಯದಿಂದಲೂ ಕನ್ನಡಪರ ಶಕ್ತಿಯಾಗಿ ವಿಜೃಂಭಿಸುತ್ತಾ ಬೆಳೆದರು. ಅಂದು ಮರಾಠಿಗರ ವಿರುದ್ಧ ಬಾಲಕ ಆಲೂರರು ತೋರಿದ ಕನ್ನಡತನದ ಧೀರತನಕ್ಕೆ ಇಡೀ ಕನ್ನಡ ನಾಡೇ ಒಂದು ಕ್ಷಣ ಬೆಕ್ಕಸಬೆರಗಾಗಿತ್ತು. ವೀರ ಕನ್ನಡಿಗ ಇವನೆಂದು ಆಲೂರರನ್ನು ಮುಕ್ತಕಂಠದಿಂದ ಪ್ರಶಂಸಿಸಿತ್ತು.

ಮೀಸೆ ಮೂಡುವ ಮುನ್ನವೇ ಸ್ವಾಭಿಮಾನದ ಮಹಾ ಶಿಖರವಾಗಿ ನಿಂತು ಕನ್ನಡದ ಖಡ್ಗವನ್ನು ಝಳಪಿಸಿದ ಇಂಥ ಕನ್ನಡದ ಸಿಂಹ ಆಲೂರು ವೆಂಕಟರಾಯರು ಜನಿಸಿದ್ದು ಬಿಜಾಪುರದಲ್ಲಿ. ಅದು ಆಷಾಢ ಶುದ್ಧ ಪಂಚಮಿ 1880 ಜುಲೈ 12. ತಂದೆ ಭೀಮರಾಯ, ತಾಯಿ ಭಾಗೀರಥಿಬಾಯಿ. ಇವರು ಮೂಲತಃ ಗದಗ ಜಿಲ್ಲೆಯ ರೋಣ ತಾಲೂಕಿನ ಹೊಳೆ ಆಲೂರಿನವರು. ಧಾರವಾಡಕ್ಕೆ ಬಂದು ನೆಲೆಸಿದ್ದರು. ಆಲೂರು ವೆಂಕಟರಾಯರ ತಂದೆ ಭೀಮರಾಯರು ಸರ್ಕಾರಿ ನೌಕರಿಯಲ್ಲಿದ್ದು ಧಾರವಾಡದ ಸುತ್ತಮುತ್ತಲಿನ ಸ್ಥಳಗಳಲ್ಲಿ ಸೇವೆ ಸಲ್ಲಿಸುತ್ತಿದ್ದರು. ಆಲೂರು ಎಂಬುದು ಮುಂದೆ ಅವರ ಮನೆತನದ ಹೆಸರಾಗಿ ಉಳಿಯಿತು.

ಹುಟ್ಟುತ್ತಲೇ ಕನ್ನಡ ದೀಕ್ಷೆತೊಟ್ಟು ಬಂದವರಂತಿದ್ದ ಆಲೂರು ವೆಂಕಟರಾಯರು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ನವಲಗುಂದ, ಗದಗ, ಹಾನಗಲ್‌ನಲ್ಲಿ ಕಲಿತು 1897ರಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ಧಾರವಾಡದಲ್ಲಿ ಮುಗಿಸಿದರು.

ಮನೆಯವರ ಒತ್ತಾಯಕ್ಕೆ ಮಣಿದು ತಮ್ಮ 16ನೇ ವಯಸ್ಸಿನಲ್ಲೇ ಲಕ್ಷ್ಮಿಬಾಯಿಯೊಡನೆ ಆಲೂರು ವೆಂಕಟರಾಯರು ವಿವಾಹವಾಗಿದ್ದರು. ಆದರೆ ವಿಧಿಯು ಲಕ್ಷ್ಮಿಬಾಯಿ ಅವರನ್ನು ಹೆಚ್ಚು ಕಾಲ ಇವರೊಡನೆ ಸಾಂಸಾರಿಕ ಜೀವನ ನಡೆಸಲು ಬಿಡದೆ ಮರಣದ ಮನೆಗೆ ಕರೆದೊಯ್ದಿತ್ತು ಆನಂತರ ಆಲೂರರು ಬದುಕಿನ ಬಂಡಿದೂಡಲು ಮತ್ತೊಂದು ಮದುವೆಯನ್ನೂ ಆದರು.

ಕನ್ನಡದ ಕೆಚ್ಚನ್ನು, ಹೆಚ್ಚಿಸಿ, ಕನ್ನಡದ ಹುಚ್ಚನ್ನು ಎಲ್ಲರಿಗೂ ಹಿಡಿಸುತ್ತಲೇ 1903ರಲ್ಲಿ ಬಿ.ಎ. ಪದವಿ ಪಡೆದುಕೊಂಡು ಫರ್ಗ್ಯೂಸನ್ ಕಾಲೇಜಿನಿಂದ ಆಲೂರರು ಹೊರಬಂದರು. ನಂತರ ಮುಂಬೈನಲ್ಲಿ ಕಾನೂನು ಅಭ್ಯಾಸ ಮಾಡಿ ಕಾನೂನು ಪದವಿಗಳಿಸಿ ವಕೀಲರಾಗಿ 1905ರಲ್ಲಿ ಅವರು ಧಾರವಾಡಕ್ಕೆ ಬಂದು ವಕೀಲಿ ವೃತ್ತಿ ಕೈಗೊಂಡರು. ಆದರೆ ಹೆಚ್ಚು ಕಾಲ ಅವರು ಲಾಯರ್‌ಗಿರಿ ಮಾಡಲಿಲ್ಲ. ಆ ಕಾಲಕ್ಕೆ ವಕೀಲಿ ವೃತ್ತಿ ಎಂಬುದು ಹಣದ ಹೊಳೆಯನ್ನೇ ಹರಿಸುವ ಲಾಭದಾಯಕ ಕೆಲಸವಾಗಿದ್ದರೂ ಅಂದಿನ ಕನ್ನಡದ ದುಃಸ್ಥಿತಿ ಕಂಡು ಕ್ಷಣ ಕ್ಷಣವೂ ತುಡಿಯುತ್ತಿದ್ದ ಆಲೂರರಿಗೆ ಇದು ಬೇಕಾಗಿರಲಿಲ್ಲ. ಹಾಗಾಗಿ ಕಪ್ಪು ಕೋಟನ್ನು ಕಳಚಿಟ್ಟರು. ಕನ್ನಡವ ರಕ್ಷಿಸಲು ಕನ್ನಡವನ್ನೇ ಮೈ–ಮನಕ್ಕೆಲ್ಲಾ ತೊಟ್ಟುಕೊಂಡರು. ಕನ್ನಡ ಭಾಷೆಗೆ, ಕರ್ನಾಟಕ ನಾಡಿಗೆ, ಒಟ್ಟಾರೆ ಕನ್ನಡದ ಸರ್ವತೋಮುಖ ಏಳಿಗೆಗೆ ದುಡಿಯುವ ಸಂಕಲ್ಪ ಮಾಡಿದರು. ಒಂದು ರೀತಿ ಶಪಥವನ್ನೂ ಗೈದರು. ಕರ್ನಾಟಕದ ಏಕೀಕರಣದ ಕನಸು ಕಂಡರು. ಕನ್ನಡ ಕುಲ ಪುರೋಹಿತರಾಗಿ ತಮ್ಮಿಡೀ ಬದುಕನ್ನು ಕನ್ನಡಕ್ಕಾಗಿ ಸಮರ್ಪಿಸಿಕೊಂಡರು.

ಈ ನಡುವೆ ತಾಯಿ ಭಾಗೀರಥೀಬಾಯಿ ನಿಧನ, ಸರ್ಕಾರಿ ನೌಕರಿಯಲ್ಲಿದ್ದ ತಂದೆ ಭೀಮರಾಯರ ನಿವೃತ್ತಿ, ಎಳೆಯ ಪತ್ನಿ ಲಕ್ಷ್ಮೀಬಾಯಿ ಅಕಾಲಿಕ ನಿಧನ, ಆಲೂರು ವೆಂಕಟರಾಯರನ್ನು ಭವಿಷ್ಯದ ಬಗ್ಗೆ ಚಿಂತೆಗೀಡು ಮಾಡಿತು. ಆತಂಕ ಕಾಡಿತು. ಹೊಟ್ಟೆಪಾಡಿನ ಜೀವನವೂ ನಡೆಯಬೇಕಲ್ಲ ಜೊತೆಗೆ ಬಗಲಿಗೆ ಬಿದ್ದ ಎರಡನೆಯ ಹೆಂಡತಿ ಬೇರೆ. ಏನು ಮಾಡುವುದೆಂದು ಅವರು ಯೋಚಿಸುತ್ತಿರುವಾಗಲೇ ನನ್ನನ್ನು ಅವಲಂಬಿಸದೆ ಏನು ಬೇಕಾದರೂ ಮಾಡು ಎಂದರು ತಂದೆ. ಏನಾದರೂ ಸರಿಯೇ, ಮೊದಲು ನಾಡು–ನುಡಿಯ ಕರ್ತವ್ಯವೆಂದೂ, ಆಮೇಲೆ ಸ್ವಂತದ ಬದುಕೆಂದೂ ಮನದಲ್ಲೇ ದೃಢನಿರ್ಧಾರ ಮಾಡಿಕೊಂಡ ಆಲೂರರು ಅದರಂತೆಯೇ ನಾಡಿಗಾಗಿ ದುಡಿಯಲು ದಿಟ್ಟ ಹೆಜ್ಜೆ ಇಟ್ಟರು!

ಹೋರಾಟ, ಭಾಷಣ, ಉಪನ್ಯಾಸ, ಪತ್ರಿಕೆಗಳಲ್ಲಿ ಲೇಖನ, ಜೀವನೋಪಾಯಕ್ಕಾಗಿ ಪುಸ್ತಕಗಳ ರಚನೆ ಮತ್ತು ಪ್ರಕಟಣೆ. ತನ್ಮೂಲಕ ಕನ್ನಡ ಜನಜಾಗೃತಿ, ಹೀಗೆ ಸಾಗಿದ ಆಲೂರರು ಕೆಲಕಾಲ ಧಾರವಾಡದ ಕರ್ನಾಟಕ ವಿದ್ಯಾಲಯದಲ್ಲಿ ಗೌರವ ಮುಖ್ಯೋಪಾಧ್ಯಾಯರೂ ಆಗಿದ್ದರು. ಅವರು ಏನೇ ಆಗಿದ್ದರೂ ಎದೆಯೊಳಗೆ ಕನ್ನಡವೇ ಮಾರ್ದನಿಸುತ್ತಿತ್ತು. ನಿಂತಲ್ಲಿ, ಕುಳಿತಲ್ಲಿ, ನಡೆದಲ್ಲಿ, ಅಷ್ಟೇ ಏಕೆ ನಿದ್ರಾವಸ್ಥೆಯಲ್ಲೂ ಸಹ ಕನ್ನಡ.. ಕನ್ನಡ.. ಕನ್ನಡ.. ಎಂದೇ ಧ್ವನಿಸುತ್ತಿದ್ದರು.

ಆಗತಾನೆ ಲಾರ್ಡ್ ಕರ್ಜನ್‌ನಿಂದ ಬಂಗಾಳ ವಿಭಜನೆಯಾಗಿತ್ತು. ಆದರೆ ಇದನ್ನು ಒಪ್ಪದ ಬಂಗಾಳದ ಜನತೆ ದೇಶಾದ್ಯಂತ ಬೀದಿಗಿಳಿದು ಉಗ್ರ ವಿರೋಧ ವ್ಯಕ್ತಪಡಿಸುತ್ತಿದ್ದರು. ಈ ಘಟನೆ ಆಲೂರರ ಮೇಲೆ ಹೆಚ್ಚು ಪರಿಣಾಮ ಬೀರಿತ್ತು. ಬಂಗಾಳದ ಪ್ರಜೆಗಳು ಬಂಗಾಳವು ವಿಭಜನೆಯಾಗಿ ಇಬ್ಭಾಗವಾದುದನ್ನು ಸಹಿಸದಿರುವಾಗ ಕನ್ನಡ ನಾಡು ಐದು ಭಾಗವಾಗಿ ಹರಿದು ಹಂಚಿ ಹೋಗಿರುವುದನ್ನು ಕನ್ನಡಿಗರಾದ ನಾವು ಸಹಿಸುವುದಾದರೂ ಹೇಗೆ ಎಂದು ಬಿಸಿರಕ್ತದ ಯುವಕ ಆಲೂರರು ತಮ್ಮಲ್ಲೇ ಪ್ರಶ್ನಿಸಿಕೊಂಡರು. ಅದನ್ನು ಸಮಸ್ತ ಕನ್ನಡಿಗರ ಮುಂದಿಟ್ಟು ನಿದ್ರಾವಸ್ಥೆಯಲ್ಲಿದ್ದ ಕನ್ನಡಿಗರನ್ನು ಎಚ್ಚರಿಸಲು ಮುಂದಾದರು. ಎಬ್ಬಿಸಿಯೂ ಬಿಟ್ಟರು. ಐದು ಪ್ರಾಂತಗಳಲ್ಲಿ ಹರಿದು ಹಂಚಿ ಹೋಗಿರುವ ಕರ್ನಾಟಕದ ಏಕೀಕರಣವಾಗಲೇ ಬೇಕು ಎಂಬ ಧ್ಯೇಯದೊಡನೆ ಕನ್ನಡಿಗರಲ್ಲಿ ಕನ್ನಡ ಪ್ರಜ್ಞೆ ಮತ್ತು ಹೋರಾಟದ ಕೆಚ್ಚನ್ನು ತುಂಬುವುದರ ಬಗ್ಗೆ ಆಲೂರರು ಚಿಂತನೆ ನಡೆಸಿ ತಮ್ಮ ವಿಚಾರ ಕ್ರಾಂತಿಯ ಪ್ರಸಾರ ಹಾಗೂ ಪ್ರಚಾರ ಮಾಡಿ ಕನ್ನಡ ಜಾಗೃತಿಯ ಜ್ಯೋತಿ ಹಚ್ಚಿದ್ದರು. ಕನ್ನಡದ ಚೆಂಬೆಳಕಿನ ಕವಿ ಚೆನ್ನವೀರ ಕಣವಿ ಅವರು ವರ್ಣಿಸುವಂತೆ–

ವಿಸ್ಮೃತಿಯ ಧೂಳಿಡಿದು ಮೂಲೆಗುಂಪಾಗಿದ್ದ
ರನ್ನಗನ್ನಡಿಯನೊರಸಿ,
ಕನ್ನಡಿಗರ ಮುಖಕೆ ಹಿಡಿದು ಉಜ್ಜುಗಿಸಿ, ಭಾವೀ
ವಿಭವ ದರ್ಶನಕೆ,
ಗತವೈಭವದ ಜ್ಯೋತಿ ಹಿಡಿದವರು ಆಲೂರರು

ಕವಿ ಕಣವಿಯವರ ಈ ವರ್ಣನೆ ಅತಿಶಯೋಕ್ತಿಯೇನೂ ಅಲ್ಲ. ಅಂಥ ಕನ್ನಡದ ಜ್ಯೋತಿ ಬೆಳಗಿ ಕರ್ನಾಟಕಕ್ಕೆ ಬೆಳಕಿನ ಮಹಾ ಮಾರ್ಗತೆರೆದಿಟ್ಟ ಮಹಾನುಭಾವರಿವರು. ಒಂದು ಕಣ್ಣಲ್ಲಿ ಕನ್ನಡಾಭಿಮಾನ ಮತ್ತೊಂದು ಕಣ್ಣಲ್ಲಿ ದೇಶಾಭಿಮಾನ ಮತ್ತೊಂದು ಕಣ್ಣಲ್ಲಿ ದೇಶಾಭಿಮಾನ ತುಂಬಿಕೊಂಡಿದ್ದ ಅಪ್ರತಿಮ ಕನ್ನಡ ಪ್ರೇಮಿ, ಅಸಾಧಾರಣ ದೇಶಭಕ್ತ ಆಲೂರರು ಕನ್ನಡ ಚಳವಳಿಯಷ್ಟೇ ದೇಶದ ಸ್ವಾತಂತ್ರ್ಯ ಚಳವಳಿಯಲ್ಲೂ ದುಡಿದ ಸ್ವಾತಂತ್ರ್ಯ ಸೇನಾನಿಯೂ ಹೌದು. ಕರ್ನಾಟಕ ಏಕೀಕರಣದ ಕನಸಿನೊಡನೆ ಕನ್ನಡ ಪರ ಹೋರಾಟದ ಜೊತೆಗೆ ರಾಷ್ಟ್ರದ ಬಿಡುಗಡೆಗಾಗಿಯೂ ಅವಿರತ ಹೋರಾಟ. ಹೀಗೆ ಎರಡು ದಿಕ್ಕುಗಳಲ್ಲಿ ಆಲೂರರ ಅಭಿಮಾನದ ಕೈಂಕರ್ಯ ಅವಿಸ್ಮರಣೀಯ. ಭಾರತ ಸ್ವತಂತ್ರವಾದುದನ್ನೂ, ಕನ್ನಡನಾಡು ಒಂದಾದುದನ್ನೂ ಆಲೂರರು ತಮ್ಮ ಜೀವಿತ ಕಾಲದಲ್ಲೇ ಕಂಡು ಸಂಭ್ರಮಿಸಿದ್ದರು. ಆದರೆ, ಅವರ ಮತ್ತೊಂದು ಮಹಾಕನಸು ಕನ್ನಡನಾಡು ಕರ್ನಾಟಕವಾಗಬೇಕೆನ್ನುವುದೂ ನನಸಾಗಿ 1973 ನವೆಂಬರ್ 1 ರಂದು ಕರ್ನಾಟಕ ರಾಜ್ಯೋದಯವಾದಾಗ ಇದನ್ನು ನೋಡಲು ಅವರು ಇರಲಿಲ್ಲ (ನಿಧನ 25.02.1964). ಇದ್ದಿದ್ದರೆ ಇನ್ನೆಷ್ಟು ಸಂತಸ ಪಡುತ್ತಿದ್ದರೋ ಏನೋ...!

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ನಾನೇ ಐದು ವರ್ಷ ಸಿಎಂ ಅಂತ ಸಿದ್ದರಾಮಯ್ಯ ಹಿಂದೆಯೂ ಹೇಳಿದ್ದರು

- ಗೃಹ ಸಚಿವ ಡಾ. ಪರಮೇಶ್ವರ್ ಪ್ರತಿಕ್ರಿಯೆ
- ಅಧಿಕಾರ ಹಂಚಿಕೆ ಒಪ್ಪಂದ ನಮಗೇನು ತಿಳಿದಿಲ್ಲ



ಗೃಹ ಸಚಿವ ಡಾ. ಜಿ.ಪರಮೇಶ್ವರ್ ದಂಪತಿ ಮೈಸೂರಿನ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆದರು.

ಮೈಸೂರು, ಜು.11(ಎಂಟಿವೈ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಐದು ವರ್ಷ ನಾನೇ ಮುಖ್ಯಮಂತ್ರಿ ಎಂದು ಹಿಂದೆಯೂ ಹೇಳಿದ್ದರು. ಈಗಲೂ ಅದನ್ನೇ ಹೇಳಿದ್ದಾರೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದ್ದಾರೆ.

ಚಾಮುಂಡಿಬೆಟ್ಟದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಅಧಿಕಾರದ ಹಂಚಿಕೆ ಒಪ್ಪಂದದ ವಿಚಾರ ನಮ್ಮ ಗಮನಕ್ಕೆ ತಂದು ಮಾಡಿದ್ದರೆ ಇಷ್ಟೆಲ್ಲಾ ಗೊಂದಲ ಆಗುತ್ತಿರಲಿಲ್ಲ. ಏನು ಒಪ್ಪಂದ ಆಗಿತ್ತು ಎಂದು ನಮಗೆ ತಿಳಿದಿಲ್ಲ. ಅವರವರೇ ಚರ್ಚೆ ಮಾಡಿ ನಿರ್ಧಾರ ಮಾಡಿಕೊಂಡಿದ್ದರು. ಹೀಗಾಗಿ ಈ ಗೊಂದಲಗಳು ಸೃಷ್ಟಿಯಾಗಿವೆ. ಈಗ ಗೊಂದಲ ಬಗೆಹರಿದಂತೆ ಕಾಣುತ್ತಿದೆ. ಈ ವಿಚಾರದಲ್ಲಿ ಅಭಿಪ್ರಾಯ ಹೇಳಲು ಹಿರಿಯರು, ಕಿರಿಯರು ಎಂಬ ಭೇದವಿಲ್ಲ. 5 ವರ್ಷ ಸಿದ್ದರಾಮಯ್ಯ ಮುಖ್ಯಮಂತ್ರಿ ಎಂದು ಅವರು ಹಿಂದೆಯೂ ಹೇಳಿದ್ದರು, ಈಗಲೂ ಅದನ್ನೇ ಹೇಳಿದ್ದಾರೆ. ಐದು ವರ್ಷ ಮುಂದುವರೆಯಲೂಬಹುದು. ಸಿಎಂ ಆಗಲು ಮತ್ತೊಬ್ಬರಿಗೆ ಅವಕಾಶ ಇದೆಯೋ, ಇಲ್ಲವೋ ಎಂಬುದು ಹೈಕಮಾಂಡ್ ತೀರ್ಮಾನಿಸುತ್ತದೆ ಎಂದರು.

ದೇವರಲ್ಲಿ ನಾಡಿಗೆ ಹಾಗೂ ನನಗೂ ಒಳ್ಳೆಯದಾಗಲಿ ಎಂದು ಪ್ರಾರ್ಥನೆ ಮಾಡಿದ್ದೇನೆ. ಇನ್ನೂ ಎರಡೂವರೆ ವರ್ಷ ಉತ್ತಮ ಆಡಳಿತ ಕೊಡುವುದು ನಮ್ಮ ಮುಂದೆ ಇದೆ. ದೇವರ ಸನ್ನಿಧಿಯಲ್ಲಿ ಹೆಚ್ಚು ರಾಜಕೀಯ ಮಾತನಾಡುವುದಿಲ್ಲ. ನಮ್ಮಲ್ಲೇ ಮೊದಲು ಎಂಬಂತೆ ಮಾಧ್ಯಮದವರಿಗೆ ಎಲ್ಲಾ ಬೆಳವಣಿಗೆ ಗೊತ್ತಾಗುತ್ತದೆ ಎಂದು ಲೇವಡಿ ಮಾಡಿದರು.

ಸೆಪ್ಟೆಂಬರ್ ಬಳಿಕ ಯಾವ ಕ್ರಾಂತಿಯೂ ಆಗಲ್ಲ

ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಸ್ಪಷ್ಟನೆ



ಚಾಮುಂಡೇಶ್ವರಿಯ ದರ್ಶನ ಪಡೆದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್

ಮೈಸೂರು, ಜು.11(ಎಂಟಿವೈ)– ರಾಜ್ಯ ರಾಜಕೀಯದಲ್ಲಿ ಸೆಪ್ಟೆಂಬರ್ ಬಳಿಕ ಯಾವುದೇ ಕ್ರಾಂತಿ ಆಗಲ್ಲ. ಎಲ್ಲವೂ ಶಾಂತವಾಗಿರಲಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ತಿಳಿಸಿದ್ದಾರೆ.

ಚಾಮುಂಡಿ ಬೆಟ್ಟದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಐದು ವರ್ಷಗಳ ಕಾಲ ನಾನೇ ಸಿಎಂ ಎಂದು ಹೇಳಿದ ಮೇಲೆ ಬೇರೆ ಚರ್ಚೆಗೆ ಅವಕಾಶ ಇಲ್ಲ. ಈ ಬಗ್ಗೆ ಪದೇ ಪದೆ ಮಾತನಾಡುವುದು ಸರಿ ಇಲ್ಲ. ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಸಿಎಂ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಈಗಾಗಲೇ ಮಾತನಾಡಿದ್ದು, ಈ ಬಗ್ಗೆ ಮಾತನಾಡುವಷ್ಟು ದೊಡ್ಡವರು ನಾವಲ್ಲ. ನಮ್ಮದು ರಾಷ್ಟ್ರೀಯ ಪಕ್ಷ. ಏನೇ ಇದ್ದರೂ ಹೈಕಮಾಂಡ್ ತೀರ್ಮಾನ ಕೈಗೊಳ್ಳಲಿದೆ ಎಂದು ಹೇಳಿದರು.

ಸಕಾಲಕ್ಕೆ ಗೃಹಲಕ್ಷ್ಮೀ ಯೋಜನೆಯ ಹಣ ಸಂದಾಯ: ಮೂರು ತಿಂಗಳಿಗೊಮ್ಮೆ ಗೃಹಲಕ್ಷ್ಮೀ ಯೋಜನೆಯ ಹಣ ಕೊಡಲಾಗುತ್ತದೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ಎಂ.ರೇವಣ್ಣ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ನಾವು ಪ್ರತಿ ತಿಂಗಳು ಹಣ ಹಾಕುತ್ತಿದ್ದೇವೆ. ಮೇ ತಿಂಗಳವರೆಗೂ ಹಣ ಹಾಕಲಾಗಿದೆ. ಜೂನ್ ತಿಂಗಳ ಹಣದ ಪ್ರಕ್ರಿಯೆ ನಡೆಯುತ್ತಿದೆ. ನಮಗೆ ಹಣ ಹಾಕಲು ಯಾವ ತೊಡಕುಗಳೂ ಇಲ್ಲ ಎಂದು ಸ್ಪಷ್ಟಪಡಿಸಿದರು.

ನಾಡಿಗೆ ಒಳ್ಳೆಯದಾಗಲಿ

ಚಾಮುಂಡೇಶ್ವರಿಯಲ್ಲಿ ಬಿಎಸ್‌ವೈ ಪ್ರಾರ್ಥನೆ



ಮೈಸೂರು, ಜು.11(ಎಂಟಿವೈ)– ನಾಡಿಗೆ ಒಳ್ಳೆಯದಾಗಲಿ ಎಂದು ದೇವರಲ್ಲಿ ಪ್ರಾರ್ಥಿಸಿದ್ದೇನೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದ್ದಾರೆ.

ಆಷಾಢ ಶುಕ್ರವಾರದ ಹಿನ್ನೆಲೆಯಲ್ಲಿ ಕುಟುಂಬ ಸದಸ್ಯರೊಂದಿಗೆ ಚಾಮುಂಡಿಬೆಟ್ಟಕ್ಕೆ ಬಂದು ವಿಶೇಷ ಪೂಜೆ ಸಲ್ಲಿಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಪುನಸ್ಕಾರ ನೆರವೇರುತ್ತಿವೆ. ನಾವು ಕುಟುಂಬ ಸಮೇತ ದೇವಿಯ ದರ್ಶನ ಮಾಡಿದ್ದೇವೆ. ನಾಡಿನ ಜನತೆಗೆ ಒಳಿತಾಗಲೆಂದು ಚಾಮುಂಡೇಶ್ವರಿ ದೇವಿಗೆ ಪ್ರಾರ್ಥನೆ ಸಲ್ಲಿಸಿದ್ದೇನೆ. ಉತ್ತಮ ಮಳೆ–ಬೆಳೆ ಆಗಿ ನಾಡು ಸಮೃದ್ಧವಾಗಲಿ. ಎಲ್ಲರಿಗೂ ಒಳಿತಾಗಲಿ ಎಂದು ದೇವಿಯಲ್ಲಿ ಬೇಡಿಕೊಂಡಿದ್ದೇನೆ ಎಂದರು. ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಬದಲಾವಣೆಕ್ಕೆ ವಿಚಾರ ಪ್ರತಿಕ್ರಿಯಿಸಲು ನಿರಾಕರಿಸಿದ ಅವರು, ಇಲ್ಲಿ ರಾಜಕೀಯ ವಿಷಯ ಬೇಡ. ಆ ಬಗ್ಗೆ ಮಾತನಾಡುವುದು ಸೂಕ್ತವಲ್ಲ ಎಂದು ತಿಳಿಸಿದರು.



ಮೂರನೇ ಆಷಾಢ ಶುಕ್ರವಾರ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡರು ಪತ್ನಿ ಹಾಗೂ ಮಕ್ಕಳೊಂದಿಗೆ ಚಾಮುಂಡಿಬೆಟ್ಟಕ್ಕೆ ತೆರಳಿ ದೇವಿಯ ದರ್ಶನ ಪಡೆದರು.

ಮೂರನೇ ಆಷಾಢ ಶುಕ್ರವಾರ

ಚಾಮುಂಡಿಬೆಟ್ಟದಲ್ಲಿ ಅಪಾರ ಭಕ್ತರಿಂದ ನಾಡದೇವತೆ ದರ್ಶನ



ಗಜಲಕ್ಷ್ಮಿ ಅಲಂಕಾರದಲ್ಲಿ ಕಂಗೊಳಿಸುತ್ತಿರುವ ಚಾಮುಂಡೇಶ್ವರಿ ಉತ್ಸವ ಮೂರ್ತಿ.

ಮೈಸೂರು, ಜು.11(ಎಂಟಿವೈ)– ಆಷಾಢ ಮಾಸದ ಮೂರನೇ ಶುಕ್ರವಾರವಾದ ಇಂದು ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯದ ವಿಶೇಷ ಪೂಜಾ ಮಹೋತ್ಸವದಲ್ಲಿ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡು, ದೇವಿ ದರ್ಶನ ಪಡೆದರು.

ಮುಂಜಾನೆಯಿಂದಲೇ ಚಾಮುಂಡಿ ಬೆಟ್ಟದತ್ತ ಧಾವಿಸಿದ ಭಕ್ತ ಗಣ, ಧರ್ಮ ದರ್ಶನ, 300 ರೂ ಹಾಗೂ 2 ಸಾವಿರ ರೂ. ಟಿಕೆಟ್ ಸಾಲಿನಲ್ಲಿ ತೆರಳಿ ದೇವಿ ದರ್ಶನ ಪಡೆದರು. ಅಲ್ಲದೆ ಮೆಟ್ಟಿಲುಗಳ ಮೂಲಕವೂ ಬೆಟ್ಟ ಹತ್ತಿ ಬಂದ ಭಕ್ತರು ನಾಡದೇವಿಯನ್ನು ಕಣ್ತುಂಬಿಕೊಂಡು ಭಕ್ತಿಭಾವ ಪ್ರದರ್ಶಿಸಿದರು.

ಚಾಮುಂಡೇಶ್ವರಿ ತಾಯಿ ಲಕ್ಷ್ಮೀ ಅಲಂಕಾರದಲ್ಲಿ ಭಕ್ತಾಧಿಗಳಿಗೆ ದರ್ಶನ ನೀಡಿದರೆ, ದೇವಾಲಯದ ಆವರಣದಲ್ಲಿರುವ ಉತ್ಸವಮೂರ್ತಿಗೆ ಗಜಲಕ್ಷ್ಮೀ ಅಲಂಕಾರ ಮಾಡಲಾಗಿತ್ತು. ಆನೆಯ ಮೇಲೆ ತಾಯಿ ಚಾಮುಂಡೇಶ್ವರಿ ಆಸೀನಳಾದಂತೆ ಅಲಂಕಾರ ಮಾಡಿದ್ದು, ಭಕ್ತರು ಪುನೀತರಾಗುವಂತಿತ್ತು. ಅಲಂಕರಿಸಿದ್ದ ಆನೆಯೂ ಅರ್ಜುನನ್ನೇ ಹೋಲುವಂತ್ತಿತ್ತು. ಭಕ್ತರು ಜಂಬೂಸವಾರಿ ಮೆರವಣಿಗೆ ನೆನೆಸಿಕೊಳ್ಳುವಂತೆ ಅಲಂಕಾರ ಮಾಡಲಾಗಿತ್ತು.

ಸಂಪ್ರದಾಯದಂತೆ ಮುಂಜಾನೆ 3.30 ರಿಂದಲೇ ಚಾಮುಂಡೇಶ್ವರಿಗೆ ದೇವಾಲಯದ ಪ್ರಧಾನ ಆಗಮಿಕ ಡಾ.ಎನ್.ಶಶಿಶೇಖರ್ ದೀಕ್ಷಿತ್ ಸಮ್ಮುಖದಲ್ಲಿ ಮಹನ್ಯಾಸ ಪೂರ್ವಕ ರುದ್ರಾಭಿಷೇಕ, ರುದ್ರಾಭಿಷೇಕ, ಪುಣ್ಯಾಹ, ಪುಷ್ಪಾರ್ಚನೆ ಮಾಡಲಾಯಿತು. ಬಳಿಕ ಲಕ್ಷ್ಮೀ ಅಲಂಕಾರ ಮಾಡಿ, ಮಂಗಳಾರತಿ ನಂತರ ಬೆಳಗ್ಗೆ 5.30ರಿಂದ ಭಕ್ತರಿಗೆ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು.

ದೇವಾಲಯದ ಆವರಣ ಈ ವಾರ ಕಮಲದ ಹೂ ಸೇರಿದಂತೆ ವಿವಿಧ ಬಣ್ಣಗಳ ಹೂಗಳ ಅಲಂಕಾರದಿಂದ ಕಂಗೊಳಿಸಿತು. ದೇವಾಲಯದ ಗರ್ಭಗುಡಿ ಮುಂಭಾಗದ ಪ್ರಾಂಗಣ ಹಾಗೂ ಗರುಡ ಕಂಬ ಬಳಿ ಮಾಡಲಾಗಿದ್ದ ಅಲಂಕಾರ ಗಮನ ಸೆಳೆಯಿತು. ಅಲ್ಲದೇ ದೇವಾಲಯ ಪ್ರವೇಶ ದ್ವಾರದಲ್ಲಿಯೂ ಹೂವಿನ ಲೋಕ ಸೃಷ್ಟಿಯಾಗಿತ್ತು.

ಖಾಸಗಿ ವಾಹನ ಪ್ರವೇಶ ನಿರ್ಬಂಧ: ಭಕ್ತರ ದಂಡೇ ಹರಿದು ಬಂದ ಹಿನ್ನೆಲೆಯಲ್ಲಿ ಎಂದಿನಂತೆ ಚಾಮುಂಡಿಬೆಟ್ಟಕ್ಕೆ ಖಾಸಗಿ ಹಾಗೂ ಪ್ರವಾಸಿ ವಾಹನಗಳ ಪ್ರವೇಶ ನಿರ್ಬಂಧಿಸಲಾಗಿತ್ತು ಲಲಿತ ಮಹಲ್ ಪ್ಯಾಲೇಸ್ ಮೈದಾನದಲ್ಲಿ ಖಾಸಗಿ ವಾಹನಗಳನ್ನು ನಿಲುಗಡೆ ಮಾಡಿ, ದೇವಾಲಯದ ಆಡಳಿತ ಮಂಡಳಿಯಿಂದ ವ್ಯವಸ್ಥೆ ಮಾಡಿದ್ದ ಉಚಿತ ಬಸ್‌ಗಳಲ್ಲಿ ಭಕ್ತರು ಹಾಗೂ ಪ್ರವಾಸಿಗರು ಬೆಟ್ಟಕ್ಕೆ ಬಂದು ದೇವಿಯ ದರ್ಶನ ಪಡೆಯಲು ಹಾತೊರೆದರು.

ಮೆಟ್ಟಿಲೇರಿ ಬಂದ ಭಕ್ತ ಗಣ: ಆಷಾಢ ಶುಕ್ರವಾರದ ಅಂಗವಾಗಿ ಮೆಟ್ಟಿಲು ಮೂಲಕವೂ ಭಕ್ತರ ಸಂಖ್ಯೆ ಹೆಚ್ಚಾಗಿತ್ತು. ಮುಂಜಾನೆ 4 ಗಂಟೆಯಿಂದಲೇ ಪಾದದ ಬಳಿ ಭಕ್ತರು ಆಗಮಿಸಿದ್ದರು. ಬೆಳಗ್ಗೆ 5 ಗಂಟೆಗೆ ಪಾದದ ಗೇಟ್ ತೆರೆಯಲಾಯಿತು. ಬಳಿಕ ಹರಕೆ ಹೊತ್ತ ಭಕ್ತರು ಬೆಟ್ಟ ಹತ್ತಲು ಆರಂಭಿಸಿದರು. ಸಂಜೆ 6 ಗಂಟೆವರೆಗೂ ಭಕ್ತರು ಮೆಟ್ಟಿಲು ಮಾರ್ಗದಲ್ಲಿ ಸಾಗಿ, ದೇವಿ ದರ್ಶನ ಪಡೆದರು.

ಗಣ್ಯರ ಭೇಟಿ: ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಗೃಹ ಸಚಿವ ಡಾ.ಜಿ.ಪರಮೇಶ್ವರ್, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಸಂಸದ ಬಿ.ವೈ. ರಾಘವೇಂದ್ರ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ಎಂ.ರೇವಣ್ಣ, ಶಾಸಕ ಎ.ಮಂಜು, ನಟ ಶಶಿಕುಮಾರ್ ಸೇರಿದಂತೆ ಇನ್ನಿತರ ಗಣ್ಯರು ದೇವಿ ದರ್ಶನ ಪಡೆದರು.



ಚಾಮುಂಡಿಬೆಟ್ಟದ ಆಷಾಢ ಮಾಸದ ಮೂರನೇ ಶುಕ್ರವಾರದಂದು ನಡೆದ ವಿಶೇಷ ಪೂಜಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಮೆಟ್ಟಿಲು ಮೂಲಕ ಬೆಟ್ಟಕ್ಕೆ ಬಂದ ಭಕ್ತರು.

ವಿಐಪಿಗಳಿಂದ ರೋಸಿ ಹೋದ ಭಕ್ತರು!

- ಗಣ್ಯರೊಂದಿಗೆ ಬಂದವರು ಬ್ಯಾರಿಕೇಡ್ ಭೇದಿಸಿ ನುಗ್ಗಿದರು!
- ಗೇಟ್‌ಗೆ ಬೀಗ ಹಾಕಿದ ವಿಚಾರದಲ್ಲಿ ಪೊಲೀಸ್ ಆಯುಕ್ತರು–ಡಾ. ರೂಪಾ ಮಾತಿನ ಚಕಮಕಿ



ದೇವಾಲಯಕ್ಕೆ ನುಗ್ಗಲು ಪರದಾಡುತ್ತಿರುವ ವಿಐಪಿ ಹಿಂಬಾಲಕರು.

ಮೈಸೂರು, ಜು.11(ಎಂಟಿವೈ)–ಮೂರನೇ ಆಷಾಢ' ಶುಕ್ರವಾರದ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟಕ್ಕೆ ಇಂದು ವಿಐಪಿಗಳು ಹಾಗೂ ಅವರ ಹಿಂಬಾಲಕರ ಕಾರುಬಾರಿನಿಂದ ರೋಸಿ ಹೋದ ಭಕ್ತರು, ಅವರಿಗೆ ಹಿಡಿಶಾಪ ಹಾಕಿದರು.

ಮೂರನೇ ಆಷಾಢ ಶುಕ್ರವಾರವಾದ ಇಂದು ಬೆಟ್ಟಕ್ಕೆ ಬಂದ ಭಕ್ತರು ಹಾಗೂ ವಿಐಪಿಗಳ ಸಂಖ್ಯೆ ಹೆಚ್ಚಾಗಿತ್ತು. ಕೆಲವು ಭಕ್ತರು ಸಚಿವರು ಹಾಗೂ ಶಾಸಕರ ಶಿಫಾರಸ್ಸು ಪತ್ರಗಳನ್ನು ತಂದಿದ್ದರಾದರೂ ಪೊಲೀಸರು ಅವುಗಳಿಗೆ ಮನ್ನಣೆ ನೀಡದೇ, ಬೇಕಿದ್ದರೆ ಟಿಕೆಟ್ ಪಡೆದು ದರ್ಶನ ಮಾಡುವಂತೆ ಸೂಚಿಸಿದರು. ಇದರಿಂದ ಪದೇ ಪದೆ ಪೊಲೀಸರು ಹಾಗೂ ಶಿಫಾರಸ್ಸು ಪತ್ರವುಳ್ಳವರ ನಡುವೆ ಮಾತಿನ ಚಕಮಕಿ ನಡೆಯುತ್ತಲೇ ಇತ್ತು.

ವಿಐಪಿಗಳಿಂದ ದರ್ಶನ ವಿಳಂಬ: ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ, ಗೃಹ ಸಚಿವ ಡಾ.ಜಿ. ಪರಮೇಶ್ವರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಶಾಸಕ ಎ.ಮಂಜು, ಸಂಸದ ಬಿ.ವೈ.ರಾಘವೇಂದ್ರ, ಹೆಚ್.ಎಂ.ರೇವಣ್ಣ ಇನ್ನಿತರರು ತಮ್ಮ ಬೆಂಬಲಿಗರೊಂದಿಗೆ ಒಬ್ಬರಾದ ಮೇಲೆ ಒಬ್ಬರಂತೆ ದೇವಿ ದರ್ಶನಕ್ಕೆ ಬರುತ್ತಲೇ ಇದ್ದರು. ಇದರಿಂದ ಇತರೆ ಭಕ್ತರಿಗೆ ದೇವಾಲಯ ಪ್ರವೇಶಿಸಲು ತೊಂದರೆ ಉಂಟಾಯಿತು. ಬಿ.ಎಸ್.ಯಡಿಯೂರಪ್ಪ, ತಮ್ಮ ಪುತ್ರ ಸಂಸದ ಬಿ.ವೈ.ರಾಘವೇಂದ್ರ ಹಾಗೂ ಕುಟುಂಬದ ಇನ್ನಿತರೆ ಸದಸ್ಯರೊಂದಿಗೆ ಆಗಮಿಸಿದ್ದರು. ಈ ವೇಳೆ ಇತರೆ ಭಕ್ತರಿಗೆ ದೇವಾಲಯ ಪ್ರಾಂಗಣ ಪ್ರವೇಶಕ್ಕೆ ತಡೆಯೊಡ್ಡಲಾಯಿತು. ಅಲ್ಲದೆ, ಸಚಿವರಾದ ಡಾ.ಜಿ.ಪರಮೇಶ್ವರ್, ಲಕ್ಷ್ಮೀ ಹೆಬ್ಬಾಳ್ಕರ್ ಬಂದಾಗಲೂ ಇತರೆ ಭಕ್ತರಿಗೆ ದರ್ಶನ ನಿರ್ಬಂಧಿಸಲಾಯಿತು. ಇದರಿಂದ ಧರ್ಮ ದರ್ಶನ, 300 ರೂ. ಹಾಗೂ 2 ಸಾವಿರ ರೂ. ಟಿಕೆಟ್ ಪಡೆದು ಸರದಿ ಸಾಲಿನಲ್ಲಿ ನಿಂತಿದ್ದ ಭಕ್ತರು ಕಾದು ನಿಲ್ಲಬೇಕಾಯಿತು. ಈ ವೇಳೆ ಕೆಲವರು ಅಧಿಕಾರಿಗಳು, ವಿಐಪಿಗಳಿಗೆ ಹಿಡಿಶಾಪ ಹಾಕುತ್ತಿದ್ದರು.

40 ಸಾವಿರ ಲಡ್ಡು ವಿತರಣೆ: ಬೆಂಗಳೂರಿನ ಚಾಮುಂಡೇಶ್ವರಿ ಸೇವಾ ಸಮಿತಿಯ 25 ಜನರ ತಂಡ ಬೆಳಗ್ಗೆ ಚಾಮುಂಡಿ ಬೆಟ್ಟದ ದಾಸೋಹ ವ್ಯವಸ್ಥೆ ಮಾಡಿದ್ದ ಸ್ಥಳದಲ್ಲಿ ಭಕ್ತಾದಿಗಳಿಗೆ 40 ಸಾವಿರ ಲಡ್ಡು ವಿತರಿಸಿದರು. ಕಳೆದ ಮೂರು ವರ್ಷದಿಂದ ಮೂರನೇ ಶುಕ್ರವಾರದಂದು ಚಾಮುಂಡೇಶ್ವರಿ ದರ್ಶನ ಪಡೆಯುವ ಭಕ್ತರಿಗೆ ಲಡ್ಡು ವಿತರಿಸುತ್ತಿದ್ದೇವೆ. ಎಲ್ಲ ಭಕ್ತಾಧಿಗಳಿಗೆ ಪ್ರಸಾದ ಸಿಗುವುದಿಲ್ಲ. ಹಾಗಾಗಿ ಅಂತಹವರಿಗೆ ಪ್ರಸಾದ ಸಿಗಲಿ ಎಂಬ ಕಾರಣಕ್ಕೆ ಈ ಸೇವಾ ಕಾರ್ಯ ಮಾಡುತ್ತಿದ್ದೇವೆ ಎಂದು ಸಮಿತಿ ಅಧ್ಯಕ್ಷ ಮಹೇಶ್ ತಿಳಿಸಿದರು.

ಮಹಿಳಾಧಿಕಾರಿಗಳ ಮಾತಿನ ಚಕಮಕಿ

ದೇವಾಲಯಕ್ಕೆ ಗಣ್ಯರ ಭೇಟಿಯಿಂದಾಗಿ 2 ಸಾವಿರ ರೂ., 300 ರೂ. ಟಿಕೆಟ್ ಪಡೆದವರು ಹಾಗೂ ಧರ್ಮ ದರ್ಶನದ ಸಾಲಿನಲ್ಲಿ ನಿಂತಿದ್ದ ಭಕ್ತರಿಗೆ ಪ್ರವೇಶವನ್ನು ಕೆಲ ಕಾಲ ನಿರ್ಬಂಧಿಸಲಾಗಿತ್ತು. ಹಾಗಾಗಿ ದೇವಾಲಯದ ಹೊರಗೆ ಸರದಿ ಸಾಲಿನಲ್ಲಿ ನೂಕು–ನುಗ್ಗಲು ಉಂಟಾಗಿತ್ತು. ಇದನ್ನು ಗಮನಿಸಿದ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಪ್ರವೇಶ ದ್ವಾರದ ಗೇಟ್‌ಗೆ ಬೀಗ ಹಾಕಿರುವ ವಿಚಾರ ತಿಳಿದು, ಕೆರಳಿ ಕೆಂಡವಾದರು. ಕೂಡಲೇ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಎಂ.ಜಿ.ರೂಪ ಅವರಿಗೆ ಗೇಟ್ ಬೀಗ ಹಾಕಿರುವುದಕ್ಕೆ ತರಾಟೆಗೆ ತೆಗೆದುಕೊಂಡರು. ಇದಕ್ಕೆ ರೂಪ ಅವರು ಬೀಗ ಹಾಕಿಸಿರುವುದು ನಾನಲ್ಲ, ಪೊಲೀಸ್ ಸಿಬ್ಬಂದಿ ಎಂದು ಪ್ರತಿಕ್ರಿಯಿಸಿದ್ದಾರೆ. ಈ ವೇಳೆ ಪೊಲೀಸ್ ಆಯುಕ್ತರು, ತಾವು ಭದ್ರತೆಯಿಂದ ಪೊಲೀಸರನ್ನು ವಾಪಸ್ ಕರೆದುಕೊಂಡು ಹೋಗುತ್ತೇನೆ ಎಂದು ಖಡಕ್ ಆಗಿ ಎಚ್ಚರಿಸಿದ್ದಾರೆ. ಈ ಇಬ್ಬರೂ ಮಹಿಳಾ ಅಧಿಕಾರಿಗಳ ಮಾತಿನ ಚಕಮಕಿ ವೇಳೆ ಅಲ್ಲಿಯೇ ಇದ್ದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಮಧ್ಯ ಪ್ರವೇಶಿಸಿ, ರೂಪ ಅವರಿಂದ ಮಾಹಿತಿ ಪಡೆದರು.

ಬ್ಯಾರಿಕೇಡ್ ತಳ್ಳಿ ನುಗ್ಗಿದ ಭಕ್ತರು

ಗಣ್ಯರೊಂದಿಗೆ ಬಂದು, ವಿಶೇಷ ಸಾಲಿನಲ್ಲಿ ಸೇರಿಕೊಂಡ 200ಕ್ಕೂ ಹೆಚ್ಚು ಮಂದಿಯನ್ನು ಪೊಲೀಸರು ತಡೆದು, ಅವರನ್ನು ಒಂದೆಡೆ ಬ್ಯಾರಿಕೇಡ್ ಹಾಕಿ ಅಲ್ಲಿ ಇರಿಸಿದರು. ಕೆಲ ಹೊತ್ತು ಕಾದು ನಿಂತಿದ್ದ ಭಕ್ತರು, ಒಮ್ಮೆಲೆ ಬ್ಯಾರಿಕೇಡ್ ತಳ್ಳಿ ಬೀಳಿಸಿ, ನಾವು ವಿಐಪಿ ಕಡೆಯವರು ಎಂದು ದೇವಾಲಯದತ್ತ ನುಗ್ಗಿದರು. ಬಳಿಕ ಕೆಲ ಸಮಯದ ನಂತರ ಪೊಲಿಸರು ಬಂದು ಮತ್ತೆ ಬ್ಯಾರಿಕೇಡ್ ಸರಿ ಮಾಡಿ, ವ್ಯವಸ್ಥೆ ಸುಧಾರಿಸಿದರು.

ಐದು ವರ್ಷ ನಾನೇ ಮುಖ್ಯಮಂತ್ರಿ ಎಂದು ಸಿದ್ದರಾಮಯ್ಯ ಪದೇ ಪದೆ ಹೇಳುವುದೇ ಅನುಮಾನ ಹುಟ್ಟಿಸುತ್ತಿದೆ

- ಶಾಸಕ ಎ.ಮಂಜು ಪ್ರತಿಕ್ರಿಯೆ
- ಡಿ.ಕೆ.ಶಿವಕುಮಾರ್ ಈಗ ಸಿಎಂ ಆದರೆ ಆದಂಗೆ; ಇಲ್ಲ ಇನ್ನು ಸಾಧ್ಯವೇ ಇಲ್ಲ
- ಜಿ.ಟಿ.ದೇವೇಗೌಡರು ನಮ್ಮ ಪಕ್ಷದಲ್ಲೇ ಇದ್ದಾರೆ; ಸಮಸ್ಯೆ ನಿವಾರಣೆ ಆಗುತ್ತೆ!



ಮೈಸೂರು,ಜು.11(ಎಂಟಿವೈ)– ರಾಜ್ಯದ ಹಾಲಿ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯ, ಪದೇ ಪದೆ ಐದು ನಾನೇ ಮುಖ್ಯಮಂತ್ರಿ ಎಂದು ಹೇಳುತ್ತಿರುವುದರ ಹಿಂದೆ ಅನುಮಾನ ವ್ಯಕ್ತವಾಗುತ್ತಿದೆ ಎಂದು ಶಾಸಕ ಎ.ಮಂಜು ಟೀಕಿಸಿದ್ದಾರೆ.

ಚಾಮುಂಡಿಬೆಟ್ಟದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿಯಾಗಲು ಇದು ಕೊನೆ ಅವಕಾಶ. ಈಗ ಸಿಎಂ ಆಗದಿದ್ದರೆ ಇನ್ನು ಎಂದಿಗೂ ಅವರು ಸಿಎಂ ಆಗುವುದಕ್ಕೆ ಸಾಧ್ಯವೇ ಇಲ್ಲ. ಡಿ.ಕೆ.ಶಿವಕುಮಾರ್ ಸಿಎಂ ಆಗುತ್ತಾರೆಂಬ ಕಾರಣದಿಂದ ಹಳೇ ಮೈಸೂರು ಭಾಗದಲ್ಲಿ ಒಕ್ಕಲಿಗರು ಕಾಂಗ್ರೆಸ್‌ಗೆ ಮತ ಹಾಕಿದರು. ಇದರಿಂದ ಕಾಂಗ್ರೆಸ್‌ಗೆ 30–40 ಸೀಟು ಹೆಚ್ಚಾದವು. ಈಗ ಜನರಿಗೆ ನಾವು ಮೋಸ ಹೋಗಿದ್ದೇವೆ ಎಂದು ಅರ್ಥವಾಗುತ್ತಿದೆ ಎಂದರು.


2013 ರಲ್ಲಿ ಇದ್ದಂತಹ ಸಿದ್ದರಾಮಯ್ಯ ಈಗ ಸಂಪೂರ್ಣವಾಗಿ ಬದಲಾಗಿದ್ದಾರೆ. ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಒಪ್ಪಂದವೇ ಆಗಿದ್ದರೆ ಸಿದ್ದರಾಮಯ್ಯ ಅಧಿಕಾರ ಬಿಟ್ಟುಕೊಡಬೇಕು. ಕಾಂಗ್ರೆಸ್‌ನಲ್ಲಿ ಶಾಸಕರಿಂದ ಏನು ತೀರ್ಮಾನ ಆಗುವುದಿಲ್ಲ. ಹೈಕಮಾಂಡ್ ಎಲ್ಲವನ್ನೂ ತೀರ್ಮಾನ ಮಾಡುತ್ತದೆ. ಸಿದ್ದರಾಮಯ್ಯ ಈಗ ರಾಜ್ಯದ ಮುಖ್ಯಮಂತ್ರಿ. ಆದರೂ ಪದೇ ಪದೆ ಯಾಕೆ ನಾನೇ ಮುಖ್ಯಮಂತ್ರಿ ಎಂದು ಅವರೇ ಹೇಳುತ್ತಿದ್ದಾರೆ ಎಂಬುದು ಗೊತ್ತಾಗುತ್ತಿಲ್ಲ. ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಕ್ಕೆ ದುಡ್ಡಿಲ್ಲ. ಇದನ್ನು ಮರೆ ಮಾಚಲು ಈ ರೀತಿ ಗೊಂದಲ ಸೃಷ್ಟಿ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಸಿದ್ದರಾಮಯ್ಯ ಆಗಲಿ, ಡಿ.ಕೆ.ಶಿವಕುಮಾರ್ ಆಗಲಿ ಯಾರು ಮುಖ್ಯಮಂತ್ರಿಯಾದರೂ ಜೆಡಿಎಸ್ ಮತ್ತು ಬಿಜೆಪಿವರಿಗೆ ಏನೂ ಸಮಸ್ಯೆ ಇಲ್ಲ. 2028ಕ್ಕೆ ನಾವು ಅಧಿಕಾರಕ್ಕೆ ಬಂದೇ ಬರುತ್ತೇವೆ ಎಂದು ಭವಿಷ್ಯ ನುಡಿದರು.

ಶಾಸಕ ಜಿ.ಟಿ ದೇವೇಗೌಡರು ನಮ್ಮ ಪಕ್ಷದಲ್ಲಿದ್ದಾರೆ. ಮನೆ ಅಂದ ಮೇಲೆ ಸಮಸ್ಯೆಗಳು ಇರುತ್ತವೆ. ನಂತರ ಎಲ್ಲವೂ ಬದಲಾಗುತ್ತವೆ. ಚುನಾವಣೆ ಬಂದಾಗ ನಾವೆಲ್ಲಾ ಒಟ್ಟಾಗಿ ಸೇರಿಕೊಳ್ಳುತ್ತೇವೆ. ಯಾವ ಸಮಸ್ಯೆಗಳು ಇಲ್ಲ. ಜಿ.ಟಿ ದೇವೇಗೌಡರ ಜೊತೆ ಮಾತನಾಡುತ್ತೇವೆ ಎಂದರು.

ಮುಖ್ಯಮಂತ್ರಿ ಬದಲಾವಣೆ ಕೇವಲ ಊಹಾಪೋಹ

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ಎಂ.ರೇವಣ್ಣ ಸ್ಪಷ್ಟನೆ




ಮೈಸೂರು, ಜು.11(ಎಂಟಿವೈ)– ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜೋಡೆತ್ತಿನಂತೆ ಕೆಲಸ ಮಾಡುತ್ತಿದ್ದು, ಮುಖ್ಯಮಂತ್ರಿ ಬದಲಾವಣೆ ಕೇವಲ ಊಹಾಪೋಹವಷ್ಟೇ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ಎಂ.ರೇವಣ್ಣ ಸ್ಪಷ್ಟಪಡಿಸಿದ್ದಾರೆ.


ಚಾಮುಂಡಿಬೆಟ್ಟದಲ್ಲಿ ದೇವರ ದರ್ಶನ ಪಡೆದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಬದಲಾವಣೆ ಕುರಿತು ಹೈಕಮಾಂಡ್ ಮಟ್ಟದಲ್ಲಿ ಚರ್ಚೆ ನಡೆದಿಲ್ಲ. ಕೆಲವೊಂದು ಗೊಂದಲಗಳಿತ್ತು. ಅದನ್ನು ಹೈಕಮಾಂಡ್ ಬಗೆಹರಿಸಿದೆ. ಸಿಎಂ ಕುರ್ಚಿಯ ವಿಚಾರದಲ್ಲಿ ನಾವು ಮಾಧ್ಯಮಗಳ ಮುಂದೆ ಮಾತನಾಡಬಾರದೆಂದು ಹೇಳಿದ್ದಾರೆ. ಸಭೆಗಳಲ್ಲಿ ಒಂದಿಬ್ಬರ ಶಾಸಕರ ಹೇಳಿಕೆಯ ಬಗ್ಗೆ ಚರ್ಚೆಯಾಗಿದೆ. ಯಾವ ಶಾಸಕರ ಬೆಂಬಲ ಯಾರಿಗೆ ಇದೆ ಎಂಬ ಪ್ರಶ್ನೆ ಈಗ ಯಾಕೆ ಬಂತು ಗೊತ್ತಿಲ್ಲ. ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಜೋಡೆತ್ತಿನ ರೀತಿ ಪಕ್ಷ ಕಟ್ಟಿ ಅಧಿಕಾರಕ್ಕೆ ತಂದಿದ್ದಾರೆ. ರಾಜಕಾರಣದಲ್ಲಿ ಎಲ್ಲರಿಗೂ ಆಸೆ ಇರುತ್ತದೆ. ಅಂತಿಮ ತೀರ್ಮಾನಗಳು ಹೈ ಕಮಾಂಡ್‌ಗೆ ಬಿಟ್ಟದ್ದು ಎಂದರು.

ಗೃಹ ಲಕ್ಷ್ಮೀ ಹಣ ನೀಡುವ ವಿಚಾರದಲ್ಲಿ ಕೆಲವರಿಗೆ ಹಣ ಅವರ ಖಾತೆಗೆ ಜಮೆ ಆಗಿರಲಿಲ್ಲ. ಜಿಎಸ್‌ಟಿ ವಿಚಾರದಲ್ಲಿ 1.20 ಸಾವಿರ ಫಲಾನುಭವಿಗಳಿಗೆ ಹಣ ಹೋಗಿರಲಿಲ್ಲ. ಅದರಲ್ಲಿ ಈಗ 58 ಸಾವಿರ ಜನರ ಸಮಸ್ಯೆ ಬಗೆಹರಿಸಿದ್ದೇವೆ. ಉಳಿದವರ ಸಮಸ್ಯೆ ಬಗೆಹರಿಸುತ್ತೇವೆ. ನಾವು ಅಧಿಕಾರಕ್ಕೆ ಬಂದಾಗಿನಿಂದ ಗೃಹ ಲಕ್ಷ್ಮೀ ಹಣ ನಿಲ್ಲಿಸಿಲ್ಲ. ಪ್ರತಿ ತಿಂಗಳು ಹಣ ಕೊಡಲು ಕೆಲವು ತೊಡಕುಗಳು ಇದೆ. ಹೀಗಾಗಿ ಮೂರು ತಿಂಗಳಿಗೊಮ್ಮೆ ಹಣ ನೀಡಲಾಗುತ್ತಿದೆ ಎಂದು ತಿಳಿಸಿದರು.

3ನೇ ಆಷಾಢ ಶುಕ್ರವಾರದ ಪ್ರಯುಕ್ತ ಚಾಮುಂಡೇಶ್ವರಿಗೆ ಪೂಜೆ



ಮೈಸೂರಿನ ಮಹದೇವಪುರ ಮುಖ್ಯ ರಸ್ತೆಯ ಟೆಲಿಕಾಂ ಕಾಲೋನಿಯಲ್ಲಿರುವ ಶ್ರೀ ಚಾಮುಂಡೇಶ್ವರಿ ಆಟೋ ನಿಲ್ದಾಣದಲ್ಲಿ 3ನೇ ಆಷಾಢ ಶುಕ್ರವಾರದ ಪ್ರಯುಕ್ತ ಆಟೋ ಚಾಲಕರು ಮತ್ತು ಮಾಲೀಕರ ಸಂಘದ ವತಿಯಿಂದ ತಾಯಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿ ಪ್ರಸಾದ ವಿನಿಯೋಗ ಮಾಡಲಾಯಿತು. ಕಾಲೋನಿ ಮುಖ್ಯಸ್ಥರಾದ ರಾಜಶೇಖರ್, ಮಧುಸೂದನ್ ಇನ್ನಿತರರಿದ್ದರು.



ಮೈಸೂರಿನ ದಾಸಪ್ಪ ವೃತ್ತದಲ್ಲಿ ಟಾಟಾ ಮ್ಯಾಜಿಕ್ ಚಾಲಕರು ಮತ್ತು ಮಾಲೀಕರು 3ನೇ ಆಷಾಢ ಶುಕ್ರವಾರದ ಪ್ರಯುಕ್ತ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿದರು.

ಮೈಸೂರು ಮಿತ್ರ
ಶನಿವಾರ 12 ಜುಲೈ 2025

ಜು.28ಕ್ಕೆ, 1300 ಕೋಟಿ ವೆಚ್ಚದ ಕಾಮಗಾರಿಗೆ ಸಿಎಂ, ಡಿಸಿಎಂ ಶಂಕುಸ್ಥಾಪನೆ

ಎಂಎಲ್‌ಸಿ ದಿನೇಶ್ ಗೂಳಿಗೌಡ ಮಾಹಿತಿ

ಮದ್ದೂರು, ಜು.11– ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಅವರು ಜು.28ರಂದು ಮದ್ದೂರು ತಾಲೂಕಿಗೆ ಭೇಟಿ ನೀಡಲಿದ್ದು, 1300 ಕೋಟಿ ರೂ.ಗೂ ಅಧಿಕ ವೆಚ್ಚದ ವಿವಿಧ ಅಭಿವೃದ್ಧಿ ಕಾಮ ಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯ ಸ್ವಾಮಿ ಸೇರಿದಂತೆ 10ಕ್ಕೂ ಹೆಚ್ಚು ಸಚಿವರು ಭಾಗವಹಿಸಲಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ತಿಳಿಸಿದರು.



ಕಾರ್ಯಕ್ರಮದಲ್ಲಿ ಎಂಎಲ್‌ಸಿ ದಿನೇಶ್ ಗೂಳಿಗೌಡ ಮಾತನಾಡಿದರು.

ಶಂಕುಸ್ಥಾಪನೆ ಕಾರ್ಯಕ್ರಮದ ಪೂರ್ವ ಭಾವಿ ಸಭೆಯಲ್ಲಿ ಮಾತನಾಡಿದ ಅವರು, ಮೈಸೂರು ಸಂಸ್ಥಾನದಲ್ಲಿ 1952ರಲ್ಲಿ ಚುನಾವಣಾ ರಾಜಕಾರಣ ಪ್ರಾರಂಭವಾದಾಗಿನಿಂದ ಮದ್ದೂರು ಕ್ಷೇತ್ರಕ್ಕೆ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು, ಸಚಿವರು ಒಟ್ಟಾಗಿ ಭೇಟಿ ನೀಡಿ ಇಷ್ಟೊಂದು ದೊಡ್ಡ ಪ್ರಮಾಣದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡುತ್ತಿರುವುದು ಇದೇ ಮೊದಲು ಎಂದು ಸಂತಸ ವ್ಯಕ್ತಪಡಿಸಿದರು.

ಶಾಸಕ ಉದಯ್‌ಗೌಡರು ಕಳೆದೆರಡು ವರ್ಷಗಳ ಅವಧಿಯಲ್ಲಿ ಮದ್ದೂರು ಕ್ಷೇತ್ರಕ್ಕೆ ಸಾವಿರಾರು ಕೋಟಿ ರೂ. ಕಾಮಗಾರಿ ತರುವಲ್ಲಿ ಯಶಸ್ವಿಯಾಗಿದ್ದಾರೆ. ಕಾವೇರಿ ನಿಗಮ, ಚಾಮುಂಡೇಶ್ವರಿ ವಿದ್ಯುತ್ ನಿಗಮ, ಸಣ್ಣ ನೀರಾವರಿ ನಿಗಮ, ಗ್ರಾಮೀಣ ಮತ್ತು ಪಂಚಾಯತಿ ಇಲಾಖೆ ಸೇರಿದಂತೆ ವಿವಿಧ ಮೂಲಗಳಿಂದ ಅನುದಾನ ತರುವಲ್ಲಿ ಅವರ ಪರಿಶ್ರಮ ಅಪಾರ ಎಂದರು.

ಇದು ಕೇವಲ ಸಾಧನಾ ಸಮಾವೇಶ ಮಾತ್ರವಲ್ಲದೆ, ಮುಂಬರುವ ತಾಪಂ ಮತ್ತು ಜಿಪಂ ಚುನಾವಣೆಗಳಿಗೆ ಸಿದ್ಧತೆಯೂ ಆಗಿದೆ. ಮದ್ದೂರಿನಲ್ಲಿ ಸ್ಪರ್ಧಿಸುವ ಎಲ್ಲಾ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಗೆದ್ದು, ಶಾಸಕ ಉದಯ್‌ಗೌಡರಿಗೆ ಶಕ್ತಿ ತುಂಬ ಬೇಕು ಎಂದ ಅವರು, ರಾಜ್ಯದಲ್ಲಿ 100 ಬ್ಲಾಕ್ ಕಾಂಗ್ರೆಸ್ ಕಚೇರಿಗಳು ಸ್ವಂತ ಕಟ್ಟಡದಲ್ಲಿರಬೇಕೆಂಬ ರಾಷ್ಟ್ರೀಯ ಮತ್ತು ರಾಜ್ಯ ನಾಯಕರ ಸಂಕಲ್ಪದ ಭಾಗವಾಗಿ ಶಾಸಕ ಉದಯ್ ಗೌಡರ ಕಾರ್ಯ ಶ್ಲಾಘನೀಯ ಎಂದರು.

ರಾಜ್ಯದಲ್ಲಿ ಕೇವಲ 8 ಶಾಸಕರು ಮಾತ್ರ ತಮ್ಮ ಸ್ವಂತ ನಿವೇಶನವನ್ನು ಕಾಂಗ್ರೆಸ್ ಟ್ರಸ್ಟ್‌ಗೆ ಬರೆದು ಕೊಟ್ಟಿದ್ದು, ಅವರಲ್ಲಿ ಉದಯಗೌಡರೂ ಒಬ್ಬರು. ಅವರು 6000 ಚದರ ಅಡಿ ವಿಸ್ತೀರ್ಣದ, ಕೋಟಿ ಗಟ್ಟಲೆ ಬೆಲೆಬಾಳುವ ಆಸ್ತಿಯನ್ನು ಕೆಪಿಸಿಸಿಗೆ ಕೊಡುಗೆ ನೀಡಿದ್ದಾರೆ. ಇತ್ತೀಚೆಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಈ ನಿವೇಶನವನ್ನು ಕಾಂಗ್ರೆಸ್ ಪಕ್ಷದ ಹೆಸರಿಗೆ ನೋಂದಾಯಿಸಿಕೊಂಡಿದ್ದಾರೆ ಎಂದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ 5 ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿದೆ. ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವ ಕುಮಾರ್ ಅವರು ಗ್ಯಾರಂಟಿಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುತ್ತಿದ್ದಾರೆ. ಮಂಡ್ಯ ಜಿಲ್ಲೆಯೊಂದರಲ್ಲೇ 4,48,000 ಮಹಿಳೆಯರ ಖಾತೆಗೆ 21 ತಿಂಗಳು ತಲಾ 2000 ರೂ. ಜಮೆ ಮಾಡಲಾಗಿದ್ದು, ಒಬ್ಬ ಮಹಿಳೆಗೆ 42,000 ರೂ. ಸಂದಾಯವಾಗಿದೆ. ಇನ್ನು ಜಿಲ್ಲೆಯ ಮಹಿಳೆಯರು 15.5 ಕೋಟಿಗೂ ಹೆಚ್ಚು ಉಚಿತ ಟಿಕೆಟ್ ಪಡೆದು ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣಿಸಿದ್ದಾರೆ. ಅಲ್ಲದೆ, ಜಿಲ್ಲೆಯ 4.84 ಲಕ್ಷ ಮನೆಗಳಿಗೆ ಉಚಿತ ವಿದ್ಯುತ್ ನೀಡಲಾಗಿದೆ. ನಮ್ಮ ಸರ್ಕಾರ ಯಶಸ್ವಿಯಾಗಿ ಗ್ಯಾರಂಟಿ ಯೋಜನೆ ಗಳನ್ನು ಜಾರಿ ಮಾಡುತ್ತಿದ್ದರೂ, ಬಿಜೆಪಿ ಮತ್ತು ಜೆಡಿಎಸ್‌ನವರು ವಿಧಾನಸೌಧದ ಒಳಗೆ ಮತ್ತು ಹೊರಗೆ ಟೀಕೆ ಮಾಡು ತ್ತಿವೆ. ಆದರೆ, ಅದಕ್ಕೆಲ್ಲ ನಮ್ಮ ಯೋಜನೆಗಳೇ ಉತ್ತರ ನೀಡುತ್ತಿದೆ ಎಂದರು. ಈ ವೇಳೆ ಶಾಸಕ ಕೆಎಂ. ಉದಯ್, ಮನ್‌ಮುಲ್ ಮಾಜಿ ಅಧ್ಯಕ್ಷ ಕದಲೂರು ರಾಮಕೃಷ್ಣ ಇನ್ನಿತರರಿದ್ದರು.

ತಿಮ್ಮನಕೊಪ್ಪಲು ಡೈರಿಗೆ ಅಧ್ಯಕ್ಷೆ, ಉಪಾಧ್ಯಕ್ಷೆ ಆಯ್ಕೆ



ಅಧ್ಯಕ್ಷೆಯಾಗಿ ಪೂರ್ಣಿಮಾ, ಉಪಾಧ್ಯಕ್ಷೆಯಾಗಿ ಎಂ.ಅನಿತ ಆಯ್ಕೆಯಾದರು.

ಪಾಂಡವಪುರ, ಜು.11– ತಾಲೂಕಿನ ತಿಮ್ಮನಕೊಪ್ಪಲು ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಅಧ್ಯಕ್ಷೆಯಾಗಿ ಪೂರ್ಣಿಮಾ, ಉಪಾಧ್ಯಕ್ಷೆಯಾಗಿ ಎಂ.ಅನಿತಾ ಶುಕ್ರವಾರ ಅವಿರೋಧವಾಗಿ ಆಯ್ಕೆಯಾದರು.

9 ಮಂದಿ ನಿರ್ದೇಶಕರ ಬಲದ ಸಂಘಕ್ಕೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಪೂರ್ಣಿಮಾ, ಉಪಾಧ್ಯಕ್ಷ ಸ್ಥಾನಕ್ಕೆ ಅನಿತಾ ಅವರನ್ನು ಹೊರತು ಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಮುಕ್ತ ಘೋಷಿಸಿದರು. ಇದೇ ವೇಳೆ ನೂತನ ಅಧ್ಯಕ್ಷೆ, ಉಪಾಧ್ಯಕ್ಷೆಯನ್ನು ಎಲ್ಲಾ ನಿರ್ದೇಶಕರು ಹಾಗೂ ಮುಖಂಡರು ಅಭಿನಂದಿಸಿದರು.

ಅಧ್ಯಕ್ಷೆ ಪೂರ್ಣಿಮಾ ಮಾತನಾಡಿ, ತಿಮ್ಮನಕೊಪ್ಪಲು ಡೈರಿ ಅಧ್ಯಕ್ಷೆಯಾಗಿ ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಎಲ್ಲಾ ನಿರ್ದೇಶಕರ ಸಹಕಾರ ಬೆಂಬಲ ಪಡೆದು ಡೇರಿ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಷೇರುದಾರರಿಗೆ ಮನ್‌ಮುಲ್‌ನಿಂದ ಸಿಗುವ ಸವಲತ್ತುಗಳನ್ನು ಕೊಡಿಸುವುದಾಗಿ ಭರವಸೆ ನೀಡಿದರು.

ಈ ವೇಳೆ ನಿರ್ದೇಶಕರಾದ ವಿ.ಪ್ರತಿಭಾ ಸ್ವಾಮಿ, ಪಾರ್ವತಮ್ಮ ಸುರೇಶ್, ರತ್ನ ಶಿವಕುಮಾರ್, ಸುನೀತ ಕುಮಾರ್, ಎಲ್.ಲಕ್ಷ್ಮಿ ಅಭಿಲಾಷ್, ಲಕ್ಷ್ಮಮ್ಮ ನಂಜುಂಡಾಚಾರ್, ಯಜಮಾನರಾದ ಗುರುರಾಜು, ಟಿ.ಟಿ.ಕುಮಾರ್, ಮಂಜು, ಬ್ರಹ್ಮಲಿಂಗು, ಮುಖಂಡರಾದ ಟಿ.ಎನ್.ಧರ್ಮಲಿಂಗು, ಟಿ.ಜೆ.ರವಿ, ಟಿ.ಎನ್.ಮಹಾಲಿಂಗು, ಟಿ.ಎಂ. ನಿಂಗೇಗೌಡ, ಟಿ.ಕೆ.ರಾಮಲಿಂಗೇಗೌಡ, ಟಿ.ಎಂ.ಪ್ರಕಾಶ್, ಕಾರ್ಯದರ್ಶಿ ನಂದಿನಿ, ಗ್ರಾಪಂ ಸದಸ್ಯ ಮನು, ವಿಎಸ್‌ಎಸ್‌ಎನ್‌ಬಿ ನಿರ್ದೇಶಕರ ಶಂಕರೇಗೌಡ, ಕೃಷ್ಣೇಗೌಡ ಸೇರಿದಂತೆ ಹಲವರಿದ್ದರು.

ಅಪ್ರಾಪ್ತೆಗೆ ಲೈಂಗಿಕ ಕಿರುಕುಳ: ಕಾಮುಕನಿಗೆ ಜೀವಾವಧಿ ಶಿಕ್ಷೆ

ಶ್ರೀರಂಗಪಟ್ಟಣ, ಜು.11– ಅಪ್ರಾಪ್ತ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಕಾಮುಕನಿಗೆ ಜೀವಾವಧಿ ಶಿಕ್ಷೆ ವಿಧಿಸಿ ಮಂಡ್ಯ ಜಿಲ್ಲಾ 2ನೇ ಸತ್ರ ನ್ಯಾಯಾಲಯದ ನ್ಯಾಯಾಧೀಶ ದಿಲೀಪ್ ಕುಮಾರ್ ಆದೇಶ ಹೊರಡಿಸಿದ್ದಾರೆ.

ತಾಲೂಕಿನ ಕೆಆರ್‌ಎಸ್ ರಸ್ತೆ ಗ್ರಾಮದ ನಿವಾಸಿ ಶಿವಣ್ಣ(59) ಜೀವಾವಧಿ ಶಿಕ್ಷೆಗೆ ಒಳಗಾದವನು. ಈತ 2023ರ ಡಿ.11ರಂದು ಮಧ್ಯಾಹ್ನ ಮನೆ ಮುಂದೆ ಆಟವಾಡುತ್ತಿದ್ದ ಮೂರೂವರೆ ವರ್ಷದ ಬಾಲಕಿಯನ್ನು ಪುಸಲಾಯಿಸಿ ಮನೆಗೆ ಕರೆದೊಯ್ದು ಲೈಂಗಿಕ ಕಿರುಕುಳ ನೀಡಿದ್ದ. ಈ ಸಂಬಂಧ ಬಾಲಕಿ ತಾಯಿ ನೀಡಿದ ದೂರಿನ ಮೇರೆಗೆ ಕೆಆರ್‌ಎಸ್ ಠಾಣೆಯಲ್ಲಿ ಪೋಕ್ಸೋ ಪ್ರಕರಣ ದಾಖಲಾಗಿತ್ತು. ಪ್ರಕರಣ ಸಂಬಂಧ ಅಂದಿನ ವೃತ್ತ ನೀರಿಕ್ಷಕ ಪುನೀತ್ ತನಿಖೆ ನಡೆಸಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಪ್ರಕರಣದಲ್ಲಿ ಶಿವಣ್ಣ ಲೈಂಗಿಕ ಕಿರುಕುಳ ನೀಡಿರುವುದು ಸಾಬೀತಾದ ಹಿನ್ನಲೆಯಲ್ಲಿ ಮಂಡ್ಯ ಜಿಲ್ಲಾ 2ನೇ ಸತ್ರ ನ್ಯಾಯಾಲಯದ ನ್ಯಾಯಾಧೀಶ ದಿಲೀಪ್ ಕುಮಾರ್ ಕಾಮುಕನಿಗೆ ಜೀವಾವಧಿ ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದ್ದಾರೆ. ಸರ್ಕಾರದ ಪರ ಸರ್ಕಾರಿ ವಿಶೇಷ ಅಭಿಯೋಜಕ ಹೆಬ್ಬಕವಾಡಿ ನಾಗರಾಜು ವಾದ ಮಂಡಿಸಿದರು. ತನಿಖಾ ತಂಡದಲ್ಲಿದ್ದ ಎಸ್‌ಐಗಳಾದ ಬಸವರಾಜು, ಬಸವರಾಜ ಕರ್ಕಿಕಟ್ಟೆ, ಎಎಸ್‌ಐ ಸತೀಶ್, ಮುಖ್ಯ ಪೇದೆ ಯದುರಾಜ್, ಪೇದೆಗಳಾದ ರೇಣುಕುಮಾರ್, ಅಶ್ವಿನಿ, ಪುಟ್ಟಲಕ್ಷ್ಮಿ ಹಾಗೂ ಇತರೆ ಸಿಬ್ಬಂದಿಯನ್ನು ಮಂಡ್ಯ ಜಿಲ್ಲಾ ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ಪ್ರಶಂಸಿದ್ದಾರೆ.

ಸಾಮೂಹಿಕ ಮಹಾಲಕ್ಷ್ಮಿ ಆಷಾಢ ಪೂಜೆ



ಕಾರ್ಯಕ್ರಮದಲ್ಲಿ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿದರು.

ಮಂಡ್ಯ, ಜು.11– ಪ್ರಾಪಂಚಿಕತೆಯಲ್ಲಿ ಮುಳುಗಿರುವ ಮನಸ್ಸಿಗೆ ಆಧ್ಯಾತ್ಮಿಕತೆ ಕೊಟ್ಟಿದ್ದೆ ಆದರೆ ತಾಯಂದಿರು ಮಕ್ಕಳನ್ನು ಸರಿಯಾದ ರೀತಿ ಸಂಸ್ಕಾರ ಕೊಟ್ಟು ಬೆಳೆಸಲು ಸಾಧ್ಯ ಎಂದು ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ ತಿಳಿಸಿದರು.


ನಗರದ ಬಾಲಗಂಗಾಧರನಾಥ ಸಮುದಾಯ ಭವನದಲ್ಲಿ ಮಂಡ್ಯ ಜಿಲ್ಲಾ ಚುಂಚಶ್ರೀ ಮಹಿಳಾ ಒಕ್ಕಲಿಗರ ವೇದಿಕೆಯಿಂದ ನಡೆದ ಸಾಮೂಹಿಕ ಮಹಾಲಕ್ಷ್ಮೀ ಆಷಾಢ ಮಾಸದ ಪೂಜಾ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಬಹುಮುಖ್ಯವಾಗಿ ಮಕ್ಕಳನ್ನು ಹೆತ್ತು, ಬೆಳೆಸಿ ಸಂಸ್ಕಾರ ಕೊಡುವ ಶಕ್ತಿ ಇರುವುದು ತಾಯಂದಿರಲ್ಲಿ, ತಾಯಂದಿರಿಗೆ ಸಂಸ್ಕಾರವಿಲ್ಲವೆಂದರೆ ಅಪ್ಪಂದಿರು ಏನು ಮಾಡಲು ಸಾಧ್ಯವಿಲ್ಲ ಆದ್ದರಿಂದ ಆಧುನಿಕತೆ ಕಾಲದಲ್ಲಿ ಸಂಸ್ಕಾರದ ಕೊರತೆ ಎದ್ದು ಕಾಣುತ್ತಿರುವ ಸಂದರ್ಭ ಸಂಸ್ಕಾರಯುತ ಇಂತಹ ಕಾರ್ಯಕ್ರಮಗಳು ತಾಯಂದಿರಿಗೆ ಹೆಚ್ಚು ಬೇಕು ಎಂದು ಹೇಳಿದರು.

ಸಾಮೂಹಿಕ ಮಹಾಲಕ್ಷ್ಮೀ ಆಷಾಢ ಮಾಸದ ಪೂಜಾ ಮಹೋತ್ಸವದ ಅಂಗವಾಗಿ ಗಣಪತಿ ಪೂಜೆ, ಶ್ರೀ ಮಹಾಲಕ್ಷ್ಮೀ ಸಹಸ್ರನಾಮಾವಳಿ ಪೂರ್ವಕ ಕುಂಕುಮಾರ್ಚನೆ, ಅಷ್ಟೋತ್ತರ ಶತನಾಮ, ಲಕ್ಷಾರ್ಚನೆ, ಪುಷ್ಪಾರ್ಚನೆ, ಪ್ರಾರ್ಥನೆ ಸಂಕಲ್ಪ ವಾಹನದಿಂದ ಪ್ರಾರಂಭ ಮಹಾಮಂಗಳಾರತಿ ನಂತರ ತೀರ್ಥಪ್ರಸಾದ ವಿನಿಯೋಗ ನಡೆಯಿತು.

ಆದಿಚುಂಚನಗಿರಿ ಮಠದ ಪ್ರಧಾನ ಕಾರ್ಯದರ್ಶಿ ಶ್ರೀಪುರುಷೋತ್ತಮಾನಂದನಾಥ ಸ್ವಾಮೀಜಿ, ಚುಂಚಶ್ರೀ ಮಹಿಳಾ ಒಕ್ಕಲಿಗರ ವೇದಿಕೆ ಪಲ್ಲವಿ, ಶಕುಂತಲಾ, ಮಂಜುಳಾ, ಲತಾ ಇತರರಿದ್ದರು.

ನಾಳೆ ವಿದ್ಯುತ್ ವ್ಯತ್ಯಯ

ಮಂಡ್ಯ, ಜು.11– ಕೆಐಎಡಿಬಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಮಾರ್ಗದಲ್ಲಿ ತುರ್ತು ಕಾರ್ಯ ಹಮ್ಮಿಕೊಂಡಿರುವುದರಿಂದ ಜು.12ರಂದು ಬೆಳಗ್ಗೆ 9ರಿಂದ ಸಂಜೆ 6ರವರೆಗೆ ನಡುವೆ ಆಗ್ಗಾಗೆ ಗುತ್ತಲು, ಫ್ಯಾಕ್ಟರಿ ವೃತ್ತ, ಕೈಗಾರಿಕಾ ಬಡಾವಣೆಗಳು, ಎಂ.ಸಿ.ರಸ್ತೆ, ತಾವರೆಗೆರೆ, ನೆಹರು ನಗರ, ಉದಯಗಿರಿ, ಸಾದತ್ ಮೊಹಲ್ಲಾ, ಚನ್ನಯ್ಯ ಬಡಾವಣೆ, ಸಿದ್ಧಾರ್ಥ ಬಡಾವಣೆ, ಬೆಂಗಳೂರು ಮುಖ್ಯರಸ್ತೆಯ ಹೆಬ್ಬಾಳ, ಶ್ರೀನಿವಾಸಪುರ ಗೇಟ್, ಹನಕೆರೆ ಐ.ಪಿ.ವ್ಯಾಪ್ತಿ, ಕೀಲಾರ ಐ.ಪಿ ವ್ಯಾಪ್ತಿ, ಬಸವನಪುರ ಐ.ಪಿ. ವ್ಯಾಪ್ತಿ, ಬೂದನೂರು, ಭೂತನ ಹೊಸೂರು, ಚನ್ನಪ್ಪನ ದೊಡ್ಡಿ, ಹಂಬರಹಳ್ಳಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.




ಶಿವಣ್ಣಾಚಾರ್ ಮನೆಗೆ ಮಾಜಿ ಶಾಸಕ ಭೇಟಿ



ಶ್ರೀರಂಗಪಟ್ಟಣ ತಾಲೂಕಿನ ಕೆಆರ್‌ಎಸ್ ಸಮೀಪದ ಪೇಪರ್ ಮಿಲ್ ಕಾಲೋನಿಯಲ್ಲಿ ಆಕಸ್ಮಿಕ ಬೆಂಕಿ ತಗುಲಿ ಮನೆಯಲ್ಲಿದ್ದ ದಿನಬಳಕೆಯ ವಸ್ತುಗಳು ಸುಟ್ಟುಹೋಗಿ ಲಕ್ಷಾಂತರ ರೂ. ನಷ್ಟ ಅನುಭವಿಸಿದ್ದ ಶಿವಣ್ಣಾಚಾರ್ ಮನೆಗೆ ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಭೇಟಿ ನೀಡಿ, ಸಾಂತ್ವನ ಹೇಳಿ ವೈಯುಕ್ತಿಕ ಪರಿಹಾರ ನೀಡಿದರು. ಈ ವೇಳೆ ಮಾಜಿ ಗ್ರಾಪಂ ಸದಸ್ಯ ವಿಜಯ್, ಯುವ ಮುಖಂಡ ಧ್ರುವ ಸೇರಿದಂತೆ ಇನ್ನಿತರರಿದ್ದರು.

ಸಾರಿಗೆ ಬಸ್ ಡಿಕ್ಕಿ: ವೃದ್ಧನಿಗೆ ಗಾಯ



ಭಾರತೀನಗರ, ಜು.11– ಸಾರಿಗೆ ಬಸ್ ಡಿಕ್ಕಿ ಹೊಡೆದ ಪರಿಣಾಮ ವೃದ್ಧ ತೀವ್ರ ಗಾಯ ಗೊಂಡಿರುವ ಘಟನೆ ಭಾರತೀನಗರದಲ್ಲಿ ನಡೆದಿದೆ. ಇಲ್ಲಿನ ನಿವಾಸಿ ಗೋವಿಂದ ರಾಮುಲು ರಾಜ್ (70) ಗಾಯಗೊಂಡವರು. ಈತ ಸೈಕಲ್‌ನಲ್ಲಿ ಮದ್ದೂರು–ಮಳವಳ್ಳಿ ಹೆದ್ದಾರಿಯ ರಸ್ತೆ ಬದಿ ಬರುತ್ತಿದ್ದ ವೇಳೆ ಸಾರಿಗೆ ಬಸ್ ಕಬ್ಬಿನಗಾಡಿ ಹಿಂದಿಕ್ಕಲು ಹೋಗಿ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಗೋವಿಂದ ರಾಮುಲು ರಾಜ್ ಅವರನ್ನು ಸ್ಥಳೀಯರು ಆಸ್ಟರ್ ಜಿ.ಮಾದೇಗೌಡ ಆಸ್ಪತ್ರೆಗೆ ದಾಖಲಿಸಿದ್ದಾರೆ. ಈ ಸಂಬಂಧ ಕೆ.ಎಂ.ದೊಡ್ಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಂದನೇ ಪುಟದಿಂದ

ದೆಹಲಿಯಲ್ಲಿ ದೇವಸ್ಥಾನವಿದೆ...

ನಿಮ್ಮ ಪ್ರಶ್ನೆಗಳಲ್ಲೇ ಉತ್ತರವಿದೆ, ಪಕ್ಷ ಕೊಟ್ಟಿರುವ ಜವಾಬ್ದಾರಿ ಮುಂದುವರಿಸಿಕೊಂಡು ಹೋಗುತ್ತೇನೆ. ಮಲ್ಲಿಕಾರ್ಜುನ ಖರ್ಗೆ ನಮಗೆ ಧೀಕ್ಷೆ ನೀಡಿದ್ದು, ನಾವೆಲ್ಲರೂ ಸಂತೋಷವಾಗಿ ಸ್ವೀಕರಿಸಿದ್ದೇವೆ. ಇದರ ಹೊರತಾಗಿ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಸುರ್ಜೇವಾಲ ಹೊರತಾಗಿ ಬೇರೆ ಯಾವುದೇ ಹೈಕ ಮಾಂಡ್ ನಾಯಕರನ್ನು ಭೇಟಿಯಾಗಿಲ್ಲ. ರಾಜ್ಯ ಉಸ್ತುವಾರಿಗಳ ಜೊತೆ ನಮ್ಮ ಕಾರ್ಯಕರ್ತರಿಗೆ ಕೆಲವು ಸ್ಥಾನಮಾನ ನೀಡುವ ಬಗ್ಗೆ ಚರ್ಚೆ ಮಾಡಲಾಗಿದೆ.

ಎಲ್ಲಾ ಶಾಸಕರು ತಮ್ಮ ಅಭಿಪ್ರಾಯ ಸಲ್ಲಿಸಿದ್ದಾರೆ, ಸಚಿವರ ಅಭಿಪ್ರಾಯ ಸಂಗ್ರಹಿಸಬೇಕಿದೆ. ತಾಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಪಕ್ಷ ಸಂಘಟನೆ ವಿಚಾರದಲ್ಲಿ ಶ್ರಮಿಸಿರುವವರಿಗೆ ಹಾಗೂ ಕೆಲವರಿಗೆ ನಾವು ಕೊಟ್ಟಿರುವ ಮಾತಿಗೆ ಬದ್ಧವಾಗಿ ಸ್ಥಾನಮಾನ ನೀಡಬೇಕಿದೆ.

ಈ ಪ್ರಕ್ರಿಯೆ ಈಗಾಗಲೇ ತಡವಾಗಿದೆ, ಈಗ ಅಂತಿಮ ಹಂತಕ್ಕೆ ಬಂದಿದೆ. ಅಧ್ಯಕ್ಷನಾಗಿ ನಾನು ಪಕ್ಷದ ಸಂಘಟನೆಗೆ ಶ್ರಮಿಸಿದವರ ಹೆಸರನ್ನು ಸೇರಿಸಿ ಪ್ರಸ್ತಾವನೆಯನ್ನು ಮತ್ತೊಮ್ಮೆ ದೆಹಲಿಗೆ ಕಳುಹಿಸಿ ಅನುಮತಿ ಪಡೆಯಲಾಗುವುದು ಎಂದರು.

ಮುಖ್ಯಮಂತ್ರಿ ಆಗಬೇಕೆಂಬ ಆಸೆ ಅನೇಕರಿಗೆ ಇರುತ್ತದೆ. ನಿಮ್ಮಲ್ಲೂ ಅನೇಕರಿಗೆ ಅನೇಕ ಆಸೆ ಇರುತ್ತವೆ. ನಾನು ಈ ವಿಚಾರವಾಗಿ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಅದರ ಅವಶ್ಯಕತೆ ಇಲ್ಲ, ಸದ್ಯಕ್ಕೆ ನಾನು ಯಾವುದೇ ಉತ್ತರ ನೀಡುವುದಿಲ್ಲ.

2028ರ ಚುನಾವಣೆಗೂ ನನ್ನದೇ ನಾಯಕತ್ವ ಎಂಬ ಸಿದ್ದರಾಮಯ್ಯ ಹೇಳಿಕೆ ಅವರ ವೈಯಕ್ತಿಕ ಹೇಳಿಕೆ, ಅದನ್ನು ಹೇಳುವ ಸಂಪೂರ್ಣ ಅಧಿ ಕಾರ ಅವರಿಗಿದೆ, ಪಕ್ಷದ ಅಧ್ಯಕ್ಷನಾಗಿ ಪಕ್ಷ ಸಂಘಟನೆ ಮಾಡುವುದು ನನ್ನ ಜವಾಬ್ದಾರಿ, ಪಕ್ಷ ಹಾಗೂ ಸರ್ಕಾರದ ಹಿತಾಸಕ್ತಿ ಕಾಯುವುದು ನನ್ನ ಗುರಿ.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ವಿಚಾರ ನನಗೆ ಗೊತ್ತಿಲ್ಲ. ಈ ವಿಚಾರದ ಬಗ್ಗೆ ನೀವು ಅವರನ್ನೇ ಕೇಳಿ, ನಾನು ಪಕ್ಷದ ವಕ್ತಾರನೇ ಹೊರತು, ಬೇರೆ ಯಾವುದೇ ವ್ಯಕ್ತಿಯ ವಕ್ತಾರನಲ್ಲ, ಪಕ್ಷ ಇದ್ದರೆ ನಾನು, ಪಕ್ಷ ಇಲ್ಲವೆಂದರೆ ನಾನಿಲ್ಲ ಎಂದರು.

ಶಾಸಕರ ಪರೇಡ್ ನಡೆಯಲಿ!

ಇದನ್ನೇ ಸಚಿವರು ನಿಮ್ಮ ಬಳಿ ಹೇಳಿಕೊಂಡಿದ್ದಾರೆ. ನಾನು ಮಾಧ್ಯಮದ ಮುಂದೆಯೂ ಇದನ್ನೇ ಹೇಳಿದ್ದೇನೆ. ನೀವು ಯಾವ ತೀರ್ಮಾನ ಕೈಗೊಳ್ಳುವಿರೋ ತೆಗೆದು ಕೊಳ್ಳಿ. ಆದರೆ, ನಾನು ಹೇಳಿದ ವಿಷಯ ವನ್ನು ಗಮನದಲ್ಲಿಡಿ. ಇದು ನನ್ನೊಬ್ಬನ ನಿರ್ಧಾರವಲ್ಲ. ಸಚಿವರು, ಶಾಸಕರು ನನ್ನ ಮುಂದೆ ಹೇಳಿದ್ದು, ನಿಮ್ಮ ಗಮನಕ್ಕೆ ತರುವಂತೆ ಮನವಿ ಮಾಡಿದ್ದಾರೆ. ಅವರ ಅಭಿಪ್ರಾಯವನ್ನೂ ತಿಳಿಸಿದ್ದೇನೆ ಎಂದಿದ್ದಾರೆ.

ಸಿದ್ದರಾಮಯ್ಯ ಅವರ ಮಾತುಗಳನ್ನು ತಾಳ್ಮೆಯಿಂದ ಕೇಳಿಸಿಕೊಂಡ ಖರ್ಗೆ, ಕರ್ನಾಟಕ ವಿಷಯಕ್ಕೆ ಸಂಬಂಧಿಸಿದಂತೆ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಏನು ತೀರ್ಮಾನ ಕೈಗೊಳ್ಳುವರೋ ಅದೇ ಅಂತಿಮ, ಅದಕ್ಕೆ ನಾನು, ನೀವೂ ಬದ್ಧರಾಗಿರಬೇಕು. ಬಿಹಾರ ವಿಧಾನಸಭಾ ಚುನಾವಣೆ ಎದುರಾಗಿರುವುದರಿಂದ ನಾವು ಯಾವುದೇ ರಾಜಕೀಯ ನಿರ್ಧಾರ ಗಳನ್ನು ತೆಗೆದು ಕೊಳ್ಳುವ ಸ್ಥಿತಿಯಲ್ಲಿಲ್ಲ. ಹೀಗಾಗಿಯೇ ರಾಹುಲ್ ನಿಮ್ಮನ್ನು ಭೇಟಿ ಮಾಡಲು ಸಾಧ್ಯವಾಗಲಿಲ್ಲ. ಚುನಾವಣೆ ಮುಗಿಯಲಿ, ನಂತರ ಪಕ್ಷ ಇತ್ತ ಕಡೆ ಗಮನ ಹರಿಸಲಿದೆ ಎಂದು ಹೇಳಿ ಕಳುಹಿಸಿದ್ದಾರೆ.

ಚಿರತೆ ಕಳೇಬರ ಪತ್ತೆ

ಕ್ವಾರಿಗಳಲ್ಲಿ ಚಿರತೆಗಳ ವಾಸ : ಕೊತ್ತಲ ವಾಡಿ ಸುತ್ತಮುತ್ತ ಹತ್ತಾರು ಕರಿಕಲ್ಲು ಕ್ವಾರಿ ಗಳಿದ್ದು, ಗಣಿ ತ್ಯಾಜ್ಯದ ಕಲ್ಲು ಬಂಡೆಗಳ ರಾಶಿ ಬೆಟ್ಟಗಳನ್ನೇ ಸೃಷ್ಟಿಸಿದೆ. ಇವು ಹುಲಿ ಚಿರತೆಗಳ ವಾಸಕ್ಕೆ ಸೂಕ್ತವಾಗಿದೆ. ಅಲ್ಲದೆ ಬಂಡೀಪುರ, ತಮಿಳುನಾಡು ಅರಣ್ಯ ಪ್ರದೇಶಗಳು ಹತ್ತಿರ ಇವೆ. ಜೊತೆಗೆ ಹಳ್ಳಿಗಳು ಅಕ್ಕಪಕ್ಕ ಇರುವು ದರಿಂದ ಹಸು, ಕರು, ನಾಯಿ, ಕುರಿ, ಮೇಕೆ ಬೇಟೆಯಾಡಲು ಅನುಕೂಲಕರವಾಗಿದೆ. ಇಲ್ಲಿ ರಾತ್ರಿ ಸಮಯದಲ್ಲಿ ಚಿರತೆ ಗಳ ಓಡಾಟ ಸರ್ವೇ ಸಾಮಾನ್ಯವಾಗಿದೆ.

ಹುಲಿಗಳ ಸಾವು: 2023ರ ಡಿಸೆಂ ಬರ್‌ನಲ್ಲಿ ಕೊತ್ತಲವಾಡಿ ಬಳಿಯ ಕರಿಕಲ್ಲು ಕ್ವಾರಿ ಸಮೀಪ ಎರಡು ಹುಲಿಗಳು ಮೃತ ಪಟ್ಟಿದ್ದವು. ಹಲವು ದಿನಗಳ ನಂತರ ಹುಲಿಗಳ ಕಳೇಬರ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ಆದರೆ, ಈ ಹುಲಿಗಳ ಸಾವೂ ನಿಗೂಢವಾಗಿದೆ. ಕೊತ್ತಲವಾಡಿಯ ಕರಿಕಲ್ಲು ಕ್ವಾರಿಯ ಬಳಿಯೇ ಚಿರತೆ ಮೃತಪಟ್ಟಿರುವುದು ಹಲವು ಅನುಮಾನ ಗಳಿಗೆ ಕಾರಣವಾಗಿದೆ. ಚಿರತೆ ಕಳೇಬರ ಪತ್ತೆಯಾಗಿರುವ ಸ್ಥಳಕ್ಕೆ ಸಿಸಿಎಫ್ ಹೀರಾ ಲಾಲ್, ಬಿಆರ್‌ಟಿ ಹುಲಿ ಯೋಜನೆ ನಿರ್ದೇ ಶಕ ಶ್ರೀಪತಿ, ಎಸಿಎಫ್ ಮಂಜು ನಾಥ್, ಪ್ರಾದೇಶಿಕ ಅರಣ್ಯ ವಲಯದ ಆರ್‌ಎಫ್‌ಓ ಸಂದೀಪ್, ಡಿಆರ್‌ಎಫ್‌ಓ ಅಮರ ನಾಥ್, ಸುರೇಶ್ ಸೇರಿದಂತೆ ಇತರೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು.

ಟ್ರಕ್‌ಗಳಿಗೆ ಆರ್ಥಿಕ ಉತ್ತೇಜನ ಯೋಜನೆ

ಪರಿವರ್ತನಾತ್ಮಕ ಹೆಜ್ಜೆಗಳನ್ನು ಇಡಲಾಗಿದೆ. ಕೇಂದ್ರ ಸರ್ಕಾರ ವಿದ್ಯುತ್ ಟ್ರಕ್‌ಗಳಿಗೆ ನೇರ ಆರ್ಥಿಕ ಪ್ರೋತ್ಸಾಹ ನೀಡುತ್ತಿರುವುದು ಇದೇ ಮೊದಲು ಎಂದರು. ಡೀಸೆಲ್ ಟ್ರಕ್‌ಗಳು ಒಟ್ಟು ವಾಹನ ಸಂಖ್ಯೆಯಲ್ಲಿ ಕೇವಲ 3%ರಷ್ಟಿದ್ದರೂ, ಸಾರಿಗೆ ಸಂಬಂಧಿತ ಹಸಿರುಮನೆ ಅನಿಲ ಹೊರಸೂಸುವಿಕೆಯಲ್ಲಿ 42%ರಷ್ಟು ಇದ್ದು, ವಾಯುಮಾಲಿನ್ಯ ಗಮನಾರ್ಹವಾಗಿ ಹೆಚ್ಚುತ್ತಿದೆ.

ಪ್ರಧಾನಿ ನರೇಂದ್ರ ಮೋದಿ ದೂರದೃಷ್ಟಿ ನಾಯಕತ್ವದಿಂದ ಯೋಜನೆ ಜಾರಿಗೆ ತರಲಾಗುತ್ತಿದೆ, ವಿದ್ಯುತ್ ಟ್ರಕ್‌ಗಳಿಗೆ ಮೀಸಲಾದ ಮೊತ್ತ ಮೊದಲ ಆರ್ಥಿಕ ಉತ್ತೇಜನ ಕಾರ್ಯಕ್ರಮವಾಗಿದೆ, ಈ ಮೂಲಕ ರಾಷ್ಟ್ರವನ್ನು ಸುಸ್ಥಿರ ಸರಕು ಸಾಗಣೆ, ಸ್ವಚ್ಛ ಭವಿಷ್ಯ ಮತ್ತು 2047ರ ವೇಳೆಗೆ ವಿಕಸಿತ ಭಾರತ ಸಾಕಾರದತ್ತ ಕೊಂಡೊಯ್ಯುತ್ತದೆ.

2070ರ ವೇಳೆಗೆ ಇಂಗಾಲ ಹೊರಸೂಸುವಿಕೆಯನ್ನು ಶೂನ್ಯಕ್ಕೆ ಇಳಿಸುವ ಗುರಿ ಮುಟ್ಟಲಿದ್ದೇವೆ, ಇದು ಪ್ರಧಾನಿ ಅವರ ಸಂಕಲ್ಪವಾಗಿದೆ. ಎಲೆಕ್ಟ್ರಿಕ್ ಟ್ರಕ್ ದರ ಕೈಗೆಟಕುವಂತೆ ಇರಬೇಕು ಎಂಬ ಉದ್ದೇಶದಿಂದ ಉತ್ತೇಜನ ಯೋಜನೆಯ ಪ್ರೋತ್ಸಾಹಕ ಮೊತ್ತ ಎಲೆಕ್ಟ್ರಿಕ್ ಟ್ರಕ್‌ನ ಜಿವಿಡಬ್ಲ್ಯೂ ಅವಲಂಬಿಸಿರುತ್ತದೆ, ಗರಿಷ್ಠ ಪ್ರೋತ್ಸಾಹಕ ಮೊತ್ತ ಪ್ರತಿ ವಾಹನಕ್ಕೆ 9.6 ಲಕ್ಷ ರೂ.ಗೆ ನಿಗದಿಪಡಿಸಲಾಗಿದೆ, ಈ ಯೋಜನೆ ದೇಶಾದ್ಯಂತ ಸುಮಾರು 5,600 ಇ–ಟ್ರಕ್‌ಗಳ ನಿಯೋಜನೆ ಬೆಂಬಲಿಸುವ ನಿರೀಕ್ಷೆಯಿದೆ.

ಸಿಮೆಂಟ್ ಉದ್ಯಮ, ಬಂದರು, ಉಕ್ಕು ಮತ್ತು ಇತರ ಸಾಗಾಣಿಕೆ ವಲಯ ಯೋಜನೆ ಪ್ರಯೋಜನ ಪಡೆಯಲಿರುವ ಪ್ರಮುಖ ಕ್ಷೇತ್ರಗಳಾಗಿವೆ. ಹಲವು ಪ್ರಮುಖ ಕಂಪನಿಗಳು ಈಗಾಗಲೇ ಭಾರತದಲ್ಲಿ ಎಲೆಕ್ಟ್ರಿಕ್ ಟ್ರಕ್ ತಯಾರಿಸುವಲ್ಲಿ ತೊಡಗಿಸಿಕೊಂಡಿವೆ, ಆತ್ಮ ನಿರ್ಭರ ಭಾರತ್ ದೃಷ್ಟಿಕೋನದಡಿ ಸ್ಥಳೀಯ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ ಎಂದರು.

ವಿದ್ಯುತ್ ಚಾಲಿತ ಟ್ರಕ್ ಬಳಕೆಯಲ್ಲಿ ದೊಡ್ಡ ಹೆಜ್ಜೆ ಇರಿಸಿರುವ ಉಕ್ಕು ಸಚಿವಾಲಯದ ಅಧೀನ ಸಂಸ್ಥೆ ಭಾರತೀಯ ಉಕ್ಕು ಪ್ರಾಧಿಕಾರ ಮುಂದಿನ ಎರಡು ವರ್ಷಗಳಲ್ಲಿ 150 ಇ–ಟ್ರಕ್‌ಗಳನ್ನು ತನ್ನ ಕಾರ್ಯಾಚರಣೆಯಲ್ಲಿ ತೊಡಗಿಸಿಕೊಳ್ಳಲಿದೆ, ಅವಧಿ ಮೀರಿದ ಹಳೆಯ ಮಾಲಿನ್ಯಕಾರಕ ಟ್ರಕ್‌ಗಳ ವಿಲೇವಾರಿ ಮಾಡಲಿದೆ ಎಂದರು.

‘ಪ್ರಸಾದ್’ ಯೋಜನೆಯಡಿ ಚಾಮುಂಡಿಬೆಟ್ಟ ಅಭಿವೃದ್ಧಿ ಕಾಮಗಾರಿ ಮಾಸಾಂತ್ಯಕ್ಕೆ ಆರಂಭ

▶ ಕೇಂದ್ರದಿಂದ 30, ರಾಜ್ಯದಿಂದ 16 ಕೋಟಿ ಬಿಡುಗಡೆ ▶ ಪಾರಂಪರಿಕ ದೇವಾಲಯಗಳ ನವೀಕರಣ ಅನುಭವವಿರುವ ಸಂಸ್ಥೆಗೆ ಟೆಂಡರ್

● ಬಾಪುಲಿಂಗರಾಜ್ ಅರಸ್

ಮೈಸೂರು, ಜು.11– ಮೈಸೂರಿನ ಚಾಮುಂಡಿಬೆಟ್ಟ ಕ್ಷೇತ್ರದಲ್ಲಿ ಕೇಂದ್ರ ಸರ್ಕಾರದ 'ಪ್ರಸಾದ್' ಯೋಜನೆಯಡಿ ವಿವಿಧ ಕಾಮಗಾರಿಗಳು ಪ್ರಸಕ್ತ ಮಾಸಾಂತ್ಯದಲ್ಲಿ ಆರಂಭಗೊಳ್ಳುವ ಸಾಧ್ಯತೆ ಇದೆ.

ಈ ಯೋಜನೆಗೆ ಈಗಾಗಲೇ ಕೇಂದ್ರ ಸರ್ಕಾರ 30 ಕೋಟಿ ಹಾಗೂ ರಾಜ್ಯ ಸರ್ಕಾರ 16 ಕೋಟಿ, ಒಟ್ಟು 46 ಕೋಟಿ ರೂ. ಬಿಡುಗಡೆಯಾಗಿದ್ದು, ಬೆಂಗಳೂರಿನ ಖಾಸಗಿ ಕಂಪನಿಗೆ ಕಾಮಗಾರಿಯ ಟೆಂಡರ್ ನೀಡಲಾಗಿದೆ. ಕೇಂದ್ರ ಸರ್ಕಾರವು 'ಪ್ರಸಾದ್ (PRASAD–ಪಿಲಿಗ್ರಿಮೇಜ್ ರಿಜುವೇನೇ ಷನ್ ಆಂಡ್ ಸ್ಪಿರಿಚುವಲ್ ಆಗ್ಮುಮೆಂಟೇ ಷನ್ ಡ್ರೈವ್)' ಯೋಜನೆಯಡಿ ಮೈಸೂರಿನ ಚಾಮುಂಡಿಬೆಟ್ಟದ ದೇವಸ್ಥಾನ ಹಾಗೂ ಸುತ್ತಮುತ್ತಲ ಪ್ರದೇಶ ಅಭಿವೃದ್ಧಿ ಕೈಗೊಳ್ಳುವ ನಿಟ್ಟಿನಲ್ಲಿ ರಾಜ್ಯದ ಪ್ರವಾಸೋದ್ಯಮ ಇಲಾಖೆಯು ಪರಿಷ್ಕೃತ ವಿಸ್ತೃತ ಯೋಜನಾ ವರದಿ(ಡಿಪಿಆರ್)ಯನ್ನು ಸಲ್ಲಿಸಿತ್ತು. ಡಿಪಿಆರ್ ಪರಿಶೀಲಿಸಿದ ಕೇಂದ್ರ ಸರ್ಕಾರ, ಕೆಲವು ಸಲಹೆ ಹಾಗೂ ಮಾರ್ಗದರ್ಶನದೊಂದಿಗೆ ಮಾರ್ಪಡಿಸಿ, ಅಂತಿಮ ಯೋಜನೆ ಸಲ್ಲಿಕೆಗೆ ಸೂಚಿಸಿತ್ತು. ಅದರಂತೆ ಕೆಲ ಮಾರ್ಪಾಡುಗಳೊಂದಿಗೆ ರಾಜ್ಯ ಪ್ರವಾಸೋದ್ಯಮ ಇಲಾಖೆ ಸಲ್ಲಿಸಿದ್ದ ಡಿಪಿಆರ್ ಅನ್ನು ಕೇಂದ್ರ ಸರ್ಕಾರ ಅನುಮೋದಿಸಿದ್ದು, ಕಾಮಗಾರಿಗೆ ಕಾಲ ಸನ್ನಹಿತವಾಗಿದೆ.

ಧಾರ್ಮಿಕ, ಪಾರಂಪರಿಕ ಹಾಗೂ ಐತಿಹಾಸಿಕ ಹಿನ್ನೆಲೆಯುಳ್ಳ ಶ್ರೀ ಚಾಮುಂಡಿ ಬೆಟ್ಟ ಕ್ಷೇತ್ರವು ಪ್ರಾಕೃತಿಕ ಸಂಪನ್ಮೂಲ ನೆಲಗಟ್ಟಿನಲ್ಲೂ ಅತ್ಯಂತ ಸೂಕ್ಷ್ಮ ಪ್ರದೇಶವಾಗಿರುವುದರಿಂದ ಇಲ್ಲಿ ಯಾವುದೇ ಕಾಮಗಾರಿಗೂ ಮುನ್ನ ವಿವಿಧ ಆಯಾಮಗಳಲ್ಲಿ ಪರಿಶೀಲಿಸಿ, ನಿರ್ಧರಿಸಬೇಕಿದೆ. ಈ ಹಿಂದೆ ಹಲವು ಯೋಜನೆಗಳ ಪ್ರಸ್ತಾವಕ್ಕೆ ಭಾರೀ ವಿರೋಧ ವ್ಯಕ್ತವಾಗಿತ್ತು. ಇದೀಗ ಪ್ರಸಾದ್ ಯೋಜನೆಯಡಿ ಯಾವುದೇ ಕಾಮಗಾರಿ ಕೈಗೊಂಡರೂ ಕ್ಷೇತ್ರದ ಪಾವಿತ್ರ್ಯತೆಗೆ ಧಕ್ಕೆಯಾಗದಂತೆ ನಿಗಾ ವಹಿಸಬೇಕಿದೆ. ಕೊಂಚ ನಿರ್ಲಕ್ಷಿಸಿ ದರೂ ಭಕ್ತರು ಹಾಗೂ ಪರಿಸರವಾದಿಗಳ ಹೋರಾಟ ಎದುರಿಸಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅಧಿಕಾರಿಗಳು ಚಾಮುಂಡಿ ಬೆಟ್ಟದ ಅಭಿವೃದ್ಧಿ ನಿಟ್ಟಿನಲ್ಲಿ ಎಚ್ಚರಿಕೆಯ ಹೆಜ್ಜೆ ಇಟ್ಟಿದ್ದಾರೆ. ಆಧುನಿಕ ತಂತ್ರಜ್ಞಾನದ ತ್ರಿಡಿ ಇಮೇಜ್ ಮೂಲಕ ಪ್ರಸಾದ ಯೋಜನೆಯನ್ನು ಅಚ್ಚುಕಟ್ಟಾಗಿ ರೂಪಿಸಿದ್ದಾರೆ. ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ಅಧಿಕಾರಿಗಳ ತಂಡವನ್ನು ನಿಯೋಜಿಸಲಾಗಿದೆ.

ವರ್ಷದೊಳಗೆ ಪೂರ್ಣ: ಪ್ರಸಾದ ಯೋಜನೆಯಲ್ಲಿ ಚಾಮುಂಡಿಬೆಟ್ಟದಲ್ಲಿ ಕೈಗೊಳ್ಳಲಿರುವ ಕಾಮಗಾರಿಗಳನ್ನು 11 ತಿಂಗಳಲ್ಲಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. ನಿಗದಿತ ಅವಧಿಯಲ್ಲಿ ಕಾಮಗಾರಿ ಮುಗಿಸುವಂತೆ ಗುತ್ತಿಗೆ ಕಂಪನಿಗೆ ಷರತ್ತು ವಿಧಿಸಲಾಗಿದೆ. ಪುರಾತನ ದೇವಸ್ಥಾನಗಳನ್ನು ಪುನರುಜ್ಜೀವನಗೊಳಿಸಿದ ಅನುಭವ ಹೊಂದಿರುವ ಎಸ್‌ಎಎಸ್ ಕಾರ್ಕಳ ಎಂಟರ್ ಪ್ರೈಸಸ್‌ಗೆ ಚಾಮುಂಡಿಬೆಟ್ಟದ ಯೋಜನೆಯ ಟೆಂಡರ್ ನೀಡಲಾಗಿದೆ. ಮಂಗಳೂರು, ಉಡುಪಿ, ಕಾರ್ಕಳ ಸೇರಿದಂತೆ ಹಲವು ಕ್ಷೇತ್ರಗಳ ದೇವಸ್ಥಾನ ಗಳನ್ನು ಪುನರುಜ್ಜೀವನಗೊಳಿಸಿರುವ ಈ ಸಂಸ್ಥೆ, ಟೆಂಡರ್‌ನಲ್ಲಿ ಸೂಕ್ತ ಮೊತ್ತ ನಮೂದಿಸಿ, ತಾಂತ್ರಿಕವಾಗಿ ಅನುಮೋದನೆ ಪಡೆದ ಹಿನ್ನೆಲೆಯಲ್ಲಿ ಈ ಕಂಪನಿಗೆ ಗುತ್ತಿಗೆ ನೀಡಲಾಗಿದೆ. ಭದ್ರತಾ ಠೇವಣಿ ಪಾವತಿ, ಅಗತ್ಯ ದಾಖಲಾತಿ ಸಲ್ಲಿಕೆ ಬಾಕಿ ಇದ್ದು, ಶೀಘ್ರ ಎಲ್ಲಾ ಪ್ರಕ್ರಿಯೆ ಪೂರ್ಣ ಗೊಂಡು ಮಾಸಾಂತ್ಯಕ್ಕೆ ಅಭಿವೃದ್ಧಿ ಕಾಮಗಾರಿ ಆರಂಭವಾಗುವ ನಿರೀಕ್ಷೆ ಇದೆ. ಕಾಮಗಾರಿ ಆರಂಭವಾದ ನಂತರ ಚಾಮುಂಡಿ ಬೆಟ್ಟದ ಪಾರಂಪರಿಕತೆಗೆ ಯಾವುದೇ ರೀತಿ ಯಲ್ಲೂ ಧಕ್ಕೆಯಾಗದಂತೆ ಮುತುವರ್ಜಿ ವಹಿಸುತ್ತೇವೆ ಎಂದು ಪ್ರವಾಸೋದ್ಯಮ ಇಲಾಖೆಯ ಎಇಇ ಪುರುಷೋತ್ತಮ್ ತಿಳಿಸಿದ್ದಾರೆ.

> **ಖುದ್ದು ನಾವೇ ಪರಿಶೀಲಿಸುತ್ತೇವೆ**
>
> ಚಾಮುಂಡಿಬೆಟ್ಟ ದೇವಸ್ಥಾನದ ಅಭಿವೃದ್ಧಿ ಕಾಮಗಾರಿಯನ್ನು ಖುದ್ದು ನಾವೇ ನಿಂತು ಪರಿಶೀಲನೆ ನಡೆಸುತ್ತೇವೆ. ಪ್ರವಾಸೋದ್ಯಮ ಇಲಾಖೆ ವತಿಯಿಂದ ಯೋಜನೆ ರೂಪಿಸಿರುವ ಹಿನ್ನೆಲೆಯಲ್ಲಿ ಸ್ಥಳೀಯ ಅಧಿಕಾರಿಗಳಾದ ನಾವು ಅಭಿವೃದ್ಧಿ ಕಾಮಗಾರಿಗಳು ಯಾವ ರೀತಿ ನಡೆಯುತ್ತಿದೆ ಎಂದು ಸೂಕ್ಷ್ಮವಾಗಿ ಗಮನಿಸುತ್ತಿರುತ್ತೇವೆ. ಚಾಮುಂಡಿಬೆಟ್ಟದ ಪಾರಂಪರಿಕ ಸೌಂದರ್ಯಕ್ಕೆ ಧಕ್ಕೆಯಾಗದಂತೆ ಮುತುವರ್ಜಿ ವಹಿಸುತ್ತೇವೆ.
>
> -ಮೋತಿಲಾಲ್, ಉಪ ನಿರ್ದೇಶಕ, ಪ್ರವಾಸೋದ್ಯಮ ಇಲಾಖೆ, ಮೈಸೂರು.



ಸೂಕ್ಷ್ಮ ಸ್ಥಳಗಳಲ್ಲಿ ಸಿಸಿಟಿವಿ, ಕಾಂಕ್ರಿಟ್ ರಸ್ತೆ

ಚಾಮುಂಡಿಬೆಟ್ಟಕ್ಕೆ ನಿತ್ಯ ಸಾವಿರಾರು ಹಾಗೂ ವಿಶೇಷ ದಿನಗಳಲ್ಲಿ ಲಕ್ಷಾಂತರ ಭಕ್ತರು ಆಗಮಿಸುವುದರಿಂದ ಭದ್ರತೆ ಹಾಗೂ ಸುರಕ್ಷತೆ ದೃಷ್ಟಿಯಿಂದ ಹೆಚ್‌ಡಿ ಗುಣಮಟ್ಟದ ಸಿಸಿಟಿವಿಗಳನ್ನು ಅಳವಡಿಸಲಾಗುತ್ತದೆ. ಮೆಟ್ಟಿಲು ಮಾರ್ಗದ ಇಕ್ಕೆಲಗಳಲ್ಲಿ ರೇಲಿಂಗ್ಸ್ ಅಳವಡಿಸಲು ತೀರ್ಮಾನ ಮಾಡಲಾಗಿದೆ. ಮಹಿಷಾ ಪ್ರತಿಮೆಯಿಂದ ಗೋಪುರದವರೆಗೆ ಕಾಂಕ್ರಿಟ್ ರಸ್ತೆ ನಿರ್ಮಾಣ, ಮುಖ್ಯ ರಸ್ತೆ ಮಾರ್ಗದ ಹಾಗೂ ನಂದಿ ಬಳಿಯ ವ್ಯೂ ಪಾಯಿಂಟ್ ಅಭಿವೃದ್ಧಿ, ಅಗತ್ಯ ಮಾಹಿತಿ ನೀಡಲು ಮಹಿಷಾಸುರ ಪ್ರತಿಮೆಯ ಸ್ಥಳದಿಂದ ದೇವಸ್ಥಾನದವರೆಗೆ ಧ್ವನಿವರ್ಧಕ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ತಿಳಿದು ಬಂದಿದೆ.

ಮಹಿಷಾಸುರ ಪ್ರತಿಮೆಗೆ ವರ್ಣರಂಜಿತ ಮೆರಗು ಸೇರಿ ವಿವಿಧ ಕಾಮಗಾರಿಗಳು



ಮಹಿಷಾಸುರ ಪ್ರತಿಮೆ ಸೇರಿದಂತೆ ಚಾಮುಂಡಿ ಬೆಟ್ಟ ದೇವಸ್ಥಾನದ ಸುತ್ತಮುತ್ತಲಿನ 6 ಸ್ಥಳಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಮಹಿಷಾಸುರನ ಪ್ರತಿಮೆ ಸುತ್ತಲಿನ ಪ್ಲಾಜಾದಲ್ಲಿ ನೀರಿನ ಕಾರಂಜಿ ನಿರ್ಮಿಸಿ, ವರ್ಣರಂಜಿತ ವಿದ್ಯುತ್ ದೀಪಾಲಂಕಾರದ ಮೆರಗು ನೀಡಲಾಗುತ್ತದೆ. ಪ್ರವಾಸಿಗರ ಸುರಕ್ಷತೆ ಹಾಗೂ ಭದ್ರತೆಗಾಗಿ ಪೊಲೀಸ್ ಬೂತ್, ಮೈಸೂರು ಸುತ್ತಮುತ್ತಲಿನ ಪ್ರವಾಸಿ ತಾಣಗಳ ವಿವರ ನೀಡಲು ಪ್ರವಾಸಿ ಮಾಹಿತಿ ಕೇಂದ್ರ ನಿರ್ಮಿಸಲಾಗುತ್ತದೆ. ಅತ್ಯಾಕರ್ಷಕ ಕಲ್ಲಿನ ಪ್ರವೇಶದ್ವಾರ, ಸಾಲು ಮಂಟಪಗಳು, ದೇವಸ್ಥಾನದ ಸುತ್ತಮುತ್ತ ಕಲ್ಲಿನ ಆಸನಗಳ ಅಳವಡಿಕೆ, ಹೆಚ್ಚುವರಿ ಟಿಕೆಟ್ ಕೌಂಟರ್ ವ್ಯವಸ್ಥೆ, ಕುಡಿಯುವ ನೀರು, ಶೌಚಾಲಯ ಸೇರಿದಂತೆ ಅಗತ್ಯ ಮೂಲ ಸೌಲಭ್ಯ, ಬೆಟ್ಟದ ಮೆಟ್ಟಿಲುಗಳ ನವೀಕರಣ, ದೇವಿಕೆರೆಗೆ ಕಲ್ಲಿನ ಪ್ರವೇಶ ದ್ವಾರ, ಅಲ್ಲಲ್ಲಿ ಉದ್ಯಾನವನಗಳ ನಿರ್ಮಾಣ, ಪಾದರಕ್ಷೆ ಬಿಡುವ ಸ್ಥಳ, ಭಕ್ತರ ವಸ್ತುಗಳ ಸುರಕ್ಷತೆಗೆ ಕ್ಲಾಕ್ ರೂಂ ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಗಳೊಂದಿಗೆ ಕ್ಷೇತ್ರಕ್ಕೆ ಹೊಸ ರೂಪ ನೀಡಲು ಯೋಜನೆ ರೂಪಿಸಲಾಗಿದೆ

ವಿದ್ಯುತ್ ಸ್ವೀಕರಣಾ ಕೇಂದ್ರಗಳ ಸ್ಥಾಪನೆಗೆ ಕೆಪಿಟಿಸಿಎಲ್‌ನಿಂದ ಭೂಮಿ ಖರೀದಿ

ಭೂಮಿ ನೀಡಲು ಭೂ ಮಾಲೀಕರಿಗೆ ಮನವಿ

ಮೈಸೂರು, ಜು.11– ಮೈಸೂರು ವ್ಯಾಪ್ತಿಯಲ್ಲಿ 220/66 ಕೆ.ವಿ ವಿದ್ಯುತ್ ಸ್ವೀಕರಣಾ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಭೂಮಿ ಖರೀದಿಸಲು ಮುಂದಾಗಿರುವ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ಸೂಚಿತ ಪ್ರದೇಶದಲ್ಲಿ ಸೂಕ್ತ ಜಮೀನು ಇದ್ದಲ್ಲಿ ಮಾರಾಟ ಮಾಡುವಂತೆ ಸ್ಥಳೀಯ ಭೂ ಮಾಲೀಕರನ್ನು ನಿಗಮವು ಕೋರಿದೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ಹೊರಡಿಸಿರುವ ಕೆಪಿಟಿಸಿಎಲ್, ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲೂಕಿನ ಮಿರ್ಲೆ ಗ್ರಾಮ(5 ಕಿ.ಮೀ ವ್ಯಾಪ್ತಿ), ತಿ.ನರಸೀಪುರ ತಾಲೂಕು(5 ಕಿ.ಮೀ ವ್ಯಾಪ್ತಿ) ಹಾಗೂ ಎಚ್.ಡಿ. ಕೋಟೆ ತಾಲೂಕು (5 ಕಿ.ಮೀ ವ್ಯಾಪ್ತಿ)ಗಳಲ್ಲಿ ಈ ವಿದ್ಯುತ್ ಸ್ವೀಕರಣಾ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಆದ್ದರಿಂದ ಈ ತಾಲೂಕುಗಳ ವ್ಯಾಪ್ತಿಯಲ್ಲಿ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಕನಿಷ್ಠ 12 ಎಕರೆ ವಿಸ್ತೀರ್ಣದ ಸಮತಟ್ಟಾದ ಭೂಮಿಯ ಅಗತ್ಯವಿದೆ ಎಂದು ಪ್ರಕಟಣೆ ತಿಳಿಸಿದೆ.

ಕಂದಾಯ ಇಲಾಖೆ ನಿಗದಿಪಡಿಸುವ ಬೆಲೆಯಲ್ಲಿ ಈ ತಾಲೂಕುಗಳ ವ್ಯಾಪ್ತಿಯ ಅಥವಾ ಸುತ್ತಲಿನ ಜಮೀನನ್ನು ಭೂ ಮಾಲೀಕರಿಂದ ನೇರವಾಗಿ ಖರೀದಿ ಮಾಡಲು ನಿಯಮಿತವು ಉದ್ದೇಶಿಸಿದೆ. ಕವಿಪ್ರನಿನಿಕ್ಕೆ ಜಮೀನು ಮಾರಾಟ ಮಾಡಲು ಇಚ್ಛಿಸುವ ಭೂ ಮಾಲೀಕರು ಖುದ್ದಾಗಿ ಅಥವಾ ದೂರವಾಣಿ ಮೂಲಕ (ಜಿ. ಮನು, ಪ್ರಭಾರ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ಕಾಮಗಾರಿ) 9480813912 ಅಥವಾ ಕಚೇರಿಯನ್ನು ಸಂಪರ್ಕಿಸುವಂತೆ ಕೆಪಿಟಿಸಿಎಲ್ ಮೈಸೂರು ಯೋಜನೆಗಳ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್(ವಿ.) ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಬ್ಬರು ವಕೀಲರಿಗೆ ಕೆಂಪೇಗೌಡ ಪ್ರಶಸ್ತಿ



ಬೆಂಗಳೂರು ವಕೀಲರ ಸಂಘದ ವತಿಯಿಂದ ಶುಕ್ರವಾರ ನಡೆದ ನಾಡಪ್ರಭು ಕೆಂಪೇಗೌಡ ಜಯಂತಿಯನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉದ್ಘಾಟಿಸಿ, ಮಾತನಾಡಿದರು.

- ವಕೀಲರ ಸಂಘಕ್ಕೆ 5 ಕೋಟಿ ಸಹಾಯಧನ
- ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಘೋಷಣೆ

ಬೆಂಗಳೂರು, ಜು.11– ವಕೀಲರ ಸಂಘಕ್ಕೆ ಪ್ರತಿ ವರ್ಷ 5 ಲಕ್ಷ ರೂ.ಗಳನ್ನು ಕೆಂಪೇಗೌಡ ಜಯಂತಿ ಆಚರಣೆಗೆ ನೀಡಲಾಗುವುದು. ಸಂಘದ ಉಪಯೋಗಕ್ಕಾಗಿ 5 ಕೋಟಿಯನ್ನು ಜಿಬಿಎಯಿಂದ ನೀಡಲಾಗುವುದು. ಕೆಂಪೇಗೌಡ ಪ್ರಶಸ್ತಿಯನ್ನು ಕಡ್ಡಾಯವಾಗಿ ಇಬ್ಬರು ವಕೀಲರಿಗೆ ಪ್ರತಿವರ್ಷ ನೀಡಲಾಗುವುದು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ಬೆಂಗಳೂರು ವಕೀಲರ ಸಂಘದ ವತಿಯಿಂದ ಶುಕ್ರವಾರ ನಡೆದ ನಾಡ ಪ್ರಭು ಕೆಂಪೇಗೌಡ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಒಂದು ವಾರದೊಳಗೆ ಸಂಘದ ಕಟ್ಟಡಕ್ಕೆ ಸೋಲಾರ್ ಗ್ರಿಡ್ ವ್ಯವಸ್ಥೆಗೆ ಪರಿಶೀಲನೆ ನಡೆಸಲಾಗುವುದು. ವಕೀಲರ ಸಂಘಕ್ಕೆ 10 ಎಕರೆ ಕಂದಾಯ ಭೂಮಿಯನ್ನು ಲಭ್ಯತೆ ನೋಡಿಕೊಂಡು ನೀಡಲಾಗುವುದು ಎಂದರು.

ಬೆಂಗಳೂರು ಯೋಜಿತ ನಗರವಲ್ಲ. ಆದರೆ, ಕೆಂಪೇಗೌಡರು ಅಂದೇ ಯೋಜಿತವಾಗಿ ನಗರ ಕಟ್ಟಿದವರು. ಕೃಷ್ಣದೇವರಾಯ ಅವರ ಚಿಂತನೆಗಳನ್ನು ಇಲ್ಲಿ ಅಳವಡಿಸಿದರು. ವ್ಯಾಪಾರ ವಹಿವಾಟುಗಳನ್ನು ಬೆಳೆಸಲು ಈ ಊರನ್ನು ಕಟ್ಟಿ ಬೆಳಗಿದರು. ಅವರ ಆಚಾರ ವಿಚಾರಗಳನ್ನು ಉಳಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮೂಲಕ ಮುಂದಡಿ ಇಟ್ಟಿದ್ದೇವೆ ಎಂದರು. ರಾಜ್ಯಪಾಲರು ಸಹ ಶಿವಕುಮಾರ್ ದೂರದೃಷ್ಟಿ ಹೊಂದಿದ್ದಾನೆ ಎಂದು ಸಹಕಾರ ನೀಡಿದ್ದಾರೆ. ವಿರೋಧ ಪಕ್ಷದ ನಾಯಕ ಅಶೋಕ್ ಅವರು ಸಹ ಉತ್ತಮ ಜನನಾಯಕ. ಅವರು ಸಹ ಇದಕ್ಕೆ ಸಹಕಾರ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಲಕ್ಷ ಕೋಟಿ ಯೋಜನೆಗಳನ್ನು ಬೆಂಗಳೂರಿನ ಅಭಿವೃದ್ಧಿಗೆ ಖರ್ಚು ಮಾಡುವ ಆಲೋಚನೆ ಇದೆ ಎಂದರು.

ಉದಾರ ಮನಸ್ಸಿನಿಂದ ಬೆಂಗಳೂರನ್ನು ಕಟ್ಟಿದವರು ಕೆಂಪೇಗೌಡರು. ನಮ್ಮ ಮೂಲವನ್ನು ಮರೆತರೆ ಎತರಕ್ಕೆ ಬೆಳೆಯಲು ಸಾಧ್ಯವಿಲ್ಲ. ನಾವು ನಾಲ್ಕು 'ಕೆ'ಗಳನ್ನು ಮರೆಯಬಾರದು ಬೆಂಗಳೂರು ಕಟ್ಟಿದ ಕಂಪೇಗೌಡರು, ವಿಧಾನಸೌಧ ಕಟ್ಟಿದ ಕೆಂಗಲ್ ಹನುಮಂತಯ್ಯ ಅವರು, ಕನ್ನಡ ಸಾಹಿತ್ಯವನ್ನು ಬೆಳಗಿದ ನಾಡಗೀತೆ ಬರೆದ ಕುವೆಂಪು ಅವರು, ವಿಕಾಸ ಸೌಧ ಕಟ್ಟಿದ ಎಸ್.ಎಂ ಕೃಷ್ಣ ಅವರು ಎಂದು ಹೇಳಿದರು.

ನಾನು 29 ವರ್ಷಕ್ಕೆಲ್ಲಾ ಮಂತ್ರಿಯಾದೆ. ಚಿಕ್ಕ ವಯಸ್ಸಿಗೆ ನನಗೆ ಹೆಚ್ಚು ಜವಾಬ್ದಾರಿಗಳು ಹೆಗಲ ಮೇಲೆ ಬಂದವು. ಸದನದಲ್ಲಿ ಘಟಾನುಘಟಿ ನಾಯಕರು ಇದ್ದರು. ವೈ.ಕೆ.ರಾಮಯ್ಯ, ಎ.ಕೆ.ಸುಬ್ಬಯ್ಯ, ನಂಜೇಗೌಡರು ಸೇರಿದಂತೆ ಅನೇಕ ನಾಯಕರ ಮಾತುಗಳನ್ನು ಕೇಳುತ್ತಿದ್ದೆನು. ನನಗೆ ತಲೆ ಸೀಳಿದರೆ ಅಕ್ಷರ ಇರಲಿಲ್ಲ. ನಾನು ಮಾತನಾಡುವುದೆಲ್ಲವು ನನ್ನ ಅನುಭವದ ಮಾತುಗಳು. ಜೀವನದಲ್ಲಿ ಅನುಭವವೇ ಮುಖ್ಯ ಎಂದು ಹೇಳಿದರು.

ಬೆಂಗಳೂರಿನ ವಕೀಲರ ಸಂಘ 25 ಸಾವಿರ ಸದಸ್ಯತ್ವ ಹೊಂದಿದೆ ಎಂದು ಕೇಳಲ್ಪಟ್ಟೆ. ನೀವು ಮನಸ್ಸು ಮಾಡಿದರೆ ಬೆಂಗಳೂರಿನಲ್ಲಿ ಯಾವ ಪಕ್ಷವನ್ನು ಕೂಡ ಅಧಿಕಾರಕ್ಕೆ ತರಬಹುದು, ಬೀಳಿಸಬಹುದು ಎಂದರು. ಬೆಂಗಳೂರಿನ ಜನಸಂಖ್ಯೆ 1.40 ಕೋಟಿ ದಾಟಿದೆ. ವಾಹನಗಳ ಸಂಖ್ಯೆಯೂ ಹೆಚ್ಚಾಗಿದೆ. ಆದರೆ ರಸ್ತೆಯ ಸಾಮರ್ಥ್ಯ ಮಾತ್ರ ಅಷ್ಟೇ ಇದೆ. ಇತ್ತೀಚೆಗೆ ಯಾರೋ ಮೆಟ್ರೋ ಹಳದಿ ಮಾರ್ಗ ಆಗಿಲ್ಲ ಎಂದು ಪ್ರತಿಭಟನೆ ಮಾಡುತ್ತಿದ್ದರು. ಅದರ ಬಗ್ಗೆ ಮಾತನಾಡಲು ಹೋಗುವುದಿಲ್ಲ. ಕೆಲವರು ಚಟಕ್ಕೆ ಮಾಧ್ಯಮಗಳಲ್ಲಿ ಬರುತ್ತೇವೆ ಎಂದು ಏನೋ ಮಾಡುತ್ತಾರೆ ಎಂದರು.

ಕುರ್ಚಿ ಸಿಕ್ಕಾಗ ತೆಪ್ಪಗೆ ಬಂದು ಕುಳಿತುಕೊಳ್ಳಬೇಕು

ಡಿಸಿಎಂ ಡಿ.ಕೆ.ಶಿವಕುಮಾರ್ ಮಾತನಾಡುತ್ತಿದ್ದ ವೇಳೆ ಸಭಾಂಗಣದ ಇಕ್ಕೆಲಗಳಲ್ಲಿ ನಿಂತಿದ್ದ ವಕೀಲರನ್ನು ಉದ್ದೇಶಿಸಿ, ಇಷ್ಟೊಂದು ಕುರ್ಚಿಗಳಿವೆ ಬನ್ನಿ ಕುಳಿತುಕೊಳ್ಳಿ. ಕುರ್ಚಿ ಸಿಗುವುದೇ ಕಷ್ಟ ನಾವು ಕುರ್ಚಿಗಾಗಿ ಹೋರಾಟ ಮಾಡುತ್ತೇವೆ. ಕುರ್ಚಿ ಸಿಕ್ಕಾಗ ತೆಪ್ಪಗೆ ಬಂದು ಕುಳಿತುಕೊಳ್ಳಬೇಕು. ನಿಮ್ಮನ್ನು ನೋಡಿದರೆ ತ್ಯಾಗಿಗಳ ತರಹ ಕಾಣುತ್ತಾ ಇದ್ದೀರಿ ಎಂದು ಚಟಾಕಿ ಹಾರಿಸಿದರು.

ಚಾಮುಂಡೇಶ್ವರಿ ಪೂಜೆ


ಮೈಸೂರು ತಾಲೂಕು ಜಯಪುರ ಗ್ರಾಮದ ಚಾಮುಂಡೇಶ್ವರಿ ಸೇವಾ ಸಮಿತಿ ವತಿಯಿಂದ ಮೂರನೇ ಆಷಾಡ ಶುಕ್ರವಾರ ಪ್ರಯುಕ್ತ ಚಾಮುಂಡೇಶ್ವರಿ ದೇವಿ ಮೂರ್ತಿ ಪ್ರತಿಷ್ಠಾಪಿಸಿ, ವಿಶೇಷ ಪೂಜೆ ಸಲ್ಲಿಸಿ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ಸಮಾಜ ಸೇವಕ ಎಸ್.ಶ್ರೀಕಾಂತ್, ಛಾಯಾಗ್ರಾಹಕ ಕಿರಣ್‌ಕುಮಾರ್, ಭೀಮನಾಯಕ, ರುದ್ರಸ್ವಾಮಿ, ಸಂತೋಷ್‌ಕುಮಾರ್, ಮಂಜುನಾಥ್, ಮಂಜು, ರಾಕಿ ಉಪಸ್ಥಿತರಿದ್ದರು.

ಗುರುಪೂರ್ಣಿಮೆ ಅಂಗವಾಗಿ ಅಭಿನಂಧನೆ


ಮೈಸೂರಿನ ಪ್ರತಿಭೆ ವೇದಿಕೆ ವತಿಯಿಂದ ಗುರುಪೂರ್ಣಿಮೆ ಅಂಗವಾಗಿ ಅಂಚೆ ಇಲಾಖೆಯ ನಿವೃತ್ತ ಅಧಿಕಾರಿ ಎಂ. ಅನಂತನಾರಾಯಣ ಮತ್ತು ಶ್ರೀಮತಿ ಲೀಲಾ ಅನಂತನಾರಾಯಣ ಹಾಗೂ ಶ್ರೀರಾಂಪುರ ಶಾರದಾ ಕಲಾ ಕೇಂದದ ಶ್ರೀಮತಿ ಮಂಜುಳಾ ನಟೇಶ್ ಅವರನ್ನು ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರತಿಭೆ ವೇದಿಕೆ ಅಧ್ಯಕ್ಷರಾದ ಎಸ್. ರಾಜರತ್ನಂ, ಪ್ರಧಾನ ಕಾರ್ಯದರ್ಶಿ ಶ್ರೀಮತಿ ಕೆ. ಇಂದುಮತಿ, ಬ್ಯಾಂಕ್ ಜಗದೀಶ್ ಹಾಗೂ ಶಾರದಾ ಕಲಾ ಕೇಂದದ ಸದಸ್ಯರು ಭಾಗವಹಿಸಿದ್ದರು.

ಗುರು ಪೂರ್ಣಿಮೆ ಪ್ರಯುಕ್ತ ಗುರು ವಂದನೆ


ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೇಕಲ್ ತಾಲೂಕಿನ ಶ್ರೀರಾಮ ಕುಟೀರದಲ್ಲಿ ಶ್ರೀ ರೇಣುಕಾರಾಧ್ಯ ಕಲಾವಿದರ ಬಳಗ ಮತ್ತು ಆನೇಕಲ್ ಚಂದನ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಗುರು ಪೂರ್ಣಿಮೆ ಪ್ರಯುಕ್ತ ನಡೆದ ಗುರುವಂದನಾ ಕಾರ್ಯಕ್ರಮದಲ್ಲಿ ಮೈಸೂರಿನ ರಂಗಭೂಮಿ ಕಲಾವಿದ ಹುಯಿಲಾಳು ರಾಮಸ್ವಾಮಿ, ರಾಜಾಪುರ ಸಂಸ್ಥಾನ ಮಠದ ಡಾ. ರಾಜೇಶ್ವರಿ ಶಿವಾಚಾರ್ಯ ಸ್ವಾಮೀಜಿ, ಗುಮ್ಮಾಳಪುರ ಸಂಸ್ಥಾನ ಮಠದ ಶಿವಾನಂದ ಶಿವಾಚಾರ್ಯ ಸ್ವಾಮೀಜಿ, ಪುರಸಭಾ ಅಧ್ಯಕ್ಷೆ ಸುಧಾ ನಿರಂಜನ್, ಉಪಾಧ್ಯಕ್ಷೆ ಭುವನಾ ದಿನೇಶ್, ಮಾಜಿ ಪುರಸಭಾ ಅಧ್ಯಕ್ಷ ಎನ್.ಎಸ್. ಪದ್ಮನಾಭ, ಗಂಗರಾಜ್ ಪಟೇಲ್, ಬೀರಿಹುಂಡಿ ಗೋವಿಂದರಾಜು, ವಿಜಯ್ ಕುಮಾರ್, ರೇಣುಕಾರಾಧ್ಯ, ಕುಪೇಂದ್ರ ಗೌಡ, ಕೆಬ್ಬೆಹುಂಡಿ ಶಿವಕುಮಾರ್, ಗಿರೀಶ್ ಸೂಲಿಬಲೆ, ಬಿಜೆಪಿ ಮುಖಂಡ ಲೋಹಿತ್, ನಾಗರಾಜು ಅವರನ್ನು ಸನ್ಮಾನಿಸಲಾಯಿತು.

ಗುರುವಂದನಾ ಕಾರ್ಯಕ್ರಮ


ಗುರು ಪೂರ್ಣಿಮೆ ಪ್ರಯುಕ್ತ ಕೃಷ್ಣ ರಾಜ ಕ್ಷೇತ್ರದ ಬಿಜೆಪಿ ಕಛೇರಿಯಲ್ಲಿ ಆಯೋಜಿಸಿದ್ದ ಗುರುವಂಧನಾ ಕಾರ್ಯಕ್ರಮದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಾ.ಚಂದ್ರಶೇಖರ್ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಮಾಜಿ ಮೇಯರ್ ಶಿವಕುಮಾರ್, ಕೃಷ್ಣ ರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೋಪಾಲ್‌ರಾಜೆ ಅರಸ್, ಬಿಜೆಪಿ ಒಬಿಸಿ ಮೋರ್ಚಾ ಮೈಸೂರು ನಗರ ಉಪಾಧ್ಯಕ್ಷ ಹರೀಶ್ ಅಂಕಿತ್ ಹಾಗೂ ಹಲವಾರು ಬಿಜೆಪಿ ಪಕ್ಷದ ಮುಖಂಡರು ಹಾಜರಿದ್ದರು.

ಮರದ ಕುಸರಿ ಕೆಲಸದಲ್ಲಿ ತಂತ್ರಜ್ಞಾನ ಮಿಶ್ರಣಗೊಂಡಿದೆ

ಎಂಜಿನಿಯರ್ ವಿಜಯಾನಂದ ಗುರುದೇವ್ ಅಭಿಮತ


'ವಿದ್ಯುತ್ ಹಾಗೂ ಮರದ ಕೆಲಸ' ಕುರಿತು ಮಾತನಾಡಿದ ಎಂಜಿನಿಯರ್ ವಿಜಯಾನಂದ ಗುರುದೇವ್‌ರನ್ನು ಅಭಿನಂದಿಸಲಾಯಿತು.

ಮೈಸೂರು, ಜು.11(ಎಸ್‌ಪಿಎನ್)– ಮರದಲ್ಲಿನ ಕುಸರಿ ಕಲೆ ಹಾಗೂ ತಂತ್ರಜ್ಞಾನದ ಮಿಶ್ರಣ. ಮರಗೆಲಸದೊಂದಿಗೆ ಮಾನವನಿಗೆ ಹಲವು ದಶಕಗಳ ಒಡನಾಟವಿದೆ ಎಂದು ಎಂಜಿನಿಯರ್ ವಿಜಯಾನಂದ ಗುರುದೇವ್ ತಿಳಿಸಿದರು.

ಮೈಸೂರು ಜೆಎಲ್‌ಬಿ ರಸ್ತೆಯ ದಿ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಮಾರಂಭದಲ್ಲಿ ಎಂಜಿನಿಯರ್‌ಗಳ ಸಂಸ್ಥೆ ಮೈಸೂರು ಘಟಕದ ವತಿಯಿಂದ ಕೌಶಲ ಅಭಿವೃದ್ಧಿ ಕಾರ್ಯಕ್ರಮದಲ್ಲಿ 'ವಿದ್ಯುತ್ ಹಾಗೂ ಮರದ ಕೆಲಸ' ವಿಷಯ ಕುರಿತು ಮಾತನಾಡಿದರು.

ಕರಾವಳಿ ಹಾಗೂ ಕೇರಳ ಭಾಗದ ದೇವಾಲಯ, ತೊಟ್ಟಿಮನೆಗಳಲ್ಲಿನ ಮರದ ಕೆಲಸಗಳನ್ನು ಗಮನಿಸಿದರೆ, ಮರದಲ್ಲಿನ ಕುಸುರಿ ಕಲೆಯ ಅದ್ಭುತ ಕೌಶಲವನ್ನು ಪ್ರದರ್ಶನಗೊಳ್ಳುತ್ತದೆ. ಈ ಕೆತ್ತನೆಯಲ್ಲೇ ವಿವಿಧ ಕಥೆಗಳನ್ನು ಸೃಷ್ಟಿಸಲಾಗಿರುತ್ತದೆ. ಹೀಗಾಗಿ ಮರದ ಕೆಲಸ ಮಾಡುವುದು ಕಲಿಕೆಯಿಂದ ಮಾತ್ರ ಬರುವುದಲ್ಲ. ಬದಲಾಗಿ ಆಸಕ್ತಿ ಹಾಗೂ ಅನುಭವ ಇದ್ದಾಗ ಈ ಕ್ಷೇತ್ರದಲ್ಲಿ ಬೆಳೆಯಲು ಸಾಧ್ಯ ಎಂದು ಕಿವಿಮಾತು ಹೇಳಿದರು.

ಮರದ ಕುಸರಿ ಕೆಲಸದಲ್ಲೂ ಬಹಳಷ್ಟು ಬದಲಾವಣೆ ಬಂದಿದೆ. ಮಾನವನ ಶ್ರಮ ಕಡಿಮೆ ಮಾಡಲು ವಿದ್ಯುತ್ ಯಂತ್ರಗಳು ಬಂದಿವೆ. ಕುಸರಿ ಕೆಲಸಕ್ಕೆ ಪರ್ಯಾಯ ಸಾಮಾಗ್ರಿಗಳೂ ಬಂದಿದೆ. ಆದರೂ ಕುಸರಿ ಕೆಲಸ ಮಾಡುವವರಿಗೂ ಬೇಡಿಕೆಯಿದೆ. ಇದು ಕೌಶಲಕ್ಕಿರುವ ಬೇಡಿಕೆ ತೋರಿಸುತ್ತಿದೆ ಎಂದರು.

ಮಾನವ ಕೌಶಲ ಆಕ್ರಮಿಸಿದ ಕಂಪ್ಯೂಟರ್: ಈ ಹಿಂದೆ ಮಾನವ ಕೌಶಲದಿಂದ ದೇವಾಲಯ, ಮನೆಯೊಳಗಿನ ಡಿಸೈನ್ ಸೇರಿದಂತೆ ಇತರೆ ಕ್ಷೇತ್ರದಲ್ಲಿ ಮಾನವ ಕೌಶಲಕ್ಕೆ ಬೇಡಿಕೆಯಿತ್ತು. ಆ ಜಾಗವನ್ನು ಕಂಪ್ಯೂಟರ್ ತಂತ್ರಜ್ಞಾನ ಆವರಿಸುತ್ತಿದ್ದು, ಮಾನವನ ಅವಲಂಬನೆ ಕಡಿಮೆಯಾಗಿದೆ ಎಂದು ಉದಾಹರಣೆ ಸಮೇತ ವಿವರಿಸಿದರು. ಈ ವೇಳೆ ಸಂಸ್ಥೆಯ ಅಧ್ಯಕ್ಷ ಆರ್.ದೀಪು, ಎ.ಎಸ್.ಸತೀಶ್ ಇದ್ದರು.

ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನಲ್ಲಿ ಗುರು ಪೂರ್ಣಿಮೆ


ಮೈಸೂರಿನ ದಟ್ಟಗಳ್ಳಿಯ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನಲ್ಲಿ ಗುರುಪೂರ್ಣಿಮಾ ಅಂಗವಾಗಿ ಅಕ್ಷರ ಸಂಕಲ್ಪ ಕಾರ್ಯಕ್ರಮ ನಡೆಯಿತು.

ಮೈಸೂರು, ಜು.11(ಬಿಎಲ್‌ಯು)– ಮೈಸೂರಿನ ದಟ್ಟಗಳ್ಳಿಯ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನಲ್ಲಿ ಗುರು ಪೂರ್ಣಿಮೆ ಹಿನ್ನೆಲೆಯಲ್ಲಿ ಪೂರ್ವ ಪ್ರಾಥಮಿಕ ಮಕ್ಕಳಿಗೆ ಅಕ್ಷರ ಸಂಕಲ್ಪ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಸಾಂಪ್ರದಾಯಿಕವಾಗಿ ನಡೆದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳೊಂದಿಗೆ ಪೋಷಕರು ಭಾಗವಹಿಸಿದ್ದರು. ಶಿಕ್ಷಣ ಕಲಿತರೆ ಜ್ಞಾನದ ಬಾಗಿಲು ತೆರೆಯುತ್ತದೆ ಎಂದು ಮನದಟ್ಟು ಮಾಡಲಾಯಿತು. ಅಲ್ಲದೆ ಗುರು ಹಿರಿಯರನ್ನು ಗೌರವಿಸಬೇಕು ಎಂದು ಗುರು ಪೂರ್ಣಿಮೆಯ ಮಹತ್ವವನ್ನು ತಿಳಿಸಲಾಯಿತು. ಶಾಲೆಯ ಪ್ರಾಂಶುಪಾಲರಾದ ಎಂ.ಎನ್.ಮಹೇಂದ್ರ, ಉಪ ಪ್ರಾಂಶುಪಾಲರಾದ ಶೀನಾ ಗುರ್ವಾನಿ, ಪೂರ್ವ ಪ್ರಾಥಮಿಕ ಭಾಗದ ಮುಖ್ಯಸ್ಥೆ ಇಂದಿರಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ನಾಳೆ ಮೈಸೂರಲ್ಲಿ 6 ಕೃತಿಗಳ ಲೋಕಾರ್ಪಣೆ

ಮೈಸೂರು, ಜು.11(ಜಿಎ)–ಅನುಭೂತಿ ಮತ್ತು ಚಾರು ಸಾಂಸ್ಕೃತಿಕ ಪ್ರತಿಷ್ಠಾನಗಳ ಸಂಯುಕ್ತಾಶ್ರಯದಲ್ಲಿ ಜು.13ರಂದು ಬೆಳಗ್ಗೆ 10ಗಂಟೆಗೆ ರಿಂಗ್ ರಸ್ತೆಯಲ್ಲಿರುವ ಯೂನಿವರ್ಸಿಟಿ ಲೇಔಟ್ ಎದುರಿನ ಎಸ್‌ಬಿಎಂ ಮತ್ತು ಇತರೆ ಬ್ಯಾಂಕ್ ಉದ್ಯೋಗಿಗಳ ಕ್ಷೇಮಾಭಿವೃದ್ಧಿ ಬಡಾವಣೆಯ 208ನೇ ಸಂಖ್ಯೆ ಚಾರು ಸಾಂಸ್ಕೃತಿಕ ಪ್ರತಿಷ್ಠಾನದಲ್ಲಿ ವೀರಲೋಕ ಬುಕ್ಸ್ ಹೊರ ತಂದಿರುವ 6 ಕೃತಿಗಳ ಮರು ಬಿಡುಗಡೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಅನುಭೂತಿ ಸಂಸ್ಥೆಯ ಶ್ರೀವಿದ್ಯಾ ಕಾಮತ್ ಈ ವಿಷಯ ತಿಳಿಸಿ, ಲಕ್ಷ್ಮಣ ಕೊಡಸೆ ಅವರ 'ಪತ್ರಕರ್ತನ ಪಯಣ', ರಾಗಂ ಅವರ 'ಸುಪಾರಿ ಸ್ವಾಮಿ ಮತ್ತು ಸಕೀನ', ಡಾ. ಸಂತೋಷ ಹಾನಗಲ್ ಅವರ 'ಭಾಷೆ– ಬದುಕು', ಗಿರಿಜಾ ರೈಕ್ವ ಅವರ 'ದೇವ ಸನ್ನಿಧಿ', ಅಕ್ಷತಾ ಪಾಂಡವಪುರ ಅವರ 'ರುಚಿಗೆ ತಕ್ಕಷ್ಟು' ಹಾಗೂ ಆರ್.ಬಿ. ಗುರು ಬಸವರಾಜ್ ಅವರ 'ಏನಾಗುತ್ತೆ ಗುರು' ಕೃತಿಗಳು ಮರು ಬಿಡುಗಡೆ ಆಗಲಿವೆ. ಪ್ರಕಾಶಕರಾದ ವೀರಕಪುತ್ರ ಶ್ರೀನಿವಾಸ ಇನ್ನಿತರರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಡಾ.ವಿನೋದ, ಜಿ.ಸೀತಾರಾಂ, ಹೆಚ್.ಎಸ್.ಮಧುರಾಣಿ, ಡಾ.ತ್ರಿವೇಣಿ, ಕುಸುಮಾ ಆಯರಹಳ್ಳಿ ಹಾಗೂ ದಿವಿಜ ಭಾರದ್ವಾಜ್ ಕೃತಿಗಳನ್ನು ಕುರಿತು ಮಾತನಾಡಲಿದ್ದಾರೆ ಎಂದ ಅವರು ಪಾಲ್ಗೊಳ್ಳಲಿಚ್ಛಿಸುವವರು ಹೆಚ್ಚಿನ ಮಾಹಿತಿಗೆ ದೂ. 97424 72777 ಹಾಗೂ 89711 44897ನ್ನು ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪ್ರತಿಷ್ಠಾನದ ಪ್ರೊ.ಶೀಲಾಕುಮಾರಿ ಉಪಸ್ಥಿತರಿದ್ದರು.

4ನೇ ದಿನಕ್ಕೆ ಕಾಲಿಟ್ಟ ಮೈಸೂರು ನಗರ ಪಾಲಿಕೆ ನೌಕರರ ಪ್ರತಿಭಟನೆ

ಮೈಸೂರು, ಜು.11(ಬಿಎಲ್‌ಯು)– ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮೈಸೂರು ನಗರ ಪಾಲಿಕೆ ನೌಕರರು ನಡೆಸುತ್ತಿರುವ ಪ್ರತಿಭಟನೆ 4ನೇ ದಿನಕ್ಕೆ ಕಾಲಿಟ್ಟಿದೆ. ಪೌರ ಕಾರ್ಮಿಕರು ಸೇರಿದಂತೆ ನಗರ ಪಾಲಿಕೆಯ ಎಲ್ಲಾ ನೌಕರರು ಕೆಲಸಕ್ಕೆ ಗೈರು ಹಾಜರಾಗಿ ಪ್ರತಿಭಟನೆ ನಡೆಸುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗಿದೆ.

ಕಸ ವಿಲೇವಾರಿ ಮಾಡದ ಕಾರಣ ನಗರದ ಬಹತೇಕ ಸ್ಥಳಗಳಲ್ಲಿ ಕಸದ ರಾಶಿ ಬಿದ್ದಿದ್ದು, ಗಬ್ಬು ನಾರುತ್ತಿದೆ. ನಗರ ಪಾಲಿಕೆಯ ಪ್ರಧಾನ ಕಚೇರಿಯಲ್ಲಿ ಜನನ ಪ್ರಮಾಣ ಪತ್ರ, ಮರಣ ಪ್ರಮಾಣ ಪತ್ರ, ಕಟ್ಟಡಗಳ ನಕ್ಷೆ ಸೇರಿದಂತೆ ಹಲವು ದಾಖಲಾತಿ ಪಡೆಯಲು ಸಾಧ್ಯವಾಗದೆ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ. ಬೇಡಿಕೆ ಈಡೇರಿಸುವ ತನಕ ಪ್ರತಿಭಟನೆ ಕೈ ಬಿಡುವುದಿಲ್ಲ ಎಂದು ನೌಕರರು ಪಟ್ಟು ಹಿಡಿದಿದ್ದು, ಸರ್ಕಾರ ಈಗ ಯಾವ ರೀತಿಯ ತೀರ್ಮಾನ ಕೈಗೊಳ್ಳಲಿದೆ ಎಂದು ಕಾದು ನೋಡಬೇಕಿದೆ.

ತಾಂತ್ರಿಕ ಶಿಕ್ಷಣದ ಕೆಲವು ಕೋರ್ಸ್‌ಗಳ ಶುಲ್ಕ ಶೇ.50 ಕಡಿತ

ಬೇಡಿಕೆ ಇರುವ ಕೆಲ ಕೋರ್ಸ್‌ಗಳ ಶುಲ್ಕ ಶೇ.7.5ರಷ್ಟು ಹೆಚ್ಚಳ

ಮೈಸೂರು, ಜು.11(ಎಸ್‌ಪಿಎನ್)– ಮೆಕ್ಯಾನಿಕಲ್, ಸಿವಿಲ್ ಎಂಜಿನಿಯರಿಂಗ್ ಸೇರಿದಂತೆ ಕೆಲವು ಕೋರ್ಸ್‌ಗಳ ಶುಲ್ಕವನ್ನು 2025–26ನೇ ಸಾಲಿನಿಂದ ಅನ್ವಯವಾಗುವಂತೆ ಶೇ 50ರಷ್ಟು ಕಡಿತ ಮಾಡಿ, ಬೇಡಿಕೆ ಇರುವ ಕೋರ್ಸ್‌ಗಳ ಶುಲ್ಕವನ್ನು ಶೇ 7.5ರಷ್ಟು ಹೆಚ್ಚಳ ಮಾಡಿ ಉನ್ನತ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಬೇಡಿಕೆ ಕುಸಿದು, ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿರುವ ಜವಳಿ ತಂತ್ರಜ್ಞಾನ, ರೇಷ್ಮೆ ತಂತ್ರಜ್ಞಾನ ಮತ್ತು ಆಟೋಮೊಬೈಲ್ ಕೋರ್ಸ್‌ಗಳಿಗೂ ಶುಲ್ಕ ಕಡಿತದ ಸೌಲಭ್ಯ ಸಿಗಲಿದೆ. ಶುಲ್ಕ ವಿನಾಯಿತಿ ಸೌಲಭ್ಯ ಪಡೆಯಲು ಬಯಸುವ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು ಕೆಇಎಗೆ ಮನವಿ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ.

ಕಳೆದ ವರ್ಷ ಸಿವಿಲ್ ಎಂಜಿನಿಯರಿಂಗ್ ವಿಭಾಗದಲ್ಲಿ 5,723 ಸೀಟುಗಳಿದ್ದು, ಅವುಗಳಲ್ಲಿ 2,883 ಸೀಟುಗಳು ಹಂಚಿಕೆಯಾಗಿದ್ದವು. ಮೆಕ್ಯಾನಿಕಲ್ ವಿಭಾಗದ 5,977 ಸೀಟುಗಳಲ್ಲಿ 2,783 ಸೀಟುಗಳು ಭರ್ತಿಯಾಗಿದ್ದವು.

ಕೆಲ ಕೋರ್ಸ್‌ಗಳ ಶುಲ್ಕ ಶೇ 7.5 ಹೆಚ್ಚಳ: ವಾಸ್ತುಶಿಲ್ಪ ಶಾಸ್ತ್ರ ಸೇರಿದಂತೆ ಕೆಲ ಕೋರ್ಸ್‌ಗಳ ಶುಲ್ಕವನ್ನು ಖಾಸಗಿ ಕಾಲೇಜುಗಳಿಗೆ ಶೇ 7.5ರಷ್ಟು, ಸರ್ಕಾರಿ ಕಾಲೇಜುಗಳಿಗೆ ಶೇ 5ರಷ್ಟು ಹೆಚ್ಚಿಸಲಾಗಿದೆ. ಈ ಶುಲ್ಕವು ವಿಶ್ವವಿದ್ಯಾಲಯ ನೋಂದಣಿ ಮತ್ತು ಇತರ ಸಂಸ್ಕರಣಾ ಶುಲ್ಕಗಳನ್ನು ಹೊರತುಪಡಿಸಿದೆ.

ಕಳೆದ ವರ್ಷ ಟೈಪ್–1 ಖಾಸಗಿ ಕಾಲೇಜುಗಳಲ್ಲಿ ಸಿಇಟಿ ಸೀಟುಗಳಿಗೆ 76,135, ಟೈಪ್–2 ಕಾಲೇಜುಗಳಿಗೆ 84,596, ಕಾಮೆಡ್–ಕೆ ಸೀಟುಗಳಿಗೆ ಟೈಪ್–1 ಕಾಲೇಜುಗಳಲ್ಲಿ 1,86,111 ಮತ್ತು ಟೈಪ್–2 ಕಾಲೇಜುಗಳಲ್ಲಿ 2,61,477 ಶುಲ್ಕವಿತ್ತು.

ಸೂಪರ್‌ನ್ಯೂಮರರಿ ಕೋಟಾದ ಅಡಿ ಪ್ರವೇಶ ಪಡೆದ ಅಭ್ಯರ್ಥಿಗಳಿಗೆ ಬೋಧನಾ ಶುಲ್ಕದಲ್ಲಿ ವಿನಾಯಿತಿ ನೀಡಲಾಗಿದೆ. ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು ಅಂತಹ ವಿದ್ಯಾರ್ಥಿಗಳಿಗೆ ಮೊದಲ ವರ್ಷದಲ್ಲಿ 20,000 ಶುಲ್ಕ ವಿಧಿಸಲು ಅವಕಾಶ ನೀಡಲಾಗಿದೆ.

ತಾಂತ್ರಿಕ ಶಿಕ್ಷಣ ಶುಲ್ಕ ಹೆಚ್ಚಳಕ್ಕೆ ಎಡಿಎಎಸ್‌ಓ ಖಂಡನೆ

ಮೈಸೂರು, ಜು.11– ಇಂಜಿನಿಯರಿಂಗ್ ಮತ್ತು ಆರ್ಕಿಟೆಕ್ಚರ್ ಕೋರ್ಸ್‌ಗಳಿಗೆ ಶುಲ್ಕ ಹೆಚ್ಚಳ ಮಾಡಿರುವ ರಾಜ್ಯ ಸರ್ಕಾರದ ನಡೆಯನ್ನು ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆಯು ತೀವ್ರವಾಗಿ ಖಂಡಿಸುತ್ತದೆ.

ಖಾಸಗಿ ಅನುದಾನರಹಿತ ಕಾಲೇಜುಗಳಲ್ಲಿನ ಸರ್ಕಾರಿ ಸೀಟುಗಳ ಶುಲ್ಕವನ್ನು ಶೇ 7.5%ರಷ್ಟು ಹೆಚ್ಚಿಸಲಾಗಿದೆ. ಸರ್ಕಾರಿ ಕಾಲೇಜುಗಳ ಶುಲ್ಕವನ್ನು ಶೇ 5%ರಷ್ಟು ಹೆಚ್ಚಿಸಲಾಗಿದೆ. ಶುಲ್ಕಗಳನ್ನು ಹೆಚ್ಚಿಸುವುದೇ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರದ ಚಾಳಿಯಾಗಿದೆ. ರೈತ, ಕಾರ್ಮಿಕರು ಸೇರಿದಂತೆ, ನಾಡಿನ ಜನರು ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ರಾಜ್ಯ ಸರ್ಕಾರವು ಶುಲ್ಕಗಳನ್ನು ಹೆಚ್ಚಿಸುತ್ತಿರುವುದು ಖಂಡನೀಯ. ರಾಜ್ಯ ಸರ್ಕಾರವು ಕೂಡಲೇ ತನ್ನ ವಿದ್ಯಾರ್ಥಿ ವಿರೋಧಿ ಹಾಗೂ ಜನ ವಿರೋಧಿ ನಿಲುವನ್ನು ಕೈಬಿಟ್ಟು ಶುಲ್ಕಗಳನ್ನು ಕಡಿತಗೊಳಿಸಬೇಕೆಂದು ಎಐಡಿಎಸ್‌ಓ ಮೈಸೂರು ಜಿಲ್ಲಾ ಸಮಿತಿಯ ಕಾರ್ಯದರ್ಶಿ ನಿತಿನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇಶ - ವಿದೇಶ

ಪಾಕ್‌ನಲ್ಲಿ ಮತ್ತೆ ಬಲೂಚಿಸ್ತಾನ ಬಂಡುಕೋರರ ದಾಳಿ; 9 ಪ್ರಯಾಣಿಕರ ಸಾವು

ಕರಾಚಿ: ಪಾಕಿಸ್ತಾನದಲ್ಲಿ ಬಲೂಚಿಸ್ತಾನ ಬಂಡುಕೋರರ ದಾಳಿ ಮುಂದುವರೆದಿದ್ದು, ಈ ಬಾರಿ 9 ಪ್ರಯಾಣಿಕರನ್ನು ಗುಂಡಿಕ್ಕಿ ಕೊಂದು ಹಾಕಿದ್ದಾರೆ.ಪಾಕಿಸ್ತಾನದ ಝೋಬ್ ಜಿಲ್ಲೆಯ ಸುರ್–ಡಕ್ಕೈ ಪ್ರದೇಶದ ರಾಷ್ಟ್ರೀಯ ಹೆದ್ದಾರಿಯಲ್ಲಿ ಗುರುವಾರ ತಡರಾತ್ರಿ ಈ ಘಟನೆ ನಡೆದಿದ್ದು, ಬಲೂಚಿಸ್ತಾನ್ ಪ್ರಾಂತ್ಯದಲ್ಲಿ ಪ್ರಯಾಣಿಕರ ಬಸ್‌ಗಳಿಂದ ಪಂಜಾಬ್‌ನ ಒಂಬತ್ತು ಪ್ರಯಾಣಿಕರನ್ನು ಇಳಿಸಿದ ನಂತರ ಬಲೂಚ್ ಬಂಡುಕೋರರು ಗುಂಡು ಹಾರಿಸಿ ಕೊಂದಿದ್ದಾರೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಈ ಬಗ್ಗೆ ಮಾಹಿತಿ ನೀಡಿರುವ ಸಹಾಯಕ ಆಯುಕ್ತ ಝೋಬ್ ನವೀದ್ ಆಲಂ, ಸಶಸ್ತ್ರ ಬಂಡುಕೋರರು ಪಂಜಾಬ್‌ಗೆ ಹೋಗುವ ಎರಡು ಬಸ್‌ಗಳನ್ನು ತಡೆದು ಪ್ರಯಾಣಿಕರ ಗುರುತಿನ ಚೀಟಿಗಳನ್ನು ಪರಿಶೀಲಿಸಿ ಒಂಬತ್ತು ಪ್ರಯಾಣಿಕರನ್ನು ಇಳಿಸಿ ಗುಂಡು ಹಾರಿಸಿದ್ದಾರೆ. ಎರಡೂ ಬಸ್ ಗಳಿಂದ ಅಪಹರಿಸಲಾದ ಒಂಬತ್ತು ಜನರು ಸಾವನ್ನಪ್ಪಿದ್ದಾರೆ ಮತ್ತು ಅವರ ಶವಗಳನ್ನು ವಶಪಡಿಸಿಕೊಳ್ಳಲಾಗಿದೆ. ಎಲ್ಲಾ ಒಂಬತ್ತು ಜನರು ಪಂಜಾಬ್ ಪ್ರಾಂತ್ಯದ ವಿವಿಧ ಭಾಗಗಳಿಗೆ ಸೇರಿದವರಾಗಿದ್ದಾರೆ. ಒಂಬತ್ತು ಶವಗಳನ್ನು ಮರಣೋತ್ತರ ಪರೀಕ್ಷೆ ಮತ್ತು ಅಂತ್ಯಕ್ರಿಯೆ ಪ್ರಕ್ರಿಯೆಗಳಿಗಾಗಿ ಆಸ್ಪತ್ರೆಗೆ ಸ್ಥಳಾಂತರಿಸಿದ್ದೇವೆ ಎಂದು ಹೇಳಿದರು.

ಕೆನಡಾದಲ್ಲಿ ಕಪಿಲ್ ಶರ್ಮಾ ಕೆಫೆ ಮೇಲೆ ಗುಂಡಿನ ದಾಳಿ



ಕೆನಡಾ: ಬಾಲಿವುಡ್ ಕಿರುತೆರೆ ಕಾಮಿಡಿ ಕಿಂಗ್ ಕಪಿಲ್ ಶರ್ಮಾ ಅವರ ಕೆನಡಾದ ಕ್ಯಾಪ್ಸ್ ಕೆಫೆಯಲ್ಲಿ ಗುರುವಾರ ಗುಂಡಿನ ದಾಳಿ ನಡೆದಿದ್ದು, ಕಪಿಲ್ ಶರ್ಮಾ ಕೆಫೆ ಮೇಲೆ ಖಾಲಿಸ್ತಾನ್ ಉಗ್ರರು ದಾಳಿ ನಡೆಸಿ 9 ಸುತ್ತು ಗುಂಡು ಹಾರಿಸಿದ್ದಾರೆ.

ಕಪಿಲ್ ಶರ್ಮಾ ಹಾಗೂ ಪತ್ನಿ ಗಿನ್ನಿ ಚಾತ್ರಾತ್ ಜೊತೆಯಾಗಿ ಈ ಕೆಫೆ ಆರಂಭಿಸಿದ್ದರು. ಆದರೆ ಆರಂಭಗೊಂಡ ಕೆಲವೇ ದಿನದಲ್ಲಿ ಖಲಿಸ್ತಾನಿ ಉಗ್ರರು ಕ್ಯಾಪ್ಸ್ ಕೆಫೆ ಮೇಲೆ ಗುಂಡಿನ ದಾಳಿ ನಡೆಸಿದ್ದಾರೆ. ನಿಷೇಧಿತ ಖಲಿಸ್ತಾನಿ ಉಗ್ರ ಸಂಘಟನೆ ಈ ದಾಳಿಯ ಹೊಣೆ ಹೊತ್ತುಕೊಂಡಿದೆ ಎಂದು ಹೇಳಲಾಗುತ್ತಿದೆ. ಗುಂಡಿನ ದಾಳಿ ನಡೆಸುತ್ತಿರುವ ದೃಶ್ಯ ಬಹಿರಂಗವಾಗಿದೆ.

ಭಾನುವಾರ ರಾತ್ರಿ ನಿಷೇಧಿತ ಖಲಿಸ್ತಾನಿ ಉಗ್ರ ಸಂಘಟನೆಯ ಅಂಗ ಸಂಘಟನೆ ಬಬ್ಬರ್ ಖಾಲ್ಸಾ ಇಂಟರ್‌ನ್ಯಾಷನಲ್ ಗ್ಯಾಂಗ್ ಈ ದಾಳಿ ನಡೆಸಿದೆ ಎಂದು ಪ್ರಾಥಮಿಕ ತನಿಖೆಯಲ್ಲಿ ಪತ್ತೆಯಾದ ಅಂಶಗಳನ್ನು ಮೂಲಗಳು ಹೇಳುತ್ತಿದೆ.

ನಿಷೇಧಿತ ಉಗ್ರ ಸಂಘಟನೆಯ ಉಗ್ರರು ತಡ ರಾತ್ರಿ ಕ್ಯಾಪ್ಸ್ ಕೆಫೆಯಿಂದ ಕೆಲವೇ ದೂರದಲ್ಲಿ ನಿಂತು ಗುಂಡಿನ ದಾಳಿ ನಡೆಸಿದ್ದಾರೆ. ಈ ದಾಳಿಯ ದೃಶ್ಯಗಳು ಬಹಿರಂಗವಾಗಿದೆ. ತಡ ರಾತ್ರಿಯಾದ ಕಾರಣ ಕ್ಯಾಪ್ಸ್ ಕೆಫೆ ಕ್ಲೋಸ್ ಆಗಿತ್ತು. ಹೀಗಾಗಿ ಅದೃಷ್ಟವಶಾತ್ ಯಾವುದೇ ಪ್ರಾಣ ಹಾನಿಯಾಗಿಲ್ಲ. ಆದರೆ ರೆಸ್ಟೋರೆಂಟ್ ಸಂಪೂರ್ಣ ಹಾನಿಯಾಗಿದೆ.

6 ವರ್ಷದ ಬಾಲಕಿ ಮದುವೆಯಾದ 45ರ ಆಫ್ಘಾನ್ ವ್ಯಕ್ತಿ!



ಕಾಬುಲ್: 45 ವರ್ಷದ ವ್ಯಕ್ತಿ 6 ವರ್ಷದ ಪುಟ್ಟ ಬಾಲಕಿಯನ್ನು ಮದುವೆಯಾಗಿರುವ ವಿಚಾರ ಆಫ್ಘಾನಿಸ್ತಾನದಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಗಿರುವಂತೆಯೇ ಅಲ್ಲಿನ ಆಡಳಿತಾರೂಢ ತಾಲಿಬಾನ್ ಬಾಲಕಿಗೆ 9 ವರ್ಷ ಆಗುವವರೆಗೂ ಕಾಯುವಂತೆ ಆಕೆ ಪತಿಗೆ ಸೂಚನೆ ನೀಡಿದೆ. ದಕ್ಷಿಣ ಅಫ್ಘಾನಿಸ್ತಾನದ ಮಾರ್ಜಾ ಜಿಲ್ಲೆಯಲ್ಲಿ ಆರು ವರ್ಷದ ಬಾಲಕಿಯನ್ನು 45 ವರ್ಷದ ವ್ಯಕ್ತಿಯೊಂದಿಗೆ ಬಲವಂತವಾಗಿ ಮದುವೆ ಮಾಡಲಾಗಿದೆ ಎಂಬ ಸುದ್ದಿ ಆಫ್ಘಾನಿಸ್ತಾನದಾದ್ಯಂತ ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿದ್ದು, ದೇಶ–ವಿದೇಶಗಳ ಮಾನವಹಕ್ಕು ಸಂಘಸಂಸ್ಥೆಗಳು ಇದರ ವಿರುದ್ಧ ಧ್ವನಿ ಎತ್ತಿವೆ. ಹೀಗಿರುವಂತೆಯೇ ಪುಟ್ಟ ಬಾಲಕಿಯನ್ನು ಮದುವೆಯಾಗಿದ್ದ ವ್ಯಕ್ತಿಗೆ ಅಲ್ಲಿನ ತಾಲಿಬಾನ್ ಸರ್ಕಾರ ವಿಲಕ್ಷಣ ಸೂಚನೆ ನೀಡಿದ್ದು, ಬಾಲಕಿಗೆ 9 ವರ್ಷ ವಯಸ್ಸಾಗುವವರೆಗೂ ಕಾಯುವಂತೆ ಸೂಚನೆ ನೀಡಿದೆ.

ಇನ್ನು ಅಮೆರಿಕ ಮೂಲದ ಅಫ್ಘಾನ್ ಮಾಧ್ಯಮ Amu.tv ವರದಿ ಮಾಡಿರುವಂತೆ ಇಬ್ಬರು ಪತ್ನಿಯರನ್ನು ಹೊಂದಿರುವ ಆ 45 ವರ್ಷದ ವ್ಯಕ್ತಿ ಮಗುವಿನ ಕುಟುಂಬಕ್ಕೆ ಮದುವೆಗಾಗಿ ಹಣ ನೀಡಿದ್ದಾನೆ ಎನ್ನಲಾಗಿದೆ. ಹಣ ನೀಡಿ 6 ವರ್ಷದ ಬಾಲಕಿಯನ್ನು ಮದುವೆಗಾಗಿ ಖರೀದಿ ಮಾಡಿದ್ದಾನೆ ಎಂದು ವರದಿ ಮಾಡಿದೆ.

ಟೆನಿಸ್ ಆಟಗಾರ್ತಿ ಗುಂಡಿಕ್ಕಿ ಕೊಂದ ತಂದೆ ಕೊಲೆ



ಗುರುಗ್ರಾಮ: 25 ವರ್ಷದ ಟೆನಿಸ್ ಆಟಗಾರ್ತಿ ರಾಧಿಕಾ ಯಾದವ್ ಅವರನ್ನು ಹತ್ಯೆ ಮಾಡಿದ ತಂದೆ ದೀಪಕ್ ಯಾದವ್ ಅವರು, ನನ್ನ ಆದಾಯದಲ್ಲಿ ಬದುಕುತ್ತಿದ್ದಿಯಾ ಅಂತ ಆಗಾಗ್ಗೆ ನಿಂದಿಸುತ್ತಿದ್ದ ಕಾರಣ ಆಕೆ ಮೇಲೆ ಗುಂಡು ಹಾರಿಸಿದ್ದಾಗಿ ತಪ್ಪೊಪ್ಪಿಕೊಂಡಿದ್ದಾರೆ.

ಆದರೆ, ಶುಕ್ರವಾರ ಪೊಲೀಸರು ಮಾಜಿ ಟೆನಿಸ್ ಆಟಗಾರ್ತಿ ರಾಧಿಕಾ ಯಾದವ್ ಅವರ ಕೊಲೆ ಪ್ರಕರಣದ ತನಿಖೆ ನಡೆಸುತ್ತಿದ್ದೇವೆ. ಘಟನೆ ನಡೆದಾಗ ಅವರ ತಾಯಿ ಏನು ಮಾಡುತ್ತಿದ್ದರು ಎಂಬುದನ್ನು ಸಹ ತನಿಖೆ ನಡೆಸುತ್ತಿದ್ದೇವೆ ಎಂದು ಹೇಳಿದ್ದಾರೆ. ಮೃತ ರಾಧಿಕಾ ಚಿಕ್ಕಪ್ಪ ಕುಲದೀಪ್ ಯಾದವ್ ಅವರ ದೂರಿನ ಆಧಾರದ ಮೇಲೆ ದಾಖಲಾಗಿರುವ ಎಫ್‌ಐಆರ್ ಪ್ರಕಾರ ಘಟನೆ ನಡೆದಾಗ ರಾಧಿಕಾ ಅವರ ತಾಯಿ ಮಂಜು ಯಾದವ್ ಮನೆಯ ಮೊದಲ ಮಹಡಿಯಲ್ಲಿದ್ದರು. ಎಫ್‌ಐಆರ್‌ನಲ್ಲಿ ದೀಪಕ್, ಅವರ ಪತ್ನಿ ಮಂಜು ಮತ್ತು ಮಗಳು ರಾಧಿಕಾ ಸೆಕ್ಟರ್ 57ರ ಮನೆಯ ಮೊದಲ ಮಹಡಿಯಲ್ಲಿ ವಾಸಿಸುತ್ತಿದ್ದರು ಮತ್ತು ತಾವು ತಮ್ಮ ಕುಟುಂಬದೊಂದಿಗೆ ನೆಲ ಮಹಡಿಯಲ್ಲಿ ವಾಸಿಸುತ್ತಿರುವುದಾಗಿ ಕುಲದೀಪ್ ಯಾದವ್ ಹೇಳಿದ್ದಾರೆ.

ಮೂವರು ಮಕ್ಕಳನ್ನು ಕೊಂದ ತಾಯಿಗೆ ಗಲ್ಲು, ಪ್ರಿಯಕರನಿಗೆ ಜೀವಾವಧಿ ಶಿಕ್ಷೆ

ಔರೈಯಾ: ಉತ್ತರ ಪ್ರದೇಶದ ಔರೈಯಾ ನ್ಯಾಯಾಲಯ 2024ರಲ್ಲಿ ತನ್ನ ಮೂವರು ಅಪ್ರಾಪ್ತ ಮಕ್ಕಳನ್ನು ಸೆಂಗರ್ ನದಿಯಲ್ಲಿ ಮುಳುಗಿಸಿ ಕೊಂದ ಮಹಿಳೆಗೆ ಮರಣದಂಡನೆ ಶಿಕ್ಷೆ ಮತ್ತು ಕೃತ್ಯಕ್ಕೆ ಸಾಥ್ ನೀಡಿದ ಆಕೆಯ ಪ್ರಿಯಕರನಿಗೆ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ಪ್ರಕರಣದ ವಿಚಾರಣೆ ನಡೆಸಿದ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಸೈಫ್ ಅಹ್ಮದ್ ಅವರು ಗುರುವಾರ ಮೂವರು ಮಕ್ಕಳನ್ನು ಕೊಂದ ಪ್ರಿಯಾಂಕಾ ತಪ್ಪಿತಸ್ಥಳೆಂದು ಘೋಷಿಸಿ ಮರಣದಂಡನೆ ವಿಧಿಸಿದರು. ಅಲ್ಲದೆ ಕೊಲೆಗೆ ಸಾಥ್ ನೀಡಿದ ಆಕೆಯ ಪ್ರಿಯಕರ ಆಶಿಶ್ ಅಲಿಯಾಸ್ ಡ್ಯಾನಿಗೆ ಜೀವಾವಧಿ ಶಿಕ್ಷೆ ವಿಧಿಸಿದ್ದಾರೆ. ಕೊಲೆ ಯತ್ನದಿಂದ ಬದುಕುಳಿದ ಪ್ರಿಯಾಂಕಾಳ ಒಂಬತ್ತು ವರ್ಷದ ಮಗ ಪ್ರಕರಣದಲ್ಲಿ ನಿರ್ಣಾಯಕ ಸಾಕ್ಷ್ಯ ಹೇಳಿದ್ದಾನೆ.

ವಿಚಾರಣೆಯ ಸಮಯದಲ್ಲಿ, ಸರ್ಕಾರಿ ವಕೀಲರು ತನ್ನ ಪ್ರಿಯಕರನೊಂದಿಗೆ ಮೂವರು ಮುಗ್ಧ ಮಕ್ಕಳನ್ನು ನೀರಿನಲ್ಲಿ ಮುಳುಗಿಸಲು ಸಂಚು ರೂಪಿಸಿದ ತಾಯಿಯ ಈ ಕೃತ್ಯ ಅಪರೂಪದಲ್ಲಿ ಅಪರೂಪ ಎಂದು ವಾದಿಸಿದರು. ನ್ಯಾಯಾಲಯವು ಪ್ರಿಯಾಂಕಾಗೆ 2.5 ಲಕ್ಷ ರೂ. ಮತ್ತು ಆಶಿಶ್‌ಗೆ 1 ಲಕ್ಷ ರೂ. ದಂಡವನ್ನು ವಿಧಿಸಿದೆ. ಇದಲ್ಲದೆ, ಒಟ್ಟು ದಂಡದ ಮೊತ್ತದ ಶೇಕಡಾ 75 ರಷ್ಟು ಮೊತ್ತವನ್ನು ಬದುಕುಳಿದ ಮಗು ಸೋನುಗೆ ನೀಡುವಂತೆ ನ್ಯಾಯಾಲಯ ಆದೇಶಿಸಿದೆ.

ಮಳೆ ಅನಾಹುತ ಆಗದಂತೆ ಮುನ್ನೆಚ್ಚರ ವಹಿಸಿ

ಕೆಡಿಪಿ ಸಭೆಯಲ್ಲಿ ಉಸ್ತುವಾರಿ ಸಚಿವರ ಆದೇಶ



ಜಿಲ್ಲಾ ಉಸ್ತುವಾರಿ ಸಚಿವ ಭೋಸರಾಜು ಶುಕ್ರವಾರ ಕೆಡಿಪಿ ಸಭೆ ನಡೆಸಿದರು

ಮಡಿಕೇರಿ,ಜು.11–ಜಿಲ್ಲೆಯಲ್ಲಿ ಮುಂದಿನ ದಿನಗಳಲ್ಲಿ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇದ್ದು, ಯಾವುದೇ ರೀತಿಯಲ್ಲೂ ಅನಾಹುತ ಆಗದಂತೆ ಮುನ್ನೆಚ್ಚರ ವಹಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಭೋಸರಾಜು ಸೂಚಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜೂ.26 ರ ಸಭೆಯಲ್ಲಿ ಸೂಚಿಸಲಾಗಿದ್ದ ಕ್ರಮಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡ ಸಚಿವರು ಅಂಗನವಾಡಿ, ಶಾಲೆ, ವಿದ್ಯಾರ್ಥಿನಿಲಯ, ವಸತಿ ಶಾಲೆಗಳು ಸೇರಿದಂತೆ ಕಟ್ಟಡ ಸುಸ್ಥಿತಿ ಸಂಬಂಧಿಸಿದಂತೆ ವರದಿ ನೀಡಲು ಸೂಚಿಸಲಾಗಿತ್ತು. ಅದರಂತೆ ಅಧಿಕಾರಿಗಳು ವರದಿ ನೀಡಿದ್ದು, ಈ ಸಂಬಂಧ ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಲಾಗಿದೆ ಎಂದು ಸಚಿವರು ತಿಳಿಸಿದರು.

ಶಾಸಕಎ.ಎಸ್.ಪೊನ್ನಣ್ಣ ಮಾತನಾಡಿ ಕಳೆದ ಬಾರಿಯ ಮಳೆಹಾನಿ ಕಾಮಗಾರಿ ಇನ್ನೂ ಕೈಗೊಂಡಿಲ್ಲ ಸರ್ಕಾರ ಹಣ ನೀಡಿದೆ. ಆದರೂ ಎಂಜಿನಿಯರ್‌ಗಳು ಕೆಲಸ ನಿರ್ವಹಿಸಲು ಮುಂದಾಗುವುದಿಲ್ಲ. ಈ ರೀತಿಯಾದರೆ ಹೇಗೆ ಎಂದು ಎಂದು ಆಕ್ರೋಶದಿಂದ ಪ್ರಶ್ನಿಸಿದರು. ಜಿಲ್ಲೆಯಲ್ಲಿ ನಿರಂತರವಾಗಿ ಮಳೆ ಇರುತ್ತದೆ. ಆದ್ದರಿಂದ ರಸ್ತೆ ಸರಿಪಡಿಸುವಂತೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಸೂಚಿಸಿದರೆ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷ ಧರ್ಮಜ ಉತ್ತಪ್ಪ ಮಳೆಯಿಂದಾಗಿ ರಸ್ತೆಗಳ ತುಂಬಾ ಗುಂಡಿಬಿದ್ದಿದ್ದು ಇವುಗಳನ್ನು ಸರಿಪಡಿಸುವಂತಾಗಬೇಕು ಎಂದು ಹೇಳಿದರು.

ಕನ್ನಂಡಬಾಣೆ ವ್ಯಾಪ್ತಿಯಲ್ಲಿ ವಾಸ ಮಾಡುವವರಿಗೆ ಕನಿಷ್ಠ ಮೂಲಭೂತ ಸೌಲಭ್ಯ ಕಲ್ಪಿಸುವಲ್ಲಿ ಮಾನವೀಯತೆ ತೋರಬೇಕು. ಮೆಟ್ಟಿಲು ಇರುವ ಕಡೆ ರಸ್ತೆ ನಿರ್ಮಾಣ ಮಾಡುವಂತೆ ಹೇಳಿದ ಶಾಸಕ ಡಾ.ಮಂತರ್ ಗೌಡ ಜಿಲ್ಲೆಯಲ್ಲಿ ಗಾಂಜಾ ಪ್ರಕರಣಗಳು ಹೆಚ್ಚಾಗುತ್ತಿದ್ದು, ಈ ಬಗ್ಗೆ ಪೊಲೀಸ್ ಇಲಾಖೆ ಅಧಿಕಾರಿಗಳು ಹೆಚ್ಚಿನ ನಿಗಾ ವಹಿಸುವಂತೆ ಸೂಚಿಸಿದರು. ಬೀಟ್ ಪೊಲೀಸರು ಗಾಂಜಾ ಪ್ರಕರಣ ಹೆಚ್ಚಾಗದಂತೆ ಗಮನ ಹರಿಸುವಂತೆ ನಿರ್ದೇಶನ ನೀಡಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ಉಪ ಅರಣ್ಯ ಸಂರಕ್ಷಣಾಧಿಕಾರಿ ಅಭಿಷೇಕ್ ಇತರರು ಇದ್ದರು.

ಬಡ ಕುಟುಂಬಗಳಿಗೆ ನಿವೇಶನ ಹಕ್ಕುಪತ್ರಕ್ಕೆ ಕ್ರಮ



ಶಾಸಕ ಎ.ಎಸ್.ಪೊನ್ನಣ್ಣ ಶುಕ್ರವಾರ ಸುದ್ದಿಗೋಷ್ಠಿ ನಡೆಸಿದರು

ಮಡಿಕೇರಿ, ಜು.11– ವಿರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿ ಲೈನ್ ಮನೆಗಳಲ್ಲಿ ವಾಸವಾಗಿರುವ 1590 ಆದಿವಾಸಿ ಬಡ ಕುಟುಂಬಗಳಿಗೆ ನಿವೇಶನ ನೀಡಿ ಹಕ್ಕುಪತ್ರ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಇದಕ್ಕಾಗಿ 60 ಎಕರೆ ಸರಕಾರಿ ಭೂಮಿಯನ್ನು ಗುರುತಿಸಲಾಗಿದೆ ಎಂದು ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ತಿಳಿಸಿದ್ದಾರೆ.

ನಗರದಲ್ಲಿ ಮಾತನಾಡಿದ ಎ.ಎಸ್.ಪೊನ್ನಣ್ಣ, ಬುಡಕಟ್ಟು ಜನರಿಗೆ ಹಕ್ಕುಪತ್ರ ಮತ್ತು ನಿವೇಶನ ಹಂಚಿಕೆ ಮಾಡುವ ಸಂಬಂಧ ಜಿಲ್ಲಾಧಿಕಾರಿ, ಕಂದಾಯ ಇಲಾಖೆ, ಐಟಿಡಿಪಿ ಹಾಗೂ ಇತರೆ ಇಲಾಖೆಗಳ ಜೊತೆಯಲ್ಲಿ ಸಭೆ ನಡೆಸಲಾಗಿದೆ. 1 ತಿಂಗಳ ಹಿಂದೆ ನಿವೇಶನ ಹಂಚಿಕೆ ಮಾಡುವ ಸ್ಥಳಗಳ ಸರ್ವೆ ಕೂಡ ನಡೆಸಲಾಗಿದೆಯೆಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ 30X40 ಅಳತೆಯ ನಿವೇಶನ ಹಂಚಿಕೆ ಮಾಡಲಾಗುತ್ತದೆ. ಅಭಿಯಾನದ ರೀತಿಯಲ್ಲಿ ಮಾಡಲು ಅಧಿಕಾರಿಗಳಿಗೆ ಸೂಚಿಸಲಾಗಿದ್ದು, ಮುಂದಿನ 2–3 ತಿಂಗಳಲ್ಲಿ ನಿವೇಶನ ಮತ್ತು ಹಕ್ಕುಪತ್ರ ವಿತರಣೆಗೆ ಕ್ರಮ ಕೈಗೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗಳನ್ನು ಆಹ್ವಾನಿಸುವ ಚಿಂತನೆ ನಡೆಸಲಾಗಿದೆ ಎಂದು ಮಾಹಿತಿ ನೀಡಿ ಸರಕಾರಿ ಭೂಮಿಯಲ್ಲಿ ಮನೆ ಕಟ್ಟಿಕೊಂಡು ಕಂದಾಯ ಪಾವತಿಸುತ್ತಿರುವ ಕುಟುಂಬಗಳಿಗೆ 94 ಸಿ ಅಡಿಯಲ್ಲಿ ಹಕ್ಕುಪತ್ರ ಹೊಂದಿಕೊಳ್ಳಲು ಅವಕಾಶ ನೀಡಲಾಗಿತ್ತು. ಈ ಅವಕಾಶ ಮುಕ್ತಾಯವಾಗಿದೆ. ಸರಕಾರಿ ಭೂಮಿಯಲ್ಲಿ ಹೊಸದಾಗಿ ಶೆಡ್ ಹಾಕುವ ಪ್ರಯತ್ನ ಕೊಳತ್ತೋಡು ಬೈಗೋಡು, ಅಮ್ಮತ್ತಿ ಭಾಗದಲ್ಲಿ ನಡೆದಿದ್ದು, ಇಂತಹ ಪ್ರಯತ್ನಗಳನ್ನು ಯಾರೂ ಮಾಡಬಾರದು ಎಂದು ಮನವಿ ಮಾಡಿದರು.

ಜಿಲ್ಲೆಯಲ್ಲಿ ವನ್ಯಜೀವಿ ಮಾನವ ಸಂಘರ್ಷ ಮುಂದುವರೆದಿದ್ದು, ಇದಕ್ಕೆ ಪರಿಹಾರ ಸೂಚಿಸಲು ನಾಗರಹೊಳೆ ಡಿಎಫ್‌ಓ, ಕೊಡಗು ವನ್ಯಜೀವಿ ಡಿಎಫ್‌ಓಗಳ ಜೊತೆ ಸಭೆ ನಡೆಸಿ ಚರ್ಚೆ ನಡೆಸಲಾಗಿದೆ. ಹುದಿಕೇರಿ, ಹೈಸೊಡ್ಲೂರು, ನೆಮ್ಮಲೆ, ಬಾಳಲೆ ವ್ಯಾಪ್ತಿಯಲ್ಲಿ ಬ್ರಹ್ಮಗಿರಿ ಅರಣ್ಯದಿಂದ ಹುಲಿಗಳು ನಾಡಿಗೆ ಬರುತ್ತಿವೆ. ಹುಲಿಗಳನ್ನು ಗುರುತಿಸಿ ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ವಿಫಲವಾಗಿದೆ ಎಂದರು.

ಜಿಲ್ಲಾಧ್ಯಕ್ಷ ಧರ್ಮಜಾ ಉತ್ತಪ್ಪ, ಪೊನ್ನಪ್ಪ ಉಪಸ್ಥಿತರಿದ್ದರು.

ಪರಿಹಾರದ ಹಣ ಬಿಡುಗಡೆಗೆ ಕಾಫಿ ಮಂಡಳಿ ಸದಸ್ಯನ ಆಗ್ರಹ

ಮಡಿಕೇರಿ,ಜು.11–ಕಾಫಿ ಬೆಳೆಗಾರರಿಗೆ ಹಾಗೂ ರೈತರಿಗೆ ಬೆಳೆಹಾನಿ ಪರಿಹಾರದ ಹಣವನ್ನು ಬಿಡುಗಡೆ ಮಾಡಲು ಶಾಸಕದ್ವಯರು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕಾಫಿ ಮಂಡಳಿಯ ಸದಸ್ಯ ತಳೂರು ಎ.ಕಿಶೋರ್ ಕುಮಾರ್ ಒತ್ತಾಯಿಸಿದ್ದಾರೆ.

ಇತ್ತೀಚೆಗೆ ಶಾಸಕ ಡಾ.ಮಂತರ್ ಗೌಡ ಬೆಳೆಗಾರರ ನಿಯೋಗದೊಂದಿಗೆ ಕಾಫಿ ಮಂಡಳಿ ಅಧ್ಯಕ್ಷ ಎಂ.ಜೆ.ದಿನೇಶ್‌ರನ್ನು ಭೇಟಿಯಾಗಿ ಬೆಳೆಗಾರರು ಅನುಭವಿಸುತ್ತಿರುವ ಕಷ್ಟನಷ್ಟದ ಬಗ್ಗೆ ಮನವಿ ಸಲ್ಲಿಸಿರುವುದು ಹಾಸ್ಯಾಸ್ಪದ ವಾಗಿದೆ. ಶಾಸಕರು ಮನವಿ ಸಲ್ಲಿಸುವುದನ್ನು ಬಿಟ್ಟು ಸರಕಾರದ ಮೇಲೆ ಒತ್ತಡ ಹೇರಿ ರೈತರ ನೆರವಿಗೆ ಧಾವಿಸಬೇಕು ಎಂದು ಆಗ್ರಹಿಸಿದ್ದಾರೆ. ಇದೇ ಜು.3 ರಂದು ಕಾಫಿ ಮಂಡಳಿಯ ಅಧ್ಯಕ್ಷ ದಿನೇಶ್ ಸಂಸದ ಕೋಟ ಶ್ರೀನಿವಾಸ್ ಪೂಜಾರಿ, ಶಾಸಕ ಸುರೇಶ್ ಶೆಟ್ಟಿ, ಕಾಫಿ ಮಂಡಳಿಯ ಸದಸ್ಯರು ಹಾಗೂ ಮಂಡ ಳಿಯ ಸಿಇಒ ಕುರ್ಮ ರಾವ್ ಅವರೊಂದಿಗೆ ದೆಹಲಿಗೆ ತೆರಳಿ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರನ್ನು ಭೇಟಿ ಮಾಡಿ ಕಾಫಿ ಬೆಳೆಗಾರರು ಅನುಭವಿಸುತ್ತಿರುವ ಸಮಸ್ಯೆಗಳು ಮತ್ತು ಸವಾಲುಗಳ ಬಗ್ಗೆ ಮನವಿ ಸಲ್ಲಿಸಿ ನೆರವಿಗೆ ಬರುವಂತೆ ಕೋರಿದಾಗ ಸಚಿವರು ಉತ್ತಮ ಸ್ಪಂದನೆ ನೀಡಿದ್ದಾರೆ ಎಂದರು.

ಶಾಸಕದ್ವಯರು ಕೇವಲ ಮನವಿ ಸಲ್ಲಿಸಿ ಸುಮ್ಮನಾಗದೆ ಸರಕಾರದ ಮೇಲೆ ಒತ್ತಡ ಹೇರಿ ಕೇಂದ್ರ ಬಿಡುಗಡೆ ಮಾಡಿರುವ ಎನ್‌ಡಿಆರ್‌ಎಫ್ ಹಣ ಬೆಳೆಗಾರರಿಗೆ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಬೇಕು. ರಾಜ್ಯ ಸರಕಾರದಿಂದಲೂ ಪರಿಹಾರದ ಹಣ ಬಿಡುಗಡೆ ಮಾಡಬೇಕೆಂದು ಕಿಶೋರ್ ಕುಮಾರ್ ಒತ್ತಾಯಿಸಿದ್ದಾರೆ.

ಗ್ರಾಪಂ ಮಾಜಿ ಉಪಾಧ್ಯಕ್ಷ ಸದಸ್ಯತ್ವ ಅನರ್ಹಕ್ಕೆ ಆದೇಶ

ಸುಂಟಿಕೊಪ್ಪ: ಸುಂಟಿಕೊಪ್ಪ ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಹಾಗೂ ಹಾಲಿ ಸದಸ್ಯ ಕೆ.ಕೆ.ಪ್ರಸಾದ್ ಅವರನ್ನು ಸದಸ್ಯತ್ವ ಸ್ಥಾನದಿಂದ ಅನರ್ಹಗೊಳಿಸಲಾಗಿದೆ. ಮಾತ್ರವಲ್ಲದೆ ಮುಂದಿನ 6 ವರ್ಷಗಳ ಕಾಲ ಚುನಾವಣೆಗೆ ಸ್ಪರ್ಧಿಸದಂತೆ ಆದೇಶ ಹೊರಡಿಸಿ ರಾಜ್ಯ ಸರಕಾರದ ಗ್ರಾಮೀಣಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ಕೆ.ಕೆ.ಪ್ರಸಾದ್ ಅವರು ಸುಂಟಿಕೊಪ್ಪ ಗ್ರೇಡ್–1 ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾಗಿದ್ದ ಸಂದರ್ಭ ಪರಿಶಿಷ್ಟ ಜಾತಿಗೆ ಮೀಸಲಾದ 30 ಸಾವಿರ ರೂ. ಗ್ರಾಮ ಪಂಚಾಯಿತಿ ಅನುದಾನವನ್ನು ದುರುಪಯೋಗಪಡಿಸಿಕೊಂಡಿರುವುದು ತನಿಖೆ ಮತ್ತು ವಿಚಾರಣೆ ವೇಳೆ ಸಾಬೀತಾಗಿದೆ. ಈ ಹಿನ್ನೆಲೆಯಲ್ಲಿ ಸರಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಪಾರ ಮುಖ್ಯ ಕಾರ್ಯದರ್ಶಿ ಉಮಾ ಮಹದೇವನ್ ಅನರ್ಹಗೊಳಿಸಿ 6 ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆಯೂ ಆದೇಶಿಸಿದ್ದಾರೆ.

ಆರ್‌ಟಿಒ ಸಿಬ್ಬಂದಿ ವಿರುದ್ಧ ಚಾಲಕರ, ಮಾಲೀಕರ ಸಂಘ ಪ್ರತಿಭಟನೆ



ಸಾರ್ವಜನಿಕರೊಂದಿಗೆ ದರ್ಪ ತೋರುತ್ತಿರುವ ಆರ್‌ಟಿಒ ಸಿಬ್ಬಂದಿ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಟ್ಯಾಕ್ಸಿ ಚಾಲಕರ ಮಾಲೀಕರ ಸಂಘ ಮನವಿಯನ್ನು ಸಲ್ಲಿಸಿತು.

ಮಡಿಕೇರಿ,ಜು.11– ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸದೆ ದರ್ಪ ತೋರುತ್ತಿರುವ ಆರ್‌ಟಿಒ ಸಿಬ್ಬಂದಿ ವಿರುದ್ಧ ಟ್ಯಾಕ್ಸಿ ಚಾಲಕರ ಮಾಲೀಕರ ಸಂಘ ಶುಕ್ರವಾರ ಪ್ರತಿಭಟನೆ ನಡೆಸಿತು.

ಜಿಲ್ಲೆಯ ಕೆ.ನಿಡುಗಣೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಸಾರ್ವಜನಿಕರ ಕೆಲಸ ಕಾರ್ಯಗಳು ವಿಳಂಬವಾಗುತ್ತಿದೆ ಸಿಬ್ಬಂದಿ ಸೌಜನ್ಯದಿಂದ ವರ್ತಿಸದೆ ದರ್ಪ ತೋರುತ್ತಿದ್ದಾರೆ ಎಂದು ಸೋಮವಾರಪೇಟೆ ತಾಲೂಕು ಒಕ್ಕಲಿಗರ ಯುವ ವೇದಿಕೆ, ಮಡಿಕೇರಿ ಹಾಗೂ ಸೋಮವಾರಪೇಟೆ ಟೂರಿಸ್ಟ್ ಟ್ಯಾಕ್ಸಿ ಚಾಲಕರ ಸಂಘ, ವಾಹನ ಚಾಲಕರು ಮತ್ತು ಕಾರ್ಮಿಕರ ಸಂಘದ ಪದಾಧಿಕಾರಿಗಳು ಹಾಗೂ ರಕ್ಷಣಾ ವೇದಿಕೆ ಪ್ರಮುಖರು ಆರ್‌ಟಿಒ ಕಚೇರಿಗೆ ಆಗಮಿಸಿ ತಮ್ಮ ಆಕ್ರೋಷ ವ್ಯಕ್ತಪಡಿಸಿದರು.

ನಿಗಧಿತ ಸಮಯಕ್ಕೆ ದಾಖಲಾತಿ ಒದಗಿಸದೆ ಸಿಬ್ಬಂದಿ ವಿಳಂಬ ಮಾಡುತ್ತಿದ್ದಾರೆ. ಕಚೇರಿ ಆವರಣದಲ್ಲಿ ಕೂರಲೆಂದು ಯಾವುದೇ ಖುರ್ಚಿಗಳನ್ನು ಕೂಡ ಅಳವಡಿಸಿಲ್ಲ. ಇಲ್ಲಿರುವ ಸಾರ್ವಜನಿಕರ ಶೌಚಾಲಯ ಗಬ್ಬೆದ್ದು ನಾರುತ್ತಿದ್ದು ಅದಕ್ಕೂ ಬೀಗ ಜಡಿಯಲಾಗಿದೆ. ಹಲವು ಮಂದಿ ಸಿಬ್ಬಂದಿಗಳು ಹತ್ತಾರು ವರ್ಷಗಳಿಂದ ಮಡಿಕೇರಿ ಆರ್‌ಟಿಒ ಕಚೇರಿಯಲ್ಲಿಯೇ ಠಿಕಾಣಿ ಹೂಡಿರುವರನ್ನು ತಕ್ಷಣವೇ ಇಲ್ಲಿಂದ ವರ್ಗಾವಣೆ ಮಾಡುವಂತೆ ಯುವ ವೇದಿಕೆ ಅಧ್ಯಕ್ಷ ಸುರೇಶ್ ಚಕ್ರವರ್ತಿ ಆಕ್ರೋಶ ವ್ಯಕ್ತಪಡಿಸಿದರು. ವಾರದೊಳಗೆ ಸಮಸ್ಯೆಗಳನ್ನು ಬಗೆಹರಿಸದಿದ್ದಲ್ಲಿ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.

ಟೂರಿಸ್ಟ್ ಟ್ಯಾಕ್ಸಿ ಚಾಲಕರ ಸಂಘದ ಅಧ್ಯಕ್ಷ ವಸಂತ್ ಮಾತನಾಡಿ, ಸರ್ವರ್ ಸಮಸ್ಯೆಯನ್ನು ಮುಂದಿಟ್ಟು ಟ್ಯಾಕ್ಸಿ ವಾಹನಗಳ ಎಫ್.ಸಿ ಮಾಡಲು ತೀರಾ ವಿಳಂಬ ಮಾಡಲಾಗುತ್ತಿದೆ. ಇಂತಹ ನೀತಿಗಳಿಂದ ಟ್ಯಾಕ್ಸಿಗಳನ್ನು ನಂಬಿ ಬದುಕುತ್ತಿರುವ ಬಡ ಕುಟುಂಬಗಳು ಹೊತ್ತಿನ ಕೂಳಿಗೂ ಪರಿತಪಿಸುತ್ತಿವೆ. ಕೂಡಲೇ ದಾಖಲಾತಿಗಳನ್ನು ನಿಗಧಿತ ಸಮಯದಲ್ಲೇ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಮನವಿಯನ್ನು ಸ್ವೀಕರಿಸಿದ ಸಾರಿಗೆ ಕಚೇರಿ ವಿಭಾಗದ ಮೇಲ್ವಿಚಾರಕರು, ಜಿಲ್ಲಾ ಸಾರಿಗೆ ಅಧಿಕಾರಿಗಳು ಆಗಮಿಸಿ ನಿನ್ನೆಯಷ್ಟೇ ಅಧಿಕಾರ ವಹಿಸಿಕೊಂಡಿದ್ದಾರೆ. ನಿಮ್ಮ ಬೇಡಿಕೆಯನ್ನು, ಸಮಸ್ಯೆ ಪರಿಹಾರಕ್ಕೆ ಕ್ರಮ ಕೈಗೊಳ್ಳುವುದಾಗಿ ಆರ್‌ಟಿಒ ಅಧಿಕಾರಿಗಳು ಹಾಗೂ ವಿಭಾಗ ಮೇಲ್ವಿಚಾರಕರು ಭರವಸೆ ನೀಡಿದರು.

ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷ ದೀಪಕ್, ಸೋಮವಾರಪೇಟೆ ವಾಹನ ಮಾಲೀಕರು ಸಂಘದ ಅಧ್ಯಕ್ಷ ಬಾಲಕೃಷ್ಣ, ಮಡಿಕೇರಿ ಟೂರಿಸ್ಟ್ ಟ್ಯಾಕ್ಸಿ ಚಾಲಕರ ಸಂಘದ ಅಧ್ಯಕ್ಷ ಸಂತು ಕಾರ್ಯಪ್ಪ, ಟ್ಯಾಕ್ಸಿ ಅಸೋಷಿಯೇಷನ್ ಪ್ರಮುಖರು ಹಾಜರಿದ್ದರು.

ನೆಲಜಿ ಸಹಕಾರ ದವಸ ಭಂಡಾರದ ಅಧ್ಯಕ್ಷರ ಆಯ್ಕೆ

ನಾಪೋಕ್ಲು: ಸಮೀಪದ ನೆಲಜಿ ಗ್ರಾಮದ ಸಹಕಾರ ದವಸ ಭಂಡಾರದಲ್ಲಿ ನಡೆದ ಆಡಳಿತ ಮಂಡಳಿಯ ಪದಾಧಿಕಾರಿಗಳ ಚುನಾವಣೆಯಲ್ಲಿ ನೂತನ ಅಧ್ಯಕ್ಷರಾಗಿ ಬಾಳೆಯಡ ಪಿ.ರಾಜ ಕುಂಞಪ್ಪ, ಉಪಾಧ್ಯಕ್ಷರಾಗಿ ಬದಂಜೆಟ್ಟಿರ ಬಿ. ದೇವಿ ದೇವಯ್ಯ, ಕಾರ್ಯದರ್ಶಿಯಾಗಿ ಮಾಳೆಯಂಡ ಸಿ. ಈರಪ್ಪ ಆಯ್ಕೆಯಾಗಿದ್ದಾರೆ.

ರೇಷ್ಮೆ ಮಂಡಳಿ ವಿಜ್ಞಾನಿಯಾಗಿ ಕುಪ್ಪಚ್ಚಿರ ಬಿ.ಭರತ್ ನೇಮಕ



ಮಡಿಕೇರಿ, ಜು.11– ಕೇಂದ್ರೀಯ ರೇಷ್ಮೆ ಮಂಡಳಿ ವಿಜ್ಞಾನಿಯಾಗಿ ವಿರಾಜಪೇಟೆ ಮಗ್ಗುಲ ಗ್ರಾಮದ ಕುಪ್ಪಚ್ಚಿರ ಬಿ.ಭರತ್ ಆಯ್ಕೆಯಾಗಿದ್ದಾರೆ. ಮಗ್ಗುವ ಗ್ರಾಮದ ಕುಪ್ಪಚ್ಚಿರ ದಿ.ಭೀಮಯ್ಯ–ಕವಿತ(ತಾಮನೆ ತಿರುಟೆರ) ದಂಪತಿ ಪುತ್ರರಾಗಿರುವ ಭರತ್ ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯದಲ್ಲಿ ರೇಷ್ಮೆ ಕೃಷಿಯಲ್ಲಿ ಸ್ನಾತಕೋತ್ತರ ಪದವಿಯನ್ನು ಚಿನ್ನದ ಪದಕದೊಂದಿಗೆ ಪೂರ್ಣಗೊಳಿಸಿದ್ದಾರೆ. ಪ್ರಸ್ತುತ ಆಂಧ್ರಪ್ರದೇಶದ ರಾಜಮಂಡ್ರಿಯ ಐ.ಟಿ.ಸಿ ಲಿಮಿಟೆಡ್‌ನಲ್ಲಿ ಅಗ್ರಿ ಬಿಸ್ನೆಸ್ ಡಿವಿಷನ್‌ನಲ್ಲಿ ಸೇವೆ ಸಲ್ಲಿಸುತ್ತಿರುವ ಭರತ್ ಕೇಂದ್ರೀಯ ರೇಷ್ಮೆ ಮಂಡಳಿಯ ವಿಜ್ಞಾನಿಯಾಗಿ ನೇಮಕ ವಾಗಿದ್ದಾರೆ.

ಕಾಡಾನೆಗಳ ಕಾಡಿಗಟ್ಟುವಲ್ಲಿ ಅರಣ್ಯ ಇಲಾಖೆ ಯಶಸ್ವಿ



ಕಾಡಾನೆಗಳ ಗುಂಪನ್ನು ಕಾಡಿಗಟ್ಟುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ.

ಗೋಣಿಕೊಪ್ಪ, ಜು.11–ತಿತಿಮತಿ, ಮಾಯಮುಡಿ ವ್ಯಾಪ್ತಿಯಲ್ಲಿ 4 ಕಾಡಾನೆಗಳ ಗುಂಪನ್ನು ಕಾಡಿಗಟ್ಟುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ.

ಶಾಸಕ ಪೊನ್ನಣ್ಣ ಅರಣ್ಯಾಧಿಕಾರಿಗಳು, ಎಲಿಫೆಂಟ್ ಟಾಸ್ಕ್ ಫೋರ್ಸ್ ತಂಡದ ಸಭೆ ನಡೆಸಿ ಕಾಡಾನೆಗಳ ದಾಂಧಲೆ ತಡೆಗಟ್ಟಿ, ಆನೆಗಳನ್ನು ಕಾಡಿಗೆ ಓಡಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದ ಬೆನ್ನಲ್ಲೇ ಇಂದು ಕಾಡಾನೆಗಳ 4 ಗುಂಪನ್ನು ಅರಣ್ಯದೊಳಕ್ಕೆ ಅಟ್ಟುವಲ್ಲಿ ಯಶಸ್ವಿಯಾಗಿದ್ದಾರೆ.

ಮಳೆಗಾಲದಲ್ಲಿ ಹಲಸು, ಬಿದಿರು, ಸೊಪ್ಪಿನಾಸೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ತೋಟಗಳಿಗೆ ಕಾಡಾನೆಗಳು ಬರುವ ಸಾಧ್ಯತೆ ಹಿನ್ನಲೆಯಲ್ಲಿ ಕಾಡಾನೆಗಳ ನಿಯಂತ್ರಣಕ್ಕೆ ಅರಣ್ಯ ಇಲಾಖೆ ಕ್ರಮಕೈಗೊಳ್ಳುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿ ಇಕ್ಕೆಲಗಳಲ್ಲಿ ವಾಹನಗಳ ನಿಲುಗಡೆ ನಿಷೇಧಕ್ಕೆ ಜಿಲ್ಲಾಧಿಕಾರಿ ಆದೇಶ





ಗುಂಡ್ಲುಪೇಟೆ, ಜು.11 –ಪಟ್ಟಣದ ರಾಷ್ಟ್ರೀಯ ಹೆದ್ದಾರಿಯ ಊಟಿ ಸರ್ಕಲ್‌ನಿಂದ ಸುರಭಿ ಹೋಟೆಲ್ ಬಸ್‌ಸ್ಟಾಪ್‌ವರೆಗೆ ರಸ್ತೆಯ ಇಕ್ಕೆಲಗಳಲ್ಲಿ ಎಲ್ಲಾ ರೀತಿಯ ವಾಹನಗಳ ನಿಲುಗಡೆ ನಿಷೇಧಿಸುವಂತೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಆದೇಶ ನೀಡಿದ್ದಾರೆ.

ಪಟ್ಟಣವು ಪ್ರಮುಖ ವಾಣಿಜ್ಯ ಕೇಂದ್ರವಾಗಿದ್ದು, ಪ್ರತಿದಿನ ತಾಲೂಕು ಕೇಂದ್ರಕ್ಕೆ ಅಕ್ಕಪಕ್ಕದ ಗ್ರಾಮಗಳ ಸಾರ್ವಜನಿಕರು ಕೆಲಸ ಕಾರ್ಯಗಳ ನಿಮಿತ್ತ ವಾಹನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಾರೆ. ಪೊಲೀಸ್ ಠಾಣಾ ಸರಹದ್ದಿನಲ್ಲಿ ಶ್ರೀ ಹಿಮವದ್ ಗೋಪಾಲಸ್ವಾಮಿ ಬೆಟ್ಟ ಮತ್ತು ಬಂಡೀಪುರ ರಾಷ್ಟ್ರೀಯ ಉದ್ಯಾನವನ, ಹುಲಿ ಸಂರಕ್ಷಿತ ಅರಣ್ಯ ಪ್ರದೇಶ ಇದ್ದು ಇಲ್ಲಿಗೆ ದೇಶ ವಿದೇಶಗಳಿಂದ ಪ್ರವಾಸಿಗರು ಪ್ರತಿ ದಿನ ಆಗಮಿಸುತ್ತಿದ್ದಾರೆ. ಪ್ರಮುಖವಾಗಿ ಕೇರಳ ಮತ್ತು ತಮಿಳುನಾಡು ರಾಜ್ಯಕ್ಕೆ ರಸ್ತೆ ಮೂಲಕ ಸಂಚಾರವು ಇದೇ ಮಾರ್ಗವಾಗಿ ಇದ್ದು, ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ಲಘು ವಾಹನಗಳು ಮತ್ತು ಭಾರಿ ವಾಹನಗಳ ಸಂಚಾರ ಇರುವುದರಿಂದ ಗುಂಡ್ಲುಪೇಟೆ ಪಟ್ಟಣದಲ್ಲಿ ವಾಹನ ದಟ್ಟಣೆ ನಿಯಂತ್ರಿಸುವ ಅಗತ್ಯವಿದೆ.

ಈ ಹಿನ್ನೆಲೆಯಲ್ಲಿ ಪಟ್ಟಣದ ಕಿತ್ತೂರು ರಾಣಿ ಚೆನ್ನಮ್ಮ ರಸ್ತೆಯಲ್ಲಿನ ಎಂಡಿಸಿಸಿ ಸರ್ಕಲ್‌ನಿಂದ ಆಕ್ಟ್ರಾಯ್ ಸರ್ಕಲ್‌ವರೆಗೆ ಸಮ ಸಂಖ್ಯೆ ದಿನಾಂಕಗಳಂದು ರಸ್ತೆಯ ಉತ್ತರದ ಕಡೆ ಮತ್ತು ಬೆಸ ಸಂಖ್ಯೆ ದಿನಾಂಕಗಳಂದು ರಸ್ತೆಯ ದಕ್ಷಿಣದ ಕಡೆ ಎಲ್ಲಾ ರೀತಿಯ ದ್ವಿಚಕ್ರ ವಾಹನ ಹಾಗೂ ಲಘು ವಾಹನಗಳನ್ನು ನಿಲುಗಡೆ ಮಾಡುವಂತೆ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಮನಸ್ಸಿಗೆ ನೆಮ್ಮದಿ ತರುವ ರಸಮಂಜರಿ

ರಸಮಂಜರಿ ಕಾರ್ಯಕ್ರಮ ಉದ್ಘಾಟಿಸಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಅಭಿಮತ



ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ನಡೆದ ರಸಮಂಜರಿ ಕಾರ್ಯಕ್ರಮವನ್ನು ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಉದ್ಘಾಟಿಸಿದರು.

ಚಾಮರಾಜನಗರ, ಜು.11– ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಶ್ರೀಚಾಮರಾಜೇಶ್ವರ ಬ್ರಹ್ಮ ರಥೋತ್ಸವದ ಅಂಗವಾಗಿ ಡಾ. ರಾಜ್ ಕುಮಾರ್ ಸಾಂಸ್ಕೃತಿಕ ಕಲಾ ವೇದಿಕೆ, ಚಂದ್ರು ಮೆಲೋಡಿಸ್‌ಯಿಂದ ನಡೆದ ರಸಮಂಜರಿ ಕಾರ್ಯಕ್ರಮ ಭಕ್ತ ಜನ ಸಮೂಹ ಮನಸೂರೆಗೊಳ್ಳುವಂತೆ ಮಾಡಿತು.

ಕಾರ್ಯಕ್ರಮ ಉದ್ಘಾಟಿಸಿದ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ ಮಾತನಾಡಿ, ಶ್ರೀಚಾಮರಾಜೇಶ್ವರ ರಥೋತ್ಸವ ಒಂದು ವಿಶಿಷ್ಟವಾಗಿದ್ದು, ಎಲ್ಲಿಯೂ ಕೂಡ ಆಷಾಢ ಮಾಸದಲ್ಲಿ ರಥೋತ್ಸವ ನಡೆಯುವುದಿಲ್ಲ. ಆದರೆ ಇಲ್ಲಿನ ಇತಿಹಾಸ ಪ್ರಸಿದ್ಧ ರಥೋತ್ಸವಕ್ಕೆ ನವ ದಂಪತಿಗಳು ಆಗಮಿಸಿ ಹಣ್ಣು ದವನ ಎಸೆದು ದೇವರ ಕೃಪೆಗೆ ಪಾತ್ರರಾಗುವುದು ವಿಶೇಷ ಸಂಗೀತ, ಸಾಹಿತ್ಯ, ಸೇರಿದಂತೆ ರಸ ಮಂಜರಿಯಂತಹ ಕಾರ್ಯಕ್ರಮಗಳು ಮನಸ್ಸಿಗೆ ನೆಮ್ಮದಿ, ಉಲ್ಲಾಸ ನೀಡುತ್ತದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾ ಎಸ್ ಪಿ ಡಾ. ಬಿ.ಟಿ. ಕವಿತಾ ಮಾತನಾಡಿ, ಚಾಮರಾಜೇಶ್ವರ ರಥೋತ್ಸವ ಇಡೀ ಅತ್ಯಂತ ಮಹತ್ವ ಹೊಂದಿದೆ. ಆಷಾಢ ಮಾಸದಲ್ಲಿ ನಡೆಯುವ ಏಕೈಕ ರಥೋತ್ಸವ ಇದಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ನಗರಸಭಾ ಅಧ್ಯಕ್ಷ ಸುರೇಶ್ ಶ್ರೀಚಾಮರಾಜೇಶ್ವರ ಸ್ವಾಮಿ ನಾಡಿಗೆ ಉತ್ತಮ ಮಳೆ, ಬೆಳೆ ಕರುಣಿಸಲೆಂದು ಪ್ರಾರ್ಥಿಸಿದರು. ನಗರ ಸಭಾ ಮಾಜಿ ಅಧ್ಯಕ್ಷ ಸುರೇಶ್ ನಾಯಕ, ನಿವೃತ್ತ ಮುಖ್ಯ ಶಿಕ್ಷಕಿ, ಸಮಾಜ ಸೇವಕಿ ಗೌರಮ್ಮ ನಂಜುಂಡಸ್ವಾಮಿ, ಗಣಿ ಉದ್ಯಮಿ ಶ್ರೀನಿಧಿಕುದರ್, ಡಿವೈಎಸ್‌ಪಿ ಲಕ್ಷ್ಮಯ್ಯ, ಸರ್ಕಲ್ ಇನ್ಸ್‌ಪೆಕ್ಟರ್ ಬಸವ ರಾಜು, ಸುರೇಶ್‌ಗೌಡರನ್ನು ಸನ್ಮಾನಿಸಲಾಯಿತು.

ವೇದಿಕೆ ಅಧ್ಯಕ್ಷ ಉಮ್ಮತ್ತೂರು ಚಂದ್ರು ಗಾಯಕ ಸಿ.ಎಂ.ನರಸಿಂಹಮೂರ್ತಿ, ಜಾನಪದ ಮಹೇಶ್, ಕಲೆ ನಟ ರಾಜು, ಶಿವಣ್ಣ, ಚೆಸ್ಕಾಂ ಇಂಜಿನಿಯರ್ ಮಯೂರ, ಖ್ಯಾತ ಗಾಯಕಿ ವೇದಶ್ರೀ, ನಾಗಲಿಂಗಾಚಾರ್ ಇನ್ನಿತರರಿದ್ದರು.

ರಾಮೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ



ಗುಂಡ್ಲುಪೇಟೆಯ ಶ್ರೀ ರಾಮೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ನೆರವೇರಿಸಲಾಯಿತು.

ಗುಂಡ್ಲುಪೇಟೆ, ಜು.11(ಸೋಮ್.ಜಿ)– ಪಟ್ಟಣದಲ್ಲಿರುವ ಶ್ರೀ ರಾಮೇಶ್ವರ ದೇವಾಲಯದಲ್ಲಿ ಆಷಾಢ ಮಾಸದ ಗುರು ಪೂರ್ಣಿಮೆ ಪ್ರಯುಕ್ತ ದೇವಾಲಯದಲ್ಲಿರುವ ಶಿವಲಿಂಗಕ್ಕೆ ಪ್ರಧಾನ ಅರ್ಚಕ ಶಂಕರನಾರಾಯಣ ಜೋಯಿಸ್ ಅವರ ನೇತೃತ್ವದಲ್ಲಿ ದಕ್ಷಿಣಾಮೂರ್ತಿ ಅಲಂಕಾರ ಮಾಡಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಗುರುಪೂರ್ಣಿಮೆ ಪ್ರಯುಕ್ತ ದೇವಾಲಯವನ್ನು ತಳಿರು ತೋರಣದಿಂದ ಅಲಂಕರಿಸಲಾಗಿತ್ತು, ನೂತನ ವಸ್ತ್ರಧಾರಣೆ ಮಾಡಿ ಶಿವಲಿಂಗಕ್ಕೆ ಬಿಲ್ವಾರ್ಚನೆ ಹಾಗೂ ಮಹಾಮಂಗಳಾರತಿಯನ್ನು ನೆರವೇರಿಸಲಾಯಿತು. ನಚಿತರ ಭಕ್ತರಿಗೆ ಪ್ರಸಾದ ವಿತರಣೆ ಮಾಡಲಾಯಿತು.

ಮೂರನೇ ಆಷಾಢ ಶುಕ್ರವಾರ

ದೇವಿಗೆ ಅರಿಶಿನ, ಕುಂಕುಮದ ಅಲಂಕಾರ



ಗುಂಡ್ಲುಪೇಟೆ, ಜು.11 (ಸೋಮ್ ಜಿ)– ಪಟ್ಟಣದ ಶ್ರೀ ಚಾಮುಂಡೇಶ್ವರಿ ದೇವಾಲಯದಲ್ಲಿ ಮೂರನೇ ಆಷಾಢ ಶುಕ್ರವಾರದ ಪ್ರಯುಕ್ತ ಪ್ರಧಾನ ಅರ್ಚಕ ಸುಬ್ರಹ್ಮಣ್ಯ ಅವರ ನೇತೃತ್ವದಲ್ಲಿ ದೇವಿಗೆ ಅರಿಶಿನ ಮತ್ತು ಕುಂಕುಮದಿಂದ ವಿಶೇಷ ಅಲಂಕಾರ ಮಾಡಿ ಪೂಜೆ ನೆರವೇರಿಸಲಾಯಿತು.

ಆಷಾಢ ಶುಕ್ರವಾರದ ಹಿನ್ನೆಲೆಯಲ್ಲಿ ದೇವಸ್ಥಾನವನ್ನು ತಳಿರುವ ತೋರಣ ಹಾಗೂ ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಲಾಗಿತ್ತು ಪಟ್ಟಣದ ವಿವಿಧ ಬಡಾವಣೆಯ ನೂರಾರು ಭಕ್ತರು ದೇವಿಯ ದರ್ಶನ ಪಡೆದು ನಿಂಬೆ ಹಣ್ಣಿನ ದೀಪ ಹಚ್ಚಿ ಆರತಿ ಬೆಳಗಿ ತಮ್ಮ ಭಕ್ತಿ ಭಾವ ಮೆರೆದರು.

ಈ ಸಂದರ್ಭದಲ್ಲಿ ಭಾವಸಾರ್ ಕ್ಷತ್ರಿಯ ಮಂಡಳಿಯ ಪದಾಧಿಕಾರಿಗಳು ಮತ್ತು ಮಹಿಳಾ ಸದಸ್ಯರು ಭಾಗವಹಿಸಿದ್ದರು.

ರೈತರಿಗೆ ಅಗತ್ಯ ದಾಖಲಾತಿಗಳನ್ನು ಸಕಾಲದಲ್ಲಿ ನೀಡಿ



ತಾಲೂಕು ವ್ಯಾಪ್ತಿಯ ಗ್ರಾಮ ಆಡಳಿತಾಧಿಕಾರಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ವಿತರಣೆ ಮಾಡಿದರು.

ಚಾಮರಾಜನಗರ, ಜು.11–ರೈತರು ಕಂದಾಯ ಇಲಾಖೆ ವ್ಯಾಪ್ತಿಯಲ್ಲಿ ಸಮರ್ಪಕವಾಗಿ ದಾಖಲಾತಿಗಳನ್ನು ನೀಡಿ, ಅವರು ಕಚೇರಿಗೆ ಅಲೆಯುವಂತೆ ಮಾಡಬೇಡಿ, ನೀವು ನೀಡುವ ಪ್ರತಿಯೊಂದು ದಾಖಲಾತಿಗಳಲ್ಲಿ ಅವರ ಭವಿಷ್ಯ ಅಡಗಿರುತ್ತದೆ ಎಂದು ಶಾಸಕ ಸಿ. ಪುಟ್ಟರಂಗಶೆಟ್ಟಿ ತಿಳಿಸಿದರು.

ಜಿಲ್ಲಾ ಇ–ಅಫೀಸ್ ಯೋಜನೆಗೆ ಚಾಮರಾಜನಗರ ಸೇರ್ಪಡೆಯಾಗಿದ್ದು, ಪ್ರಥಮ ಹಂತದಲ್ಲಿ ತಾಲೂಕಿನ 25 ಮಂದಿ ಗ್ರಾಮ ಆಡಳಿತಾಧಿಕಾರಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ವಿತರಿಸಿ ಕಂದಾಯ ಇಲಾಖೆಯ ಇ–ಅಫೀಸ್ ಸೇವೆಯಲ್ಲಿ ನಮ್ಮ ಜಿಲ್ಲೆ ಪ್ರಥಮ ಸ್ಥಾನವನ್ನು ಪಡೆದುಕೊಂಡಿದೆ. ಜಿಲ್ಲೆಯ ಅಧಿಕಾರಿಗಳು ಹಾಗೂ ಗ್ರಾಮ ಅಡಳಿತಾಧಿಕಾರಿಗಳು ಶ್ರಮಪಟ್ಟ ಕರ್ತವ್ಯ ನಿರ್ವಹಿಸಿದ ಫಲವಾಗಿ ಮೊದಲ ಸ್ಥಾನ ಬಂದಿದೆ ಎಂದು ಶ್ಲಾಘಿಸಿದರು.

ರೈತರ ಜಮೀನುಗಳಿಗೆ ಸಂಬಂಧಪಟ್ಟ ದಾಖಲಾತಿಗಳು ಈಗ ಕಂಪ್ಯೂಟರೀಕಣವಾಗಿದೆ. ಕಂದಾಯ ಸಚಿವ ಕೃಷ್ಣ ಬೈರೇಗೌಡರು ಇಲಾಖೆಗೆ ಹೊಸತನವನ್ನು ನೀಡಿರುವುದರಿಂದ ಬೆರಳಿನ ತುದಿಯಲ್ಲಿಯೇ ಎಲ್ಲಾ ದಾಖಲಾತಿಗಳು ಸಿಗುವಂತಾಗಿದೆ. ಇದನ್ನು ಸದ್ಬಳಕೆ ಮಾಡಿಕೊಂಡು ರೈತರಿಗೆ ಒಳ್ಳೆಯ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ನಿರ್ವಹಿಸಿ, ಸರ್ಕಾರ ಯೋಜನೆಗಳು ಸಹ ಅರ್ಹರಿಗೆ ದೊರೆಯುವಂತೆ ಮಾಡಬೇಕೆಂದು ಎಂದು ಗ್ರಾಮ ಲೆಕ್ಕಾಧಿಕಾರಿಗಳಿಗೆ ಕಿವಿಮಾತು ಹೇಳಿದರು.

ತಹಶೀಲ್ದಾರ್ ಗಿರಿಜಾ ಅವರು ಮಾತನಾಡಿ, ತಾಲೂಕಿನಲ್ಲಿ 83 ಗ್ರಾಮ ವೃತ್ತಗಳಿದ್ದು, ಈಗ 25 ಮಂದಿಗೆ ಗ್ರಾಮ ಆಢಳಿತಾಧಿಕಾರಿಗಳಿಗೆ ಲ್ಯಾಪ್ ಟಾಪ್ ವಿತರಣೆ ಮಾಡಲಾಗುತ್ತಿದೆ. ಪ್ರತಿ ಹೋಬಳಿಗೆ ಐವರಿಗೆ ವಿತರಣೆಯಾಗಿದೆ. ಇದನ್ನು ಬಳಕೆ ಮಾಡಿಕೊಂಡು ಕರ್ತವ್ಯ ನಿರ್ವಹಣೆ ಮಾಡಲಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ರಾಜಸ್ವ ನಿರೀಕ್ಷಕ ರಾಜಶೇಖರ್ ಗ್ರಾಮ ಆಡಳಿತಾಧಿಕಾರಿ ಸಂತೋಷ ಸೇರಿದಂತೆ ವಿವಿಧ ವೃತ್ತಗಳ ಗ್ರಾಮ ಆಡಳಿತಾಧಿಕಾರಿಗಳು ಉಪಸ್ಥಿತರಿದ್ದರು.

ಬಾಲ್ಯವಿವಾಹ ಮುಕ್ತ ಜಿಲ್ಲೆಯನ್ನಾಗಿಸಲು ಜಾಗೃತಿ

ಚಾಮರಾಜನಗರ: ಜಿಲ್ಲೆಯನ್ನು ಬಾಲ್ಯ ವಿವಾಹ ಮುಕ್ತ ಜಿಲ್ಲೆಯನ್ನಾಗಿಸುವ ಉದ್ದೇಶದಿಂದ ಪರಿಣಾಮಕಾರಿಯಾಗಿ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದ್ದು, ತಾಲೂಕಿನಲ್ಲಿಯೂ ಕಾರ್ಯಕ್ರಮ ಆಯೋಜನೆಗೆ ಅಗತ್ಯ ಸಿದ್ದತೆ ಕೈಗೊಳ್ಳುವಂತೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್ ಸೂಚಿಸಿದ್ದಾರೆ.

ನಗರದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿಂದು ತಹಶೀಲ್ದಾರ್ ಗಿರಿಜಾ ಅವರೊಂದಿಗೆ ಬಾಲ್ಯವಿವಾಹ ಮುಕ್ತ ಜಿಲ್ಲೆಯನ್ನಾಗಿಸುವ ಸಂಬಂಧ ನಡೆದ ತಾಲೂಕು ಮಟ್ಟದ ಅಧಿಕಾರಿಗಳ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಮಕ್ಕಳ ಹಕ್ಕುಗಳು, ರಕ್ಷಣೆ ಕುರಿತು ಹಲವಾರು ಕಾಯ್ದೆ ಸುತ್ತೋಲೆಗಳು ಇವೆ. ಇದರ ಅನುಷ್ಠಾನದಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ಜಿಲ್ಲೆಯಲ್ಲಿ ಬಾಲ್ಯ ವಿವಾಹವನ್ನು ಸಂಪೂರ್ಣವಾಗಿ ತಡೆ ಗಟ್ಟಿ ನ.14ರಂದು ಜಿಲ್ಲೆಯನ್ನು ಬಾಲ್ಯ ವಿವಾಹ ಮುಕ್ತ ಜಿಲ್ಲೆಯನ್ನಾಗಿ ಘೋಷಿಸಲು ಈಗಾಗಲೇ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರಲಾಗುತ್ತಿದೆ ಎಂದರು.

ಜಿಲ್ಲಾ ಕೇಂದ್ರದಲ್ಲಿ ಇತ್ತೀಚೆಗೆ ಬೃಹತ್ ವಾಕಥಾನ್ ಮೂಲಕ ಅರಿವು ಮೂಡಿಸುವ ಕಾರ್ಯವಾಗಿದೆ. ತಾಲೂಕಿನ ವಿವಿಧೆಡೆ ಮತ್ತಷ್ಟು ಜಾಗೃತಿ ಕಾರ್ಯಕ್ರಮಗಳನ್ನು ವಿವಿಧ ಇಲಾಖೆಗಳು ಸಮನ್ವಯ ಸಹಕಾರದೊಂದಿಗೆ ಏರ್ಪಡಿಸಬೇಕು. ಬಾಲ್ಯ ವಿವಾಹದಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಮನವರಿಕೆ ಮಾಡಿಕೊಡಬೇಕು. ಈ ಮಹತ್ತರ ಉದ್ದೇಶ ಇಟ್ಟುಕೊಂಡು ಇಲಾಖೆಗಳು ತಮ್ಮ ವ್ಯಾಪ್ತಿಯಲ್ಲಿ ಕಾರ್ಯಕ್ರಮಕ್ಕೆ ಸಿದ್ದತೆ ಮಾಡಿ ಕೊಳ್ಳಬೇಕು ಎಂದರು.


ತಹಶೀಲ್ದಾರ್ ಗಿರಿಜಾ ಮಾತನಾಡಿದರು. ಜಿಪಂ ಸಹಾಯಕ ಕಾರ್ಯದರ್ಶಿ ಹಾಗೂ ತಾಪಂ ಪ್ರಭಾರ ಕಾರ್ಯದರ್ಶಿ ಶ್ರೀಂಕಂಠ ರಾಜೇ ಅರಸ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಂಜುಳಾ, ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತಶೆಟ್ಟಿ ಇತರೆ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಇಂದಿನಿಂದ ಕಬಿನಿ ನೀರು ಸರಬರಾಜಿಲ್ಲ

ಗುಂಡ್ಲುಪೇಟೆ, ಜು–11 (ಸೋಮ್.ಜಿ) ಪಟ್ಟಣಕ್ಕೆ ಕಬಿನಿಯಿಂದ ಕುಡಿಯುವ ನೀರು ಸರಬರಾಜು ಆಗುವ ದೇಬೂರು ಪಂಪ್‌ಹೌಸ್‌ನಲ್ಲಿ ನೂತನ ಮೋಟಾರು ಅಳವಡಿಕೆ ಕಾರ್ಯವಿರುವುದರಿಂದ ಜು.12ರಿಂದ 27 ರವರಿಗೆ ಪಟ್ಟಣಕ್ಕೆ ಕಬಿನಿ ಕುಡಿಯುವ ನೀರು ಸರಬರಾಜು ಇರುವು ದಿಲ್ಲವೆಂದು ಮುಖ್ಯಾಧಿಕಾರಿ ಶರವಣ ಮತ್ತು ಇಂಜಿನಿಯರ್ ಮಂಜುನಾಥ್ ತಿಳಿಸಿದ್ದಾರೆ.

ನಾಳೆ ಚಾ.ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ: ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು ಚಾಮರಾಜನಗರ ಉಪ ವಿಭಾಗದ ವ್ಯಾಪ್ತಿಯಲ್ಲಿ ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ಜೋಡಿ ರಸ್ತೆ, ಕೋರ್ಟ್ ರಸ್ತೆ, ಪ್ರಗತಿ ನಗರ, ಬುದ್ಧ ನಗರ, ಹೌಸಿಂಗ್ ಬೋರ್ಡ್, ರಾಮಸಮುದ್ರ, ಕರಿನಂಜನಪುರ, ಹೊಸ ಹೌಸಿಂಗ್ ಬೋರ್ಡ್, ಚನ್ನಿಪುರಮೋಳೆ, ದೊಡ್ಡಬೀದಿ, ತಿಬ್ಬಳ್ಳಿಕಟ್ಟೆ ರಸ್ತೆ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ನಿಗಮದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬೆಂಗಳೂರು ಚಿನ್ನಸ್ವಾಮಿ ಕ್ರೀಡಾಂಗಣ ಕಾಲ್ತುಳಿತ ಪ್ರಕರಣ

ಸರ್ಕಾರಕ್ಕೆ ತನಿಖಾ ವರದಿ ಸಲ್ಲಿಸಿದ ನ್ಯಾ. ಮೈಕೆಲ್ ಡಿ. ಕುನ್ಹಾ



ಸಿಎಂ ಸಿದ್ದರಾಮಯ್ಯ ಅವರಿಗೆ ನಿವೃತ್ತ ನ್ಯಾ. ಮೈಕೆಲ್ ಡಿ ಕುನ್ಹಾ ವರದಿ ಸಲ್ಲಿಸಿದರು.

ಬೆಂಗಳೂರು, ಜು. 11– ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಐಪಿಎಲ್ ಟ್ರೋಫಿ ಗೆದ್ದ ಸಂಭ್ರಮಾಚರಣೆ ವೇಳೆ ಜೂನ್ 4 ರಂದು ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣದ ತನಿಖೆ ನಡೆಸಿರುವ ನಿವೃತ್ತ ನ್ಯಾ. ಮೈಕೆಲ್ ಡಿ ಕುನ್ಹಾ ನೇತೃತ್ವದ ಏಕಸದಸ್ಯ ತನಿಖಾ ಆಯೋಗ ಮುಚ್ಚಿದ ಲಕೋಟೆಯಲ್ಲಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ.

ಜೂನ್ 4 ರಂದು ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತದಲ್ಲಿ 11 ಮಂದಿ ಆರ್‌ಸಿಬಿ ಅಭಿಮಾನಿಗಳು ಮೃತಪಟ್ಟಿದ್ದರು. ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ದುರಂತ ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ ರಾಜ್ಯ ಸರ್ಕಾರ ಪ್ರಕರಣ ಸಂಬಂಧ ನ್ಯಾಯಾಂಗ ತನಿಖೆಗೆ ಆದೇಶಿಸಿತ್ತು. ಅದರಂತೆ, ಕರ್ನಾಟಕ ಹೈಕೋರ್ಟ್‌ನ ನಿವೃತ್ತ ನ್ಯಾ. ಮೈಕೆಲ್ ಡಿ ಕುನ್ಹಾ ನೇತೃತ್ವದಲ್ಲಿ ಏಕಸದಸ್ಯ ತನಿಖಾ ಆಯೋಗ ರಚನೆ ಮಾಡಿತ್ತು. ಒಂದು ತಿಂಗಳೊಳಗೆ ತನಿಖೆಯನ್ನು ಪೂರ್ಣಗೊಳಿಸಿ, ವರದಿ ಸಲ್ಲಿಸುವಂತೆ ಸರ್ಕಾರ ನಿರ್ದೇಶನ ನೀಡಿತ್ತು. ಅದರಂತೆ, ನಿವೃತ್ತ ನ್ಯಾ. ಮೈಕೆಲ್ ಡಿ ಕುನ್ಹಾ ಅವರು ಒಂದು ತಿಂಗಳೊಳಗೆ ತನಿಖೆ ಪೂರ್ಣಗೊಳಿಸಿ ಮುಖ್ಯಮಂತ್ರಿಗಳ ಕಚೇರಿಯಲ್ಲಿ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದರು.

ವರದಿ ಸಂಬಂಧ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾಲ್ತುಳಿತ ದುರಂತದ ಕುರಿತು ನಿವೃತ್ತ ನ್ಯಾ. ಮೈಕಲ್ ಡಿ ಕುನ್ಹಾ ಅವರು ತನಿಖೆ ನಡೆಸಿ ಇಂದು ಎರಡು ಸಂಪುಟದಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ ಎಂದು ಹೇಳಿದರು. ಬರುವ ಗುರುವಾರ (ಜು. 17) ದಂದು ನಡೆಯುವ ಸಚಿವ ಸಂಪುಟದಲ್ಲಿ ವರದಿ ಮಂಡಿಸುತ್ತೇನೆ ಎಂದು ಹೇಳಿದರು.

ಮಹಾರಾಜ, ಯುವರಾಜ ಕಾಲೇಜಿನ ಪ್ರಾಂಶುಪಾಲರ ಹುದ್ದೆಗೆ ಅರ್ಜಿ ಅವಧಿ ವಿಸ್ತರಣೆ

ಮೈಸೂರು, ಜು.11– ಮೈಸೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಾದ ಮಹಾರಾಜ ಮತ್ತು ಯುವರಾಜ ಕಾಲೇಜಿನ ಪ್ರಾಂಶುಪಾಲರ ಹುದ್ದೆಗೆ 5 ವರ್ಷಗಳ ಅವಧಿಗೆ ನೇಮಕಾತಿ ಮಾಡುವ ಸಂಬಂಧ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಅರ್ಜಿ ಅವಧಿಯನ್ನು ಜು.31 ರವರೆಗೆ ವಿಸ್ತರಿಸಲಾಗಿದೆ. ಸಂಪೂರ್ಣ ವಿವರವು ಮೈಸೂರು ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.uni-mysore.ac.in ನಲ್ಲಿ ಲಭ್ಯವಿರುತ್ತದೆ. ಆಸಕ್ತ ಅರ್ಹ ಅಭ್ಯರ್ಥಿಗಳು ವಿವರಗಳನ್ನು ಮತ್ತು ನಿಗದಿತ ಅರ್ಜಿ ನಮೂನೆಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್‌ನಿಂದ ಪಡೆದು ಅರ್ಜಿಯನ್ನು ಸಲ್ಲಿಸಬಹುದಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಉಪ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮೈಸೂರು ಮಿತ್ರ 46 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಜನಸೇವೆಯಿಂದ ಆದಿಚುಂಚನಗಿರಿ ಮಠ ಜಗತ್ತಿಗೆ ಮಾದರಿ

ಮಾಜಿ ಸಚಿವ ಸಾ.ರಾ.ಮಹೇಶ್ ಬಣ್ಣನೆ



ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಮಾಜಿ ಸಚಿವ ಸಾ.ರಾ.ಮಹೇಶ್ ಉದ್ಘಾಟಿಸಿದರು.

ಸಾಲಿಗ್ರಾಮ, ಜು.11– ಅನ್ನ ದಾಸೋಹ, ಆರೋಗ್ಯ, ಶಿಕ್ಷಣ, ಉದ್ಯೋಗ ಮತ್ತು ಜನಸೇವೆಯಿಂದ ಆದಿಚುಂಚನಗಿರಿ ಮಠ ಜಗತ್ತಿಗೆ ಮಾದರಿಯಾಗಿದೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಬಣ್ಣಿಸಿದರು.

ಕೆ.ಆರ್.ನಗರದ ಹೆಚ್.ಡಿ.ದೇವೇಗೌಡ ಸಮುದಾಯ ಭವನದಲ್ಲಿ ತಾಲೂಕು ಒಕ್ಕಲಿಗರ ಸಂಘದಿಂದ ನಡೆದ ನಾಡುಪ್ರಭು ಕೆಂಪೇಗೌಡರ 516ನೇ ಜಯಂತಿಯಲ್ಲಿ ಮಾತನಾಡಿದ ಅವರು, ಶ್ರೀಮಠವು ವಿಶ್ವದ ಎಲ್ಲಾ ಮೂಲೆಗಳಲ್ಲಿಯೂ ಶಾಖಾ ಮಠ ತೆರೆಯುವ ಕೆಲಸ ಮಾಡುತ್ತಿರುವುದು ಒಕ್ಕಲಿಗ ಸಮಾಜ ಹೆಮ್ಮೆಪಡುವ ವಿಚಾರ ಎಂದರು.

ನಾಡಪ್ರಭು ಕೆಂಪೇಗೌಡರು ಸುಂದರ ಬೆಂಗಳೂರು ನಗರ ನಿರ್ಮಿಸುವ ಜೊತೆಗೆ ಸುತ್ತಮುತ್ತ ಕೆರೆಕಟ್ಟೆಗಳನ್ನು ಕಟ್ಟಿ ಅವುಗಳ ಜೀರ್ಣೋದ್ಧಾರ ಮಾಡುವ ಮೂಲಕ ಜಲಕ್ರಾಂತಿ ಮಾಡಿದ್ದು, ರೈತರು ಮತ್ತು ಜನರಿಗೆ ಕುಡಿಯುವ ನೀರು ಮತ್ತು ವ್ಯವಸಾಯಕ್ಕೆ ಅನುಕೂಲ ಕಲ್ಪಿಸಿ ಜಾತ್ಯತೀತವಾಗಿ ಎಲ್ಲಾ ಸಮುದಾಯವನ್ನು ಸಂಘಟಿಸುವ ಕೆಲಸ ಮಾಡಿದರು ಎಂದು ಸ್ಮರಿಸಿದರು.

ಕೆಂಪೇಗೌಡರ ನಂತರ ಕೆರೆಕಟ್ಟೆಗಳ ಅಭಿವೃದ್ಧಿಯೊಂದಿಗೆ ಕಾಲುವೆಗಳನ್ನು ತೆಗೆಸುವ ಮೂಲಕ ರೈತರಿಗೆ ಮತ್ತು ಜನರಿಗೆ ಹತ್ತು ಹಲವು ಯೋಜನೆ ಜಾರಿಗೆ ತಂದ ನಾಯಕರಿದ್ದರೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಮತ್ತು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಎಂದು ತಿಳಿಸಿದರು.

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ಕೆ.ಆರ್.ನಗರ ಕ್ಷೇತ್ರಕ್ಕೆ ಸಾವಿರಾರು ಕೋಟಿ ಅನುದಾನ ನೀಡುವ ಮೂಲಕ ನೀರಾವರಿ, ರಸ್ತೆ, ವಿದ್ಯುತ್ ಸೇರಿದಂತೆ ಹತ್ತು ಹಲವು ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಸಹಕಾರ ನೀಡಿ ಏತ ನೀರಾವರಿ ಅನುಷ್ಠಾನ ಹಾಗೂ ಕೆರೆ ಕಟ್ಟೆಗಳ ಆಧುನೀಕರಣ, ದೇವಾಲಯಗಳ ಅಭಿವೃದ್ಧಿ, ಸಮುದಾಯ ಭವನಗಳ ನಿರ್ಮಿಸಲು ಸಹಕಾರ ನೀಡಿದರು ಎಂದು ಶ್ಲಾಘಿಸಿದರು.

ಮುಂಡಿಗನಹಳ್ಳಿ ಗ್ರಾಮದ ಸುತ್ತಮುತ್ತಲ ಗ್ರಾಮಗಳ ಅನುಕೂಲಕ್ಕಾಗಿ 24 ಕೋಟಿ ಅನುದಾನ ತಂದು ಕೆರೆಗಳ ಹೂಳು ತೆಗೆಯುವುದರೊಂದಿಗೆ ಏತ ನೀರಾವರಿ ಮೂಲಕ ಕೆರೆಗೆ ನೀರು ತುಂಬಿಸಿ ಈ ಭಾಗದ ನಾಲ್ಕೈದು ಗ್ರಾಮಗಳಿಗೆ ಅನುಕೂಲವಾಗಲೆಂದು ಅನುದಾನ ಮೀಸಲಿಟ್ಟು ನಾನು ಶಾಸಕನಾಗಿದ್ದಾಗ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಗಿತ್ತು. ಆದರೆ ಈಗಿನ ಸರ್ಕಾರ ಹಾಗೂ ಶಾಸಕರು ಕಾಮಗಾರಿ ಸ್ಥಳಾಂತರ ಮಾಡಿಸುತ್ತಿದ್ದು, ಈ ಬಗ್ಗೆ ಒಕ್ಕಲಿಗ ಸಮುದಾಯದ ಕಾಂಗ್ರೆಸ್ ಮುಖಂಡರು ಸೇರಿದಂತೆ ಆ ಗ್ರಾಮದ ಸುತ್ತಮುತ್ತಲಿನ ಜನರು ಪ್ರಶ್ನಿಸುವಂತೆ ತಿಳಿಸಿದರು.

ಈ ವೇಳೆ ಸಮುದಾಯ ಭವನದ ಎದುರು ನೂತನವಾಗಿ ನಿರ್ಮಿಸಿರುವ ಗಣಪತಿ ದೇವಾಲಯ ಉದ್ಘಾಟಿಸಿ ಬಾಲಗಂಗಾಧರನಾಥ ಶ್ರೀಗಳ ಕಂಚಿನ ಪುತ್ಥಳಿ ಅನಾವರಣ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಸೋಮನಾಥ ಸ್ವಾಮೀಜಿ, ಎಂಎಲ್‌ಸಿ ಸಿ.ಎನ್.ಮಂಜೇಗೌಡ, ನವನಗರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್ ನಂಜಪ್ಪ, ಮೈಮುಲ್ ನಿರ್ದೇಶಕ ಸೋಮಶೇಖರ್, ಮೈಸೂರಿನ ಸುಯೋಗ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಜಿಲ್ಲಾ ಒಕ್ಕಲಿಗರ ಸಂಘದ ಮಾಜಿ ಉಪಾಧ್ಯಕ್ಷ ಎಸ್.ಪಿ.ತಮ್ಮಯ್ಯ, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಶಿವರಾಮ್, ಗೌರವಾಧ್ಯಕ್ಷ ಅಣ್ಣೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ಸೋಮಶೇಖರ್, ಕಾರ್ಯಾಧ್ಯಕ್ಷ ವೆಂಕಟೇಶ್, ಅಧ್ಯಕ್ಷ ಶಿವರಾಮು, ಉಪಾಧ್ಯಕ್ಷ ಎ.ಕುಚೇಲ, ಕಾರ್ಯದರ್ಶಿ ಸಿ.ಎಸ್.ರಾಮಲಿಂಗು, ನಿರ್ದೇಶಕರಾದ ಮಂಜುಗೌಡ, ರಾಧಾಕೃಷ್ಣ, ತಿಮ್ಮೇಗೌಡ, ಕೆ.ಬಿ.ಪ್ರಕಾಶ್, ಸಂತೋಷ್ ಗೌಡ, ಕೇಶವ, ಎಸ್.ಆರ್.ಪ್ರಕಾಶ್, ಮಂಜುನಾಥ್, ಅನಿಲ್‌ಗೌಡ, ಶಿವಪ್ಪ, ಮಹೇಶ್, ನಂಜುಂಡೇಗೌಡ, ನರೇಂದ್ರ, ಸಂಪತ್ ಕುಮಾರ್, ಅಣ್ಣಾಜಿ ಗೌಡ, ಸುನಿತಾ, ಗೋಪಾಲ್ ಮೂರ್ತಿ, ದೇವೇಂದ್ರ, ಒಕ್ಕಲಿಗ ಸಮಾಜದ ಮುಖಂಡರಾದ ಎಂ.ಎಸ್.ಹರಿಚಿದಂಬರ, ಶೃತಿ ಸುರೇಶ್, ಸುರೇಶ್, ರಮೇಶ್, ರಾಜು, ಮಂಜು, ಕೆ.ಜಿ.ಸುಬ್ರಹ್ಮಣ್ಯ, ಶಂಭು, ಎ.ತಿಮ್ಮಪ್ಪ, ಡಿ.ಆರ್.ರಮೇಶ್, ಸರ್ಕಾರಿ ನೌಕರರ ಸಂಘದ ನಿರ್ದೇಶಕರಾದ ಸತೀಶ್, ಶಂಕರೇಗೌಡ, ಮಧುಕುಮಾರ್, ಮುರುಳಿ, ರಾಘವೇಂದ್ರ, ಶಶಿಕಾಂತ್ ಮತ್ತಿತರರಿದ್ದರು.

> ಕೆಂಪೇಗೌಡರ ಸಾಧನೆ ಮತ್ತು ಸಮಾಜಮುಖಿ ಕೆಲಸಗಳು ವಿಶ್ವಕ್ಕೆ ಮಾದರಿಯಾಗಿದ್ದು, ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸ್ವಂತ ಭೂಮಿಯನ್ನೇ ನೀಡುವ ಮೂಲಕ ಬೆಂಗಳೂರು ನಗರ ನಿರ್ಮಾಣ ಮಾಡಿದ ಅವರ ಕೆಲಸ ಅಜರಾಮರ. ನಾಡಪ್ರಭುಗಳ ನಂತರ ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯ, ಕೆ.ಸಿ.ರೆಡ್ಡಿ ರಾಜ್ಯದ ಅಭಿವೃದ್ಧಿಗಾಗಿ ಕೆಲಸ ಮಾಡಿ ಜನ ಸಾಮಾನ್ಯರ ಮನಸ್ಸಿನಲ್ಲಿ ಶಾಶ್ವತ ಸ್ಥಾನ ಗಳಿಸಿದ್ದು, ಅವರಿಗಿಂತ ಒಂದು ಹೆಜ್ಜೆ ಮುಂದೆ ಹೋದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಮತ್ತು ದಿ.ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಜನ ಮೆಚ್ಚುವ ಕೆಲಸ ಮಾಡಿದರು.
>
> – ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಆದಿಚುಂಚನಗಿರಿ ಪೀಠಾಧ್ಯಕ್ಷ.

ಎಂ.ಮಂಜುನಾಥ್ ಕೊತ್ತೇಗಾಲ ಡೈರಿ ಅಧ್ಯಕ್ಷ



ನೂತನ ಅಧ್ಯಕ್ಷ ಎಂ.ಮಂಜುನಾಥ್ ಅವರನ್ನು ಅಭಿನಂದಿಸಲಾಯಿತು.

ಸರಗೂರು, ಜು.11– ತಾಲೂಕಿನ ಕೊತ್ತೇಗಾಲ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎಂ.ಮಂಜುನಾಥ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಕಚೇರಿಯಲ್ಲಿ ಶುಕ್ರವಾರ ನಡೆದ ಚುನಾವಣೆಯಲ್ಲಿ ಎಂ.ಮಂಜುನಾಥ್ ಅವರನ್ನು ಸಂಘದ ಸದಸ್ಯರು ಸರ್ವಾನುಮತದಿಂದ ಆಯ್ಕೆ ಮಾಡಿದ ಹಿನ್ನಲೆಯಲ್ಲಿ ಸಹಕಾರ ಅಭಿವೃದ್ಧಿ ಅಧಿಕಾರಿ ರೇಣುಕಾ ನೂತನ ಅಧ್ಯಕ್ಷರ ಆಯ್ಕೆಯನ್ನು ಘೋಷಿಸಿದರು.

ಚುನಾವಣೆಯಲ್ಲಿ ಸಿಇಓ ಮಹದೇವಸ್ವಾಮಿ, ಸಂಘದ ಉಪಾಧ್ಯಕ್ಷೆ ಗಂಗಮ್ಮ, ನಿರ್ದೇಶಕರಾದ ಕೆ.ಎಂ.ಪುಟ್ಟೇಗೌಡ, ಕೆಂಡಗಣ್ಣಸ್ವಾಮಿ, ಕೆ.ಎಸ್.ಮಹದೇವಪ್ಪ, ಸುಂದರದಾಸ್, ರತ್ನಯ್ಯ, ಬೀರೇಗೌಡ, ಡಿ.ಗೋಪಾಲಚಾರಿ, ಮಹೇಶ್, ಮಹದೇವಯ್ಯ, ಹೆಚ್.ಶಿವ ಹಾಗೂ ಗ್ರಾಮದ ಗುಡಿಗೌಡರಾದ ನಂಜಪ್ಪ, ನಾಡಗೌಡಿಕೆ ಡಿ.ರತ್ನಯ್ಯ, ಮಾಜಿ ಗುಡಿಗೌಡರಾದ ರೇವಣ್ಣ, ತಾಲೂಕು ನಾಯಕ ಸಮಾಜದ ಅಧ್ಯಕ್ಷ ಬಸವರಾಜು, ಗುರುಸ್ವಾಮಿ, ಕೊತ್ತೇಗಾಲ ಗ್ರಾಪಂ ಅಧ್ಯಕ್ಷ ಕುಮಾರ್, ಉಪಾಧ್ಯಕ್ಷೆ ಶೋಭಾ, ಸದಸ್ಯರಾದ ಚಲ್ಲಪ್ಪ, ಮಹದೇವ, ಲಕ್ಷ್ಮೀ, ಕೆಂಪಾಲಮ್ಮ ಸೇರಿದಂತೆ ಎಲ್ಲಾ ಕೋಮಿನ ಯಜಮಾನರಾದ ಭೀಮನಾಯಕ, ಕಾಳಸ್ವಾಮಿ, ಡಿ.ನಾಗರಾಜು, ಸಣ್ಣಸ್ವಾಮಿ, ಕಾಂಗ್ರೆಸ್ ಮುಖಂಡರಾದ ನಂಜಪ್ಪ, ಶಂಕರಪ್ಪ, ಸುರೇಶ್, ಗಿರೀಶ್ ಹಾಗೂ ಕಾಂಗ್ರೆಸ್ ಕಾರ್ಯಕರ್ತರು, ಗ್ರಾಮಸ್ಥರು ಹಾಜರಿದ್ದರು.

ಅದ್ಧೂರಿ ಕುರುಬನಕಟ್ಟೆ ಕಂಡಾಯ ಉತ್ಸವ



ಮೂಗೂರಿನ ಹೂವಿನ ಬೀದಿ ನಾಯಕರ ಸಮುದಾಯದಿಂದ ಗ್ರಾಮದ ಪ್ರಮುಖ ಬೀದಿಗಳಲ್ಲಿ ಕುರುಬನಕಟ್ಟೆ ಕಂಡಾಯ ಉತ್ಸವ ಅದ್ಧೂರಿಯಾಗಿ ನಡೆಯಿತು. ಈ ವೇಳೆ ಹೂವಿನ ಬೀದಿ ಯಜಮಾನರು, ಮುಖಂಡರು, ಶ್ರೀಮಂಟೇಸ್ವಾಮಿ ನೀಲಗಾರರು, ಗ್ರಾಮಸ್ಥರು ಉಪಸ್ಥಿತರಿದ್ದರು.

ರೈಲ್ವೆ ಮೇಲ್ಸೇತುವೆಗೆ ವಿ.ಶ್ರೀನಿವಾಸ ಪ್ರಸಾದ್ ಹೆಸರಿಡಲು ಒತ್ತಾಯಿಸಿ

ಅಭಿಮಾನಿಗಳಿಂದ ನಗರಸಭೆಗೆ ಮುತ್ತಿಗೆ, ಮನವಿ ಸಲ್ಲಿಕೆ



ರೈಲ್ವೆ ಮೇಲ್ಸೇತುವೆಗೆ ಮಾಜಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಹೆಸರಿಡುವಂತೆ ಒತ್ತಾಯಿಸಿ ಪ್ರಸಾದ್ ಅಭಿಮಾನಿಗಳು ನಗರಸಭೆಗೆ ಮುತ್ತಿಗೆ ಹಾಕಿ ಮನವಿ ಸಲ್ಲಿಸಿದರು.

ನಂಜನಗೂಡು, ಜು.11– ನಗರದ ಮೈಸೂರು ಮುಖ್ಯರಸ್ತೆಯ ಅಪೋಲೋ ವೃತ್ತದ ಬಳಿಯ ರೈಲ್ವೆ ಮೇಲ್ಸೇತುವೆಗೆ ಮಾಜಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಹೆಸರಿಡುವಂತೆ ಒತ್ತಾಯಿಸಿ ಶ್ರೀನಿವಾಸ ಪ್ರಸಾದ್ ಅಭಿಮಾನಿಗಳು ಶುಕ್ರವಾರ ನಗರಸಭೆಗೆ ಮುತ್ತಿಗೆ ಹಾಕಿ ಮನವಿ ಸಲ್ಲಿಸಿದರು.

ನಗರಸಭೆ ಅಧ್ಯಕ್ಷ ಶ್ರೀಕಂಠಸ್ವಾಮಿ ಹಾಗೂ ಪೌರಾಯುಕ್ತ ವಿಜಯ್ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದ ಅಭಿಮಾನಿಗಳು, ಕೇಂದ್ರ ಹಾಗೂ ರಾಜ್ಯ ಸರ್ಕಾರದಲ್ಲಿ ಸಚಿವರಾಗಿ, ವಿಶೇಷವಾಗಿ ಚಾಮರಾಜನಗರ ಸಂಸದ ಹಾಗೂ ನಂಜನಗೂಡು ಶಾಸಕರಾಗಿದ್ದ ವಿ.ಶ್ರೀನಿವಾಸ ಪ್ರಸಾದ್ ನಂಜನಗೂಡಿನ ಅಭಿವೃದ್ಧಿಗೆ ಹೆಚ್ಚಿನ ಕೊಡುಗೆ ನೀಡಿದ್ದಾರೆ. ಅದರಲ್ಲೂ ವಿಶೇಷವಾಗಿ ಚಾಮರಾಜನಗರ ರಸ್ತೆಯಿಂದ ಮೈಸೂರು ರಸ್ತೆಯನ್ನು ಸಂಪರ್ಕಿಸುವ ರಸ್ತೆಯಲ್ಲಿ ಅಡ್ಡಲಾಗಿದ್ದ ರೈಲ್ವೆಗೇಟ್‌ನಿಂದ ಉಂಟಾಗುತ್ತಿದ್ದ ವಾಹನ ದಟ್ಟಣೆ ತಡೆಗಟ್ಟಲು ರೈಲ್ವೆ ಮೇಲ್ಸೇತುವೆ ನಿರ್ಮಿಸಲು ನೆರವಾಗಿದ್ದರು. ಹೀಗಾಗಿ ರೈಲ್ವೆ ಮೇಲ್ಸೇತುವೆಗೆ ಅವರ ಹೆಸರನ್ನೇ ಇಡುವಂತೆ ಈ ಹಿಂದಿನಿಂದಲೂ ಒತ್ತಡ ಹೇರಲಾಗುತ್ತಿದೆ. ಆದರೆ ಕಳೆದ ಅ.15ರಂದು ನಡೆದ ನಗರಸಭೆ ಸಾಮಾನ್ಯ ಸಭೆಯಲ್ಲಿ ಮಾಜಿ ಸಂಸದ ಆರ್.ಧ್ರುವನಾರಾಯಣ್ ಹೆಸರನ್ನು ಮೇಲ್ಸೇತುವೆಗೆ ಇಡಲು ತೀರ್ಮಾನಿಸಲಾಗಿದೆ ಈ ತೀರ್ಮಾನಕ್ಕೆ ನಮ್ಮೆಲ್ಲರ ಆಕ್ಷೇಪಣೆ ಇದ್ದು ಸಾರ್ವಜನಿಕರ ಅಪೇಕ್ಷೆಯಂತೆ ಮಾಜಿ ಸಂಸದ ವಿ.ಶ್ರೀನಿವಾಸಪ್ರಸಾದ್ ಹೆಸರನ್ನು ಇಡಲು ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಿದರು.

ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ ಮಾತನಾಡಿ, ರೈಲ್ವೆ ಮೇಲ್ಸೇತುವೆ ನಿರ್ಮಾಣಕ್ಕೆ ಯಾರು ಕಾರಣೀಭೂತರಾಗಿದ್ದಾರೆ ಎಂಬ ಬಗ್ಗೆ ದಾಖಲೆಗಳನ್ನು ಪರಿಶೀಲನೆ ನಡೆಸಿ ಅವರ ಹೆಸರನ್ನು ಇಡಲು ಶಿಫಾರಸ್ಸು ಮಾಡಲಾಗುವುದು ಎಂದರು. ಈ ಸಂದರ್ಭ ಬಿಜೆಪಿ ನಗರಾಧ್ಯಕ್ಷ ಸಿದ್ದರಾಜು, ಗ್ರಾಮಾಂತರ ಮಂಡಲ ಅಧ್ಯಕ್ಷ ಕೆಂಡಗಣ್ಣಪ್ಪ ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ಇದ್ದರು.

ಚಿದರವಳ್ಳಿ ಪಿಎಸಿಎಸ್‌ಗೆ ಇಂದ್ರೇಶ್ ಅಧ್ಯಕ್ಷ



ಚಿದರವಳ್ಳಿ ಪಿಎಸಿಎಸ್ ಅಧ್ಯಕ್ಷ ಇಂದ್ರೇಶ್ ಅವರನ್ನು ಮಾಜಿ ಶಾಸಕ ಎಸ್.ಕೃಷ್ಣಪ್ಪ ಅಭಿನಂದಿಸಿದರು.

ತಿ.ನರಸೀಪುರ, ಜು.11– ತಾಲೂಕಿನ ಚಿದರವಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಇಂದ್ರೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ಆರ್.ಜಿ.ಶಿವಮೂರ್ತಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ಹಿನ್ನೆಲೆಯಲ್ಲಿ ಅವರಿಂದ ತೆರವಾದ ಸ್ಥಾನಕ್ಕೆ ಸಹಕಾರ ಸಂಘದ ಕಚೇರಿಯಲ್ಲಿ ಶುಕ್ರವಾರ ನಡೆದ ಚುನಾವಣೆಯಲ್ಲಿ ಇಂದ್ರೇಶ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಹಕಾರ ಅಭಿವೃದ್ಧಿ ಅಧಿಕಾರಿ ಹಸೀನಾ ಪ್ರಕಟಿಸಿದರು. ಅವಿರೋಧ ಆಯ್ಕೆಯಾಗುತ್ತಿದ್ದಂತೆ ನೆರೆದಿದ್ದ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಚುನಾವಣಾ ವಿಶೇಷ ಸಭೆಗೆ ಉಪಾಧ್ಯಕ್ಷ ಹೆಚ್.ಟಿ.ಮಹದೇವ, ನಿಕಟಪೂರ್ವ ಅಧ್ಯಕ್ಷ ಆರ್.ಜಿ.ಶಿವಮೂರ್ತಿ, ನಿರ್ದೇಶಕರಾದ ಚೌಡಯ್ಯ, ಜಿ.ವಿಜಯಕುಮಾರ್, ಮಹದೇವ, ಸಿದ್ದು, ಪಾರ್ವತಮ್ಮ ಬಿ.ಲಕ್ಷ್ಮಿ, ಸಿ.ಎನ್.ನವೀನ್ ಕುಮಾರ್ ಹಾಜರಾಗಿ ನೂತನ ಅಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರೆ, ನಿರ್ದೇಶಕಿ ಗೌರಮ್ಮ ಗೈರಾಗಿದ್ದರು.

ನೂತನ ಅಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಮಾಜಿ ಶಾಸಕ ಎಸ್.ಕೃಷ್ಣಪ್ಪ, ಯಾವುದೇ ಕೋ–ಆಪರೇಟಿವ್ ಬ್ಯಾಂಕ್ ಚುನಾವಣೆಯಲ್ಲಿ ವರಿಷ್ಠರನ್ನು ಅವಿರೋಧವಾಗಿ ಆಯ್ಕೆ ಮಾಡಿದರೆ ಅದು ಆ ಗ್ರಾಮದ ಗೌರವವನ್ನು ಹೆಚ್ಚಿಸಲಿದೆ ಯಾವುದೇ ಗುಂಪುಗಾರಿಕೆಗೆ ಅವಕಾಶ ನೀಡದೇ ಹಿಂದಿನಿಂದಲೂ ಇಲ್ಲಿನ ಸಹಕಾರ ಸಂಘದಲ್ಲಿ ಅವಿರೋಧ ಆಯ್ಕೆ ನಡೆಯುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ. ಹಾಗಾಗಿ ನೂತನ ಅಧ್ಯಕ್ಷರ ಮೇಲೆ ವಿಶ್ವಾಸ ವಿಟ್ಟು ನಿರ್ದೇಶಕರು ಅವರನ್ನು ಅವಿರೋಧವಾಗಿ ಆಯ್ಕೆ ಮಾಡಿ ಗೌರವಯುತ ಸ್ಥಾನ ನೀಡಿರುವುದರಿಂದ ಅಧ್ಯಕ್ಷರು ನಿರ್ದೇಶಕರ ನಂಬಿಕೆ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕೆಲಸ ಮಾಡಬೇಕಾಗುತ್ತದೆ. ನೂತನ ಅಧ್ಯಕ್ಷ ಇಂದ್ರೇಶ್ ಅವರು ಮತದಾರರು, ಷೇರುದಾರರು ಹಾಗೂ ಹೊಸದಾಗಿ ಷೇರು ಪಡೆದಿರುವ ರೈತರಿಗೂ ಸರ್ಕಾರದಿಂದ ಬರುವ ಎಲ್ಲಾ ಸವಲತ್ತುಗಳನ್ನು ಕೊಡಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಆ ಮೂಲಕ ಈ ಭಾಗದ ರೈತರ ಆರ್ಥಿಕ ಪರಿಸ್ಥಿತಿ ಉತ್ತಮಗೊಳಿಸಲು ಸಹಕಾರ ನೀಡಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಮೀನುಗಾರರ ಮಹಾಮಂಡಳಿ ಮಾಜಿ ಜಿಲ್ಲಾಧ್ಯಕ್ಷ ನಂಜೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ಎಂ.ರಾಜಣ್ಣ, ಸಹಕಾರ ಸಂಘದ ಮೇಲ್ವಿಚಾರಕ ಎನ್.ಎಸ್.ಶೇಖರ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಜೇಂದ್ರ ಪ್ರಸಾದ್ ಸೇರಿದಂತೆ ಗ್ರಾಮಸ್ಥರು, ಯಜಮಾನರು, ಮುಖಂಡರು ಹಾಜರಿದ್ದರು.

ರಾಜ್ಯ ಪೌರಸೇವಾ ನೌಕರರ ಸಂಘದ ಪದಾಧಿಕಾರಿಗಳ ಆಯ್ಕೆ




ರಾಜ್ಯ ಪೌರಸೇವಾ ನೌಕರರ ಸಂಘದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಹುಣಸೂರು, ಜು.11– ಇತ್ತೀಚೆಗೆ ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ರಾಜ್ಯ ಪೌರಸೇವಾ ನೌಕರರ ಸಂಘದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಗೌರವಾಧ್ಯಕ್ಷೆಯಾಗಿ ನಗರಸಭೆ ಆಯುಕ್ತೆ ಎಂ.ಮಾನಸ, ಅಧ್ಯಕ್ಷ ಪಿ. ರಾಚಯ್ಯ, ಉಪಾಧ್ಯಕ್ಷ ಹೆಚ್.ಎನ್.ಚಂದ್ರು, ಕಾರ್ಯದರ್ಶಿ ನಾಗರಾಜ್, ಸಂಘಟನಾ ಕಾರ್ಯದರ್ಶಿ ಆರ್.ಸಿದ್ದಯ್ಯ, ಸಹ ಕಾರ್ಯದರ್ಶಿ ಕೆ.ಸಿ.ಶಿವಕುಮಾರ್, ಖಜಾಂಚಿ ಲೋಕೇಶ್, ನಿರ್ದೇಶಕರಾಗಿ ಗಣೇಶ್, ಕೃಷ್ಣೇಗೌಡ, ಶರ್ಮಿಳಾ, ಹೆಚ್.ಎಂ.ಸೌಮ್ಯ, ಹೆಚ್.ಎನ್.ಅನಂದ್, ಪಿ.ಮಂಜುಳಾ, ಶಿವಸ್ವಾಮಿ, ಗಣೇಶ್, ಜ್ಯೋತಿ.ಆರ್, ಬಣ್ಣಾರಿಸ್ವಾಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕೆಂಪಯ್ಯನಹುಂಡಿಯಲ್ಲಿ ಚಿರತೆ ಪ್ರತ್ಯಕ್ಷ: ಆತಂಕ



ಫೈಲ್ ಚಿತ್ರ

ತಿ.ನರಸೀಪುರ, ಜು.11– ತಾಲೂಕಿನ ಕೆಂಪಯ್ಯನಹುಂಡಿ ಗ್ರಾಮದ ತೋಟದ ಮನೆಯೊಂದರಲ್ಲಿ ಚಿರತೆ ಪ್ರತ್ಯಕ್ಷವಾಗಿ ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ.

ಗ್ರಾಮದ ಜೋಡಿ ತುಂಬಲ ರಸ್ತೆಯಲ್ಲಿರುವ ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಮಹದೇವಣ್ಣ ಅವರ ತೋಟದ ಮನೆ ಬಳಿ ಬುಧವಾರ ರಾತ್ರಿ ಚಿರತೆ ಓಡಾಡಿರುವುದು ಸಾರ್ವಜನಿಕರ ಆತಂಕಕ್ಕೆ ಕಾರಣವಾಗಿದ್ದು, ಈ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಕಳೆದ ಕೆಲ ತಿಂಗಳ ಹಿಂದೆ ತಾಲೂಕಿನಾದ್ಯಂತ ಚಿರತೆ ಹಾವಳಿ ಹೆಚ್ಚಾಗಿ ಹಲವು ಮಂದಿ ಚಿರತೆಗೆ ಬಲಿಯಾಗಿದ್ದರು. ಈ ವೇಳೆ ಅರಣ್ಯ ಇಲಾಖೆ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ಚಿರತೆಗಳನ್ನು ಸೆರೆಹಿಡಿದ ಹಿನ್ನೆಲೆಯಲ್ಲಿ ಸಾರ್ವಜನಿಕರು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದರು. ಈಗ ತಾಲೂಕಿನ ಕೆಲ ಗ್ರಾಮಗಳಲ್ಲಿ ಮತ್ತೆ ಚಿರತೆ ಕಾಣಿಸಿಕೊಳ್ಳುತ್ತಿರುವುದರಿಂದ ಗ್ರಾಮಸ್ಥರು ನೆಮ್ಮದಿಯಾಗಿ ನಿದ್ದೆ ಮಾಡದ ಪರಿಸ್ಥಿತಿ ನಿರ್ಮಾಣವಾಗಿದೆ.

ಮಹದೇವಣ್ಣನವರ ತೋಟದ ಮನೆಯಲ್ಲಿ ಭಾರೀ ಗಾತ್ರದ ಚಿರತೆ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಸೆರೆ ಹಿಡಿಯಲು ಬೋನು ಇರಿಸಿತ್ತಾದರೂ ಬೋನಿಗೆ ಬೀಳದ ಚಿರತೆ ಮತ್ತೆ ಓಡಾಟ ನಡೆಸುತ್ತಿದ್ದು, ನಾಯಿಗಳ ಬೇಟೆಗೆ ಹೊಂಚು ಹಾಕುತ್ತಿರುವ ದೃಶ್ಯ ಸಿಸಿ ಟಿವಿಯಲ್ಲಿ ಸೆರೆಯಾಗಿದೆ. ಹಾಗಾಗಿ ಅರಣ್ಯ ಇಲಾಖೆಯವರು ಕಾರ್ಯಾಚರಣೆ ನಡೆಸಿ ಚಿರತೆ ಸೆರೆ ಹಿಡಿಯಬೇಕೆಂದು ಒತ್ತಾಯಿಸಿದ್ದಾರೆ.

ಹೊಸತೊರಹಳ್ಳಿ ಡೈರಿಗೆ ಆಡಳಿತ ಮಂಡಳಿ ರಚನೆ



ಸದಸ್ಯರನ್ನು ಮೈಮುಲ್ ನಿರ್ದೇಶಕ ಕೆ.ಈರೇಗೌಡ ಅಭಿನಂದಿಸಿದರು.

ಹೆಚ್.ಡಿ.ಕೋಟೆ, ಜು.11– ತಾಲೂಕಿನ ಹೊಸತೊರಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿ ರಚಿಸಲಾಯಿತು.

ಅಧ್ಯಕ್ಷರಾಗಿ ಹೆಚ್.ಚೆನ್ನನಾಯಕ, ಉಪಾಧ್ಯಕ್ಷ ಚಿಕ್ಕಮಾಲೇಗೌಡ, ನಿರ್ದೇಶಕರಾಗಿ ಸಂಜೀವಶೆಟ್ಟಿ, ಆನಂದ, ಚಿಕ್ಕ ಅಂಕನಾಯಕ, ಮಹೇಶ್, ರಾಜೇಗೌಡ, ಬೀರೇಗೌಡ, ಸಂತೋಷ, ಚಂದ್ರಮ್ಮ ಹಾಗೂ ರೇಣುಕಾ ಆಯ್ಕೆಯಾಗಿದ್ದಾರೆ. ನೂತನ ಕಾರ್ಯಕಾರಿಣಿ ಮಂಡಳಿ ಸದಸ್ಯರನ್ನು ಮೈಮುಲ್ ನಿರ್ದೇಶಕ ಕೆ.ಈರೇಗೌಡ ಅಭಿನಂದಿಸಿದರು.

ಈ ವೇಳೆ ಬೆಳಗನಹಳ್ಳಿ ಡೈರಿ ಅಧ್ಯಕ್ಷ ಸೋಮೇಗೌಡ, ಪರಮೇಶ್, ಶಿವಣ್ಣ, ಶಶಿ ಪಟೇಲ್, ನಾಗರಾಜ್ ಇತರರಿದ್ದರು.

ಹೊಸಕೋಟೆ ಗ್ರಾಪಂಗೆ ಶೋಭಾ ಲೋಕೇಶ್ ಅಧ್ಯಕ್ಷೆ



ಹೊಸಕೋಟೆ ಗ್ರಾಪಂ ನೂತನ ಅಧ್ಯಕ್ಷೆ ಶೋಭಾ ಅವರನ್ನು ಮುಖಂಡರು ಅಭಿನಂದಿಸಿದರು.

ತಿ.ನರಸೀಪುರ, ಜು.11– ತಾಲೂಕಿನ ಹೊಸಕೋಟೆ (ಕೆಂಪಯ್ಯನಹುಂಡಿ) ಗ್ರಾಮ ಪಂಚಾಯ್ತಿ ನೂತನ ಅಧ್ಯಕ್ಷೆಯಾಗಿ ಶೋಭ ಲೋಕೇಶ್ ಅವಿರೋಧವಾಗಿ ಆಯ್ಕೆಯಾದರು.

ಈ ಹಿಂದಿನ ಅಧ್ಯಕ್ಷೆ ನಂದಿನಿ ರಾಜೇಂದ್ರ ಅವರ ರಾಜೀನಾಮೆಯಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಗ್ರಾಪಂ ಆವರಣದಲ್ಲಿ ಶುಕ್ರವಾರ ನಡೆದ ಚುನಾವಣೆಯಲ್ಲಿ ಶೋಭ ಲೋಕೇಶ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ರೇಷ್ಮೆ ಇಲಾಖೆ ಅಧಿಕಾರಿ ಕೆಂಪರಾಜು ಪ್ರಕಟಿಸಿದರು. ನೂತನ ಅಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆಯೇ ಗ್ರಾಪಂ ಎದುರು ಜಮಾಯಿಸಿದ್ದ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಚುನಾವಣಾ ವಿಶೇಷ ಸಭೆಗೆ ಉಪಾಧ್ಯಕ್ಷೆ ಜಾನಕಮ್ಮ, ನಿಕಟಪೂರ್ವ ಅಧ್ಯಕ್ಷೆ ನಂದಿನಿ ರಾಜೇಂದ್ರ, ಸದಸ್ಯರಾದ ಗಂಗಾಧರ, ಕಾವ್ಯಶ್ರೀ, ಜಯಲಕ್ಷ್ಮಿ, ಎಂ.ಬಾಲಕೃಷ್ಣ, ಎಂ.ಆನಂದ, ಚನ್ನಮ್ಮ, ನಾಗರಾಜು, ಎ.ಸತೀಶ, ನಾಗರಾಜು ಹಾಜರಾಗಿ ನೂತನ ಅಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರೆ, ಸದಸ್ಯೆ ನೀಲಮ್ಮ ಗೈರಾಗಿದ್ದರು.

ನೂತನ ಅಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ, ಗ್ರಾಪಂ ಅಧ್ಯಕ್ಷರ ಆಯ್ಕೆ ಸಂದರ್ಭ ಪೂರ್ವದಿಂದಲೂ ಸಾಮಾಜಿಕ ನ್ಯಾಯಕ್ಕೆ ಒತ್ತು ಕೊಡುವ ಕೆಲಸ ಮಾಡಿಕೊಂಡು ಬರಲಾಗುತ್ತಿದೆ. ಎಲ್ಲಾ ವರ್ಗದವರಿಗೂ ಅಧಿಕಾರ ಸಿಗಬೇಕೆಂಬ ಆಶಯದೊಂದಿಗೆ ಸದಸ್ಯರೆಲ್ಲರೂ ಅವಿರೋಧ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಗ್ರಾಮದ ಅಭಿವೃದ್ಧಿ ಹಿತದೃಷ್ಟಿಯಿಂದ ಇದು ಒಳ್ಳೆಯ ಬೆಳವಣಿಗೆಯಾಗಿದೆ. ಈ ಮೊದಲು ಒಕ್ಕಲಿಗ, ಕುರುಬ, ಉಪ್ಪಾರ, ನಾಯಕ ಜನಾಂಗಕ್ಕೆ ಅಧ್ಯಕ್ಷ ಸ್ಥಾನ ನೀಡಲಾಗಿತ್ತು. ಮುಂದಿನ ಅವಧಿಗೆ ಮಡಿವಾಳ ಜನಾಂಗಕ್ಕೆ ಅಧಿಕಾರ ನೀಡಿ ಸಾಮಾಜಿಕ ನ್ಯಾಯಕ್ಕೆ ಒತ್ತು ಕೊಡಲಾಗಿದೆ. ಗ್ರಾಪಂ ಸದಸ್ಯರೆಲ್ಲರೂ ಒಟ್ಟಾಗಿ ನೂತನ ಅಧ್ಯಕ್ಷರಿಗೆ ಸಹಕಾರ ನೀಡುವ ಮೂಲಕ ಗ್ರಾಪಂ ಹಾಗೂ ಗ್ರಾಪಂ ವ್ಯಾಪ್ತಿಗೆ ಸೇರುವ ಗ್ರಾಮಗಳ ಅಭಿವೃದ್ಧಿಗೆ ಸಹಕಾರ ನೀಡಬೇಕು. ಯಾವುದೇ ಭಿನ್ನಾಭಿಪ್ರಾಯಕ್ಕೆ ಅವಕಾಶ ನೀಡದೇ ಹಿರಿಯರ ಮಾರ್ಗದರ್ಶನ ಪಡೆದು ಪಂಚಾಯ್ತಿಯನ್ನು ಮಾದರಿ ಪಂಚಾಯ್ತಿ ಮಾಡುವ ನಿಟ್ಟಿನಲ್ಲಿ ಎಲ್ಲರೂ ಕಾರ್ಯಪ್ರವೃತ್ತರಾಗಬೇಕೆಂದು ಸಲಹೆ ನೀಡಿದರು.

ಈ ವೇಳೆ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ.ಅರುಣ್ ಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಮುದ್ದೇಗೌಡ, ಜಿ.ಪಂ.ಮಾಜಿ ಸದಸ್ಯ ಕೆ. ಮಹದೇವ್, ಗ್ರಾಪಂ ಮಾಜಿ ಅಧ್ಯಕ್ಷೆ ಪವಿತ್ರ ಕುಮಾರ್, ಮಾಜಿ ಸದಸ್ಯ ಲೋಕೇಶ್, ಕೆ.ಎಸ್.ಮಹೇಶ್, ತಾ.ಪಂ. ಮಾಜಿ ಸದಸ್ಯೆ ನಾಗಮಣಿ ಮಹೇಶ್, ಮನ್ನೇ ಹುಂಡಿ ಪರಶಿವ, ಪ್ರಥಮ ದರ್ಜೆ ಗುತ್ತಿಗೆದಾರ ಮಾಧು, ಆರ್.ಪಿ.ಹುಂಡಿ ನಾಗರಾಜು, ಬಸವಶೆಟ್ಟಿ, ನಿವೃತ್ತ ಆರೋಗ್ಯ ಇಲಾಖೆಯ ಮಹದೇವ್, ಗುಡ್ಡಪ್ಪ, ಅಂಕಶೆಟ್ಟಿ, ಶಿವನಂಜು, ಸುಂದರ, ದೊಡ್ಡೇಗೌಡ, ಮನ್ನೇಹುಂಡಿ ಪುಟ್ಟರಾಜು, ಸಿದ್ದಪ್ಪ,ರಘು, ಪುಟ್ಟಣ್ಣ, ಕೋಣಿಯಪ್ಪ, ಹರೀಶ್ ಮತ್ತಿತರರಿದ್ದರು.

> ಗ್ರಾಪಂನಲ್ಲಿ ಹಿರಿಯರ ಮಾರ್ಗದರ್ಶನದೊಂದಿಗೆ ದೊರಕಿರುವ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವ ಜೊತೆಗೆ ಪಂಚಾಯ್ತಿಗೆ ಬರಬಹುದಾದ ಅಗತ್ಯ ಅನುದಾನದ ಜೊತೆಗೆ ಹೆಚ್ಚುವರಿ ಅನುದಾನ ತರಲು ಪ್ರಾಮಾಣಿಕ ಪ್ರಯತ್ನ ಮಾಡಿ ಪಂಚಾಯ್ತಿ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಇದಕ್ಕೆ ಎಲ್ಲಾ ಸದಸ್ಯರು ಹಾಗೂ ಹಿರಿಯರು ಸಹಕಾರ ನೀಡಬೇಕು.
>
> – ಶೋಭಾ ಲೋಕೇಶ್, ನೂತನ ಅಧ್ಯಕ್ಷೆ.

ವಿವಿಧ ಸಾಮಾಜಿಕ ಕಾರ್ಯಗಳೊಂದಿಗೆ ಅರ್ಥಪೂರ್ಣವಾಗಿ

ಆ.6ಕ್ಕೆ ವಿ.ಶ್ರೀನಿವಾಸ್ ಪ್ರಸಾದ್ ಹುಟ್ಟುಹಬ್ಬ ಆಚರಣೆ

ಪೂರ್ವಭಾವಿ ಸಭೆಯಲ್ಲಿ ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ಮಾಹಿತಿ



ಪೂರ್ವಭಾವಿ ಸಭೆಯಲ್ಲಿ ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ಮಾತನಾಡಿದರು.

ನಂಜನಗೂಡು, ಜು.11– ವಿ.ಶ್ರೀನಿವಾಸ್ ಪ್ರಸಾದ್ ಅಭಿಮಾನಿ ಬಳಗದಿಂದ ಆ.6 ರಂದು ಹಿರಿಯ ಮುತ್ಸದ್ದಿ ರಾಜಕಾರಣಿ ವಿ.ಶ್ರೀನಿವಾಸ್ ಪ್ರಸಾದ್ ಅವರ ಜನ್ಮದಿನವನ್ನು ವಿವಿಧ ಸಾಮಾಜಿಕ ಕಾರ್ಯಗಳೊಂದಿಗೆ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ ತಿಳಿಸಿದರು.

ಶುಕ್ರವಾರ ನಗರದ ಪ್ರವಾಸಿ ಮಂದಿರದಲ್ಲಿ ದಿ.ವಿ.ಶ್ರೀನಿವಾಸ್ ಪ್ರಸಾದ್ ಹುಟ್ಟುಹಬ್ಬ ಹಿನ್ನೆಲೆಯಲ್ಲಿ ಶ್ರೀನಿವಾಸ್ ಪ್ರಸಾದ್ ಅಭಿಮಾನಿ ಬಳಗದಿಂದ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಶ್ರೀನಿವಾಸ್ ಪ್ರಸಾದ್ 6 ಬಾರಿ ಸಂಸದ, 2 ಬಾರಿ ಶಾಸಕರಾಗಿ ಆಯ್ಕೆಯಾಗಿ ನಂಜನಗೂಡು ಹಾಗೂ ಚಾಮರಾಜನಗರ ಲೋಕಸಭಾ ಕ್ಷೇತ್ರಕ್ಕೆ ಹಲವು ಶಾಶ್ವತ ಕೆಲಸಗಳನ್ನು ಮಾಡುವ ಮೂಲಕ ಈ ಭಾಗದ ಜನರ ಹೃದಯದಲ್ಲಿ ನೆಲೆಸಿದ್ದಾರೆ. ಅವರ ಸಾಮಾಜಿಕ ನ್ಯಾಯ, ರಾಜಕೀಯ ಬದ್ಧತೆ, ಸಾಮಾಜಿಕ ಕಳಕಳಿ, ಆದರ್ಶಗಳು ಇಂದಿಗೂ ಜೀವಂತವಾಗಿವೆ. ನಾವೆಲ್ಲರೂ ಅವರ ಮಾರ್ಗದಲ್ಲಿ ಸಾಗಬೇಕು. ಪ್ರಸಾದ್ ಅವರ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲು ಮುಖಂಡರು ನೀಡಿರುವ ಸಲಹೆಯಂತೆ ರಕ್ತದಾನ ಶಿಬಿರ, ಆರೋಗ್ಯ ಶಿಬಿರ ಹಾಗೂ ಪೌರಕಾರ್ಮಿಕರನ್ನು ಸನ್ಮಾನಿಸುವುದು ಸೇರಿದಂತೆ ಸಾಮಾಜಿಕ ಕಾರ್ಯಗಳೊಂದಿಗೆ ಅದ್ಧೂರಿಯಾಗಿ, ಪಕ್ಷಾತೀತವಾಗಿ ಆಚರಿಸಲು ನಿರ್ಧರಿಸಿದ್ದೇವೆ. ಪ್ರತಿಯೊಬ್ಬರ ಅಭಿಪ್ರಾಯಗಳನ್ನು ಮಾಜಿ ಶಾಸಕ ಬಿ.ಹರ್ಷವರ್ಧನ್ ಜೊತೆ ಚರ್ಚಿಸಿ ಅವರ ಸಲಹೆಯಂತೆ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಚರಿಸಲು ಸಿದ್ಧತೆ ಕೈಗೊಳ್ಳುತ್ತೇವೆ. ಜೊತೆಗೆ ಶ್ರೀನಿವಾಸ್ ಪ್ರಸಾದ್ ಹುಟ್ಟುಹಬ್ಬ ಕಾರ್ಯಕ್ರಮಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ಶ್ರೀರಾಮುಲು ಅವರನ್ನು ಆಹ್ವಾನಿಸಲಾಗುವುದು. ಕಾರ್ಯಕ್ರಮದಲ್ಲಿ ವಿ.ಶ್ರೀನಿವಾಸ್ ಪ್ರಸಾದ್ ಪತ್ನಿ ಭಾಗ್ಯಲಕ್ಷ್ಮಿ ಅವರು ಪಾಲ್ಗೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದರು.

ಬಿಜೆಪಿ ನಗರ ಮಂಡಲದ ಅಧ್ಯಕ್ಷ ಸಿದ್ದರಾಜು ಮಾತನಾಡಿ, ವಿ.ಶ್ರೀನಿವಾಸ್ ಪ್ರಸಾದ್ ಅವರು ಪಕ್ಷಾತೀತವಾಗಿ ಈ ಭಾಗದಲ್ಲಿ ಅಭಿಮಾನಿಗಳನ್ನು ಹೊಂದಿದ್ದಾರೆ. ಎಲ್ಲಾ ಅಭಿಮಾನಿಗಳನ್ನು ಒಗ್ಗೂಡಿಸಿ ವಿಚಾರ ಸಂಕೀರ್ಣಗಳಂತಹ ಕಾರ್ಯಕ್ರಮ ಏರ್ಪಡಿಸಿ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದರು.


ಈ ವೇಳೆ ಬಿಜೆಪಿ ತಾಲೂಕು ಅಧ್ಯಕ್ಷ ಕೆಂಡಗಣ್ಣಪ್ಪ, ಬಿಜೆಪಿ ಓಬಿಸಿ ಮೋರ್ಚಾ ಜಿಲ್ಲಾಧ್ಯಕ್ಷ ಬಾಲಚಂದ್ರ, ಮುಖಂಡರಾದ ಕಣೇನೂರು ಪರಶಿವಮೂರ್ತಿ, ಹೆಮ್ಮರಗಾಲ ಸೋಮಣ್ಣ, ಹುರಾ ಚಂದ್ರು ಮಹೇಶರಾಜು, ಬಸಪ್ಪ ಎನ್.ಸಿ.ಬಸವಣ್ಣ, ಬದನವಾಳು ಮಂಜುನಾಥ್, ಮಲ್ಲಿಕಾರ್ಜುನ್, ಮಂಡ್ಯ ಮಹದೇವು, ಮಣಿಕಂಠ, ವಳಗೆರೆ ಪುಟ್ಟಸ್ವಾಮಿ, ಕೃಷ್ಣರಾಜು, ತಾಪಂ ಮಾಜಿ ಸದಸ್ಯರಾದ ಬಿ.ಎಸ್.ರಾಮು, ಶಿವಣ್ಣ, ನಗರಸಭಾ ಸದಸ್ಯರಾದ ಮಹದೇವ ಪ್ರಸಾದ್, ಮಹೇಶ್ ಅತ್ತಿಖಾನೆ, ಎಪಿಎಂಸಿ ಮಾಜಿ ಸದಸ್ಯ ಗುರುಸ್ವಾಮಿ ಇತರರಿದ್ದರು.

ಮೈಸೂರು ಮಿತ್ರ

ಶನಿವಾರ 12 ಜುಲೈ 2025

ಮೈಸೂರು ಪಾಲಿಕೆ ನೌಕರರ ಪ್ರತಿಭಟನೆಗೆ ಮಾಜಿ ಸಿಎಂ ಯಡಿಯೂರಪ್ಪ ಬೆಂಬಲ

ರಾಜ್ಯ ಸರ್ಕಾರ ಕುಂಭದ್ರೋಣ ನಿದ್ರೆಗೆ ಜಾರಿದೆ; ಕಿಡಿ



ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿರುವ ಮೈಸೂರು ನಗರ ಪಾಲಿಕೆ ನೌಕರರನ್ನು ಭೇಟಿ ಮಾಡಿದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ನೌಕರರ ಸಂಘದಿಂದ ಮನವಿ ಸ್ವೀಕರಿಸಿ ಬೆಂಬಲ ಸೂಚಿಸಿದರು.

ಮೈಸೂರು, ಜು.11(ಬಿಎಲ್‌ಯು)– ಮೈಸೂರು ನಗರ ಪಾಲಿಕೆ ಸೇರಿದಂತೆ ಸ್ಥಳೀಯ ಸಂಸ್ಥೆಗಳ ನೌಕರರ ಹೋರಾಟಕ್ಕೆ ಸ್ಪಂದಿಸದ ರಾಜ್ಯ ಕಾಂಗ್ರೆಸ್ ಸರ್ಕಾರ ಕುಂಭದ್ರೋಣ ನಿದ್ರೆಗೆ ಜಾರಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಆರೋಪಿಸಿದರು.

ಮೈಸೂರು ನಗರ ಪಾಲಿಕೆಯ ಮುಂದೆ ಪ್ರತಿಭಟನೆ ನಡೆಸುತ್ತಿರುವ ಪಾಲಿಕೆ ನೌಕರರನ್ನು ಇಂದು ಭೇಟಿ ಮಾಡಿ ಬೆಂಬಲ ಸೂಚಿಸಿದ ಸಂದರ್ಭದಲ್ಲಿ ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಮೈಸೂರು ನಗರಕ್ಕೆ ಬಹಳಷ್ಟು ಸಚಿವರು ಭೇಟಿ ನೀಡುತ್ತಿದ್ದಾರೆ. ಆದರೆ ಪ್ರತಿಭಟನೆ ನಡೆಸುತ್ತಿರುವ ನೌಕರರನ್ನು ಸೌಜನ್ಯಕ್ಕಾದರೂ ಭೇಟಿ ಮಾಡುತ್ತಿಲ್ಲ ಎಂದು ಆರೋಪಿಸಿದರು.

ಜನರ ಸಂಕಷ್ಟಕ್ಕೆ ಸ್ಪಂದಿಸದ ರಾಜ್ಯ ಕಾಂಗ್ರೆಸ್ ಸರ್ಕಾರ ಕುಂಭದ್ರೋಣ ನಿದ್ರೆಗೆ ಜಾರಿದೆ ಎಂದು ಕಿಡಿಕಾರಿದರು. ಶಾಸಕ ಟಿ.ಎಸ್.ಶ್ರೀವತ್ಸ ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಬಿಜೆಪಿ ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ, ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಇತರರು ಈ ವೇಳೆ ಹಾಜರಿದ್ದರು.

ಐಎಎಸ್, ಐಪಿಎಸ್ ಅಧಿಕಾರಿಗಳಿಗಿಂತ ನಿಮ್ಮ ಕೆಲಸವೇ ಶ್ರೇಷ್ಠ

ಇದೇ ವೇಳೆ ಮಾತನಾಡಿದ ಶಿವಮೊಗ್ಗ ಸಂಸದ ಬಿ.ವೈ.ರಾಘವೇಂದ್ರ, ನಗರ ಪಾಲಿಕೆಯ ನೌಕರರು ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳಿಗಿಂತಲೂ ಶ್ರೇಷ್ಠವಾದ ಕೆಲಸ ಮಾಡುತ್ತಿದ್ದಾರೆ. ನಗರ ಪಾಲಿಕೆಯ ನೌಕರರು ಸ್ವಚ್ಛ ಮಾಡದಿದ್ದರೆ ಇಡೀ ನಗರ ಗಬ್ಬು ನಾರುತ್ತದೆ. ಇದನ್ನು ಅರಿತು ಇವರ ಬೇಡಿಕೆ ಈಡೇರಿಸಲು ಸರ್ಕಾರ ಮುಂದಾಗಬೇಕು ಎಂದು ಆಗ್ರಹಿಸಿದರು.

ವಿರೋಧ ಪಕ್ಷದವರಾದ ನಾವು ಸರ್ಕಾರದ ಗಮನಕ್ಕೆ ತಂದು ನಿಮ್ಮ ಬೇಡಿಕೆ ಈಡೇರಿಸುವಂತೆ ಒತ್ತಡ ಹೇರುತ್ತೇವೆ. ಈ ನಿಟ್ಟಿನಲ್ಲಿ ನಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ಮಾಡುತ್ತೇವೆ. ಈ ಮೂಲಕ ನಿಮ್ಮ ಬೇಡಿಕೆ ಈಡೇರಿಸಲು ಶ್ರಮಿಸುತ್ತೇವೆ ಎಂದು ಭರವಸೆ ನೀಡಿದರು. ಏಳನೇ ವೇತನ ಆಯೋಗದ ಜಾರಿ ಸೇರಿದಂತೆ ಹಲವು ಬೇಡಿಕೆ ಈಡೇರಿಸುವಂತೆ ಮನವಿ ಮಾಡಿದ್ದೀರಾ. ಈ ಸಂಬಂಧ ಸರ್ಕಾರಕ್ಕೆ ನಿಮ್ಮ ಮನವಿಯನ್ನು ತಿಳಿಸುತ್ತೇವೆ ಎಂದು ರಾಘವೇಂದ್ರ ಪುನರುಚ್ಚರಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	**(ದೂ: 2521923)**
ದೇಸಿಂಗು ರಾಜಾ2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	**(ದೂ: 2422871)**
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	**(ದೂ: 2497199)**
ಮಾಲಿಕ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	**(ಮೊ:9900820093)**
ಐರಾವತ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
ಫ್ರೀಡಂ (ತ)	4 ಪ್ರದರ್ಶನಗಳು
ಸಂಗಂ	
ಪೆನ್‌ಡ್ರೈವ್ (ಕ)	4 ಪ್ರದರ್ಶನಗಳು
ಲಿಡೋ	
ಐರಾವತ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ವಾಮನ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ.10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪ್ರಮುಖ ಸ್ಥಳಗಳ ವಿಡಿಯೋ ರೆಕಾರ್ಡ್

ಮೈಸೂರಲ್ಲಿ ಕೇರಳ ಮೂಲದ ಶಂಕಿತನ ಬಂಧನ, ಬಿಡುಗಡೆ



ಮೈಸೂರು, ಜು.11(ಆರ್‌ಕೆ)–ಮೈಸೂರಲ್ಲಿ ದೇವಸ್ಥಾನ, ಚರ್ಚ್, ಮಸೀದಿ ಹಾಗೂ ಇನ್ನಿತರ ಪ್ರಮುಖ ಸ್ಥಳಗಳ ವಿಡಿಯೋ ಚಿತ್ರೀಕರಣ ಮಾಡಿ ಅಪ್ ಲೋಡ್ ಮಾಡುತ್ತಿದ್ದ ಕೇರಳ ಮೂಲದ ವ್ಯಕ್ತಿಯನ್ನು ಎನ್.ಆರ್. ಠಾಣೆ ಪೊಲೀಸರು ಕಳೆದ ಭಾನುವಾರ ಬಂಧಿಸಿದ್ದಾರೆ.

ಕೇರಳದ ಪಿ.ಕೆ.ಮೊಹಮದ್ ಅನುಮಾನಾಸ್ಪದವಾಗಿ ಫೋಟೋ, ವಿಡಿಯೋ ತೆಗೆಯುತ್ತಿದ್ದಾಗ ಬಂಧಿಸಲಾಗಿತ್ತು. ಸೆಕ್ಷನ್ 109 ಅಡಿ ಸೆಕ್ಯೂರಿಟಿ ಕೇಸ್ ದಾಖಲಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು ಎರಡು ದಿನಗಳ ಬಳಿಕ ಆತ ಭದ್ರತಾ ಬಾಂಡ್ ನೀಡಿ ಜೈಲಿನಿಂದ ಬಿಡುಗಡೆಯಾಗಿದ್ದಾನೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಆತ ಕಳೆದ ಹಲವು ದಿನಗಳಿಂದ ಮೈಸೂರಿನ ಹಲವೆಡೆ ಪ್ರಾರ್ಥನಾ ಮಂದಿರ, ದೇವಸ್ಥಾನ, ಪ್ರಮುಖ ಕಟ್ಟಡಗಳು ಹಾಗೂ ಸ್ಮಾರಕಗಳನ್ನು ವಿಡಿಯೋ ಚಿತ್ರೀಕರಣ ಮಾಡಿ ಬೇರೆಡೆ ಕಳುಹಿಸುತ್ತಿದ್ದ. ಮೊಹರಂ ಕಡೇ ದಿನ ಎನ್.ಆರ್. ಠಾಣೆ ಪೊಲೀಸರು ಬಂದೋಬಸ್ತ್ ಪರೇಡ್ ನಡೆಸುತ್ತಿದ್ದಾಗ ಎನ್.ಆರ್. ಮೊಹಲ್ಲಾದ ಪ್ರಾರ್ಥನಾ ಮಂದಿರವೊಂದರಲ್ಲಿ ಸಂಶಯಾಸ್ಪದವಾಗಿ ವಿಡಿಯೋ ತೆಗೆಯುತ್ತಿದ್ದ ಮೊಹಮದ್‌ನನ್ನು ಬಂಧಿಸಿದ್ದರು.

ಠಾಣೆಗೆ ಕರೆದೊಯ್ದು ವಿಚಾರಣೆ ಮಾಡಲಾಗಿ, ನನಗೆ ಸುಂದರ ಸ್ಥಳಗಳ ಫೋಟೋ, ವಿಡಿಯೋ ತೆಗೆಯುವ ಹವ್ಯಾಸವಿದೆ. ಹಾಗಾಗಿ ಈ ಚಿತ್ರೀಕರಣ ಮಾಡಿಕೊಳ್ಳುತ್ತಿದ್ದೇನೆ. ಅದನ್ನು ಬೇರೆ ಎಲ್ಲಿಗೂ ಕಳುಹಿಸುತ್ತಿಲ್ಲ ಎಂದನಾದರೂ, ಮುಂಜಾಗ್ರತೆಗಾಗಿ ಭದ್ರತಾ ಪ್ರಕರಣ ದಾಖಲಿಸಿದ್ದೇವೆ. ಆದರೆ, ಆತನ ಬಳಿ ಯಾವುದೇ ವಿಧ್ವಂಸಕ ಕೃತ್ಯ ನಡೆಸುವ ಸುಳಿವು, ಪುರಾವೆ ಸಿಕ್ಕಿಲ್ಲ ಎಂದು ಎನ್.ಆರ್.ಠಾಣೆ ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ್ ತಳವಾರ ತಿಳಿಸಿದ್ದಾರೆ.

ಆತನ ಕ್ಯಾಮರಾ, ಲ್ಯಾಪ್‌ಟಾಪ್ ಪರಿಶೀಲಿಸಲಾಯಿತಾದರೂ, ಯಾವುದೇ ಅಪಾಯಕಾರಿ ದೃಶ್ಯಾವಳಿ, ಫೋಟೋಗಳು ಲಭ್ಯವಾಗಲಿಲ್ಲ. ಆದರೆ, ಯಾವುದೇ ಅನುಮತಿ ಪಡೆಯದೇ ಏಕಾಂಗಿಯಾಗಿ ವಿಡಿಯೋ ಮಾಡುತ್ತಿದ್ದರಿಂದ ಶಂಕಿತನನ್ನು ಬಂಧಿಸಲಾಗಿತ್ತು ಎಂದು ಅವರು ತಿಳಿಸಿದರು.

ಪಾಲಿಕೆ ಸಿಬ್ಬಂದಿ ಮುಷ್ಕರದಿಂದ ಸೇವೆ ಲಭ್ಯವಾಗದೇ ತೆರಿಗೆದಾರರು ಹೈರಾಣ

ಮೈಸೂರು, ಜು. 11(ಆರ್‌ಕೆ)– 7ನೇ ವೇತನ ಆಯೋಗದ ಶಿಫಾರಸ್ಸಿನನ್ವಯ ವೇತನ ಹಾಗೂ ಸೌಲಭ್ಯಗಳನ್ನು ನೀಡುವಂತೆ ಆಗ್ರಹಿಸಿ ಪಾಲಿಕೆ ನೌಕರು ಕಳೆದ ಐದು ದಿನಗಳಿಂದ ಕೆಲಸ ಬಹಿಷ್ಕರಿಸಿ ಮುಷ್ಕರ ನಡೆಸುತ್ತಿರುವುದರಿಂದ ಸೇವೆ ಸಿಗದೇ ತೆರಿಗೆ ಪಾವತಿದಾರರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ.

ಕಳೆದ ಸೋಮವಾರದಿಂದ ಸಾಮೂಹಿಕ ರಜೆ ಹಾಕಿ ಮೈಸೂರು ಮಹಾನಗರ ಪಾಲಿಕೆಯ ಸಯ್ಯಾಜಿರಾವ್ ರಸ್ತೆಯ ಪ್ರಧಾನ ಕಚೇರಿಯ ಎಲ್ಲಾ 9 ವಲಯ ಕಚೇರಿಗಳ ಬಿ, ಸಿ ಮತ್ತು ಡಿ ವೃಂದದ ಅಧಿಕಾರಿಗಳು ಹಾಗೂ ಸಿಬ್ಬಂದಿ ಪ್ರತಿಭಟನಾ ಧರಣಿಯಲ್ಲಿ ನಿರತರಾಗಿರುವುದರಿಂದ ಅಲ್ಲಿನ ಕಚೇರಿಗಳಲ್ಲಿ ಕೆಲಸ ಕಾರ್ಯಗಳು ಸಂಪೂರ್ಣ ಸ್ಥಗಿತಗೊಂಡಿವೆ.

ಇಂದು ಬೆಂಗಳೂರಲ್ಲಿ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗಳು, ಅಖಿಲ ಕರ್ನಾಟಕ ಪಾಲಿಕೆ ನೌಕರರ ಸಂಘದ ಪದಾಧಿಕಾರಿಗಳೊಂದಿಗೆ ಸಭೆ ನಡೆಸಿ ಸಮಸ್ಯೆಗಳನ್ನು ಆಲಿಸಿದ್ದು, ಮುಂದಿನ ಮಂಗಳವಾರ ಸಚಿವರೊಂದಿಗೂ ಸಭೆ ನಿಗದಿಯಾಗಿರುವುದರಿಂದ ಪ್ರತಿಭಟನೆ ಕೈಬಿಡುವ ಬಗ್ಗೆ ಇನ್ನೂ ನಿರ್ಧರಿಸಿಲ್ಲ ಎಂದು ಪದಾಧಿಕಾರಿಗಳು ತಿಳಿಸಿದ್ದಾರೆ.

ಅವರು ಮುಷ್ಕರ ಕೈಬಿಡದಿದ್ದರೂ, ನಾಳೆ (ಜು. 12) 2ನೇ ಶನಿವಾರ ರಜೆ ಇದ್ದು, ಭಾನುವಾರವೂ ರಜೆ ಇರುವುದರಿಂದ ಇಡೀ ಒಂದು ವಾರ ಪಾಲಿಕೆ ಸಿಬ್ಬಂದಿ ಕೆಲಸ ಮಾಡಲಿಲ್ಲ. ಪರಿಣಾಮ ಇ–ಖಾತೆಗೆ ಅರ್ಜಿ ಸಲ್ಲಿಸಿರುವ ಕಡತಗಳ ಪ್ರಕ್ರಿಯೆ ಸಂಪೂರ್ಣ ಸ್ಥಗಿತಗೊಂಡಿದೆ. ಎ, ಬಿ ಖಾತಾ ನೋಂದಣಿ, ಪೌತಿ, ವರ್ಗಾವಣೆ, ಟ್ರೇಡ್ ಲೈಸೆನ್ಸ್, ಪ್ಲಾನ್ ಅಪ್ರೂವಲ್, ಸಿಆರ್, ಜನನ–ಮರಣ ಪ್ರಮಾಣ ಪತ್ರ, ಕಂದಾಯ ಪಾವತಿಯಂತಹ ಸೇವೆಗಳು ಸಿಗದ ಕಾರಣ ಅರ್ಜಿದಾರರು ಹೈರಾಣಾಗಿದ್ದಾರೆ. ತುರ್ತಾಗಿ ಕೆಲಸವಾಗಬೇಕಾದವರಿಗಂತೂ ಪಾಲಿಕೆ ನೌಕರರ ಧರಣಿ ಶಾಪವಾಗಿ ಪರಿಣಮಿಸಿದೆ.

ಅರ್ಜಿದಾರರು ನಿತ್ಯ ವಲಯ ಕಚೇರಿಗಳಿಗೆ ತೆರಳಿ ಕೇವಲ ಖಾಲಿ ಕುರ್ಚಿಗಳ ದರ್ಶನ ಮಾಡಿ ನಿರಾಸೆಯಿಂದ ಹಿಂತಿರುಗುವಂತಾಗಿದೆ. ಅಲ್ಲೊಬ್ಬ–ಇಲ್ಲೊಬ್ಬ ಗೆಜೆಟೆಡ್ ಅಧಿಕಾರಿಗಳು ಕರ್ತವ್ಯಕ್ಕೆ ಹಾಜರಾಗುತ್ತಿದ್ದರಾದರೂ ಸಪೋರ್ಟಿಂಗ್ ಸ್ಟಾಫ್ ಇಲ್ಲದ ಕಾರಣ ಅವರಿಗೂ ಕೆಲಸವಿಲ್ಲದಂತಾಗಿದೆ.

ಮಾ. 10ರಿಂದೀಚೆಗೆ ಮೈಸೂರು ರೈಲ್ವೇ ಠಾಣಾ ವ್ಯಾಪ್ತಿಯಲ್ಲಿ

14 ಮಂದಿ ಅಪರಿಚಿತ ವ್ಯಕ್ತಿಗಳ ಮೃತದೇಹ ಪತ್ತೆ

ಮೈಸೂರು, ಜು. 11(ಆರ್‌ಕೆ)– ಮೈಸೂರು ರೈಲ್ವೇ ಪೊಲೀಸ್ ಠಾಣಾ ವ್ಯಾಪ್ತಿಯ ವಿವಿಧೆಡೆ 2025ರ ಮಾರ್ಚ್ 10ರಿಂದೀಚೆಗೆ 4 ತಿಂಗಳಲ್ಲಿ ಓರ್ವ ಮಹಿಳೆ ಸೇರಿ ಒಟ್ಟು 14 ಮಂದಿ ಅಪರಿಚಿತ ವ್ಯಕ್ತಿಗಳ ಮೃತದೇಹ ಪತ್ತೆಯಾಗಿವೆ ಎಂದು ರೈಲ್ವೇ ಠಾಣೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮಾರ್ಚ್ 10ರಂದು ಮೈಸೂರು ರೈಲು ನಿಲ್ದಾಣದ 4ನೇ ಪ್ಲಾಟ್‌ಫಾರಂನಲ್ಲಿ ನಿಂತಿದ್ದ ಬಸವ ಎಕ್ಸ್‌ಪ್ರೆಸ್ ರೈಲಿನಲ್ಲಿ 45 ವರ್ಷದ ವ್ಯಕ್ತಿ ಸಾವನ್ನಪ್ಪಿದ್ದರು. ಇನ್ನು ಮಾರ್ಚ್ 31ರಂದು ರೈಲು ನಿಲ್ದಾಣದಲ್ಲಿ ಅಸ್ವಸ್ಥರಾಗಿದ್ದ 40 ವರ್ಷದ ಅಪರಿಚಿತ ವ್ಯಕ್ತಿ ಮೃತಪಟ್ಟಿದ್ದಾರೆ. ಏಪ್ರಿಲ್ 11ರಂದು ಬ್ಯಾಡರಹಳ್ಳಿ ಬಳಿ ರೈಲಿಗೆ ಸಿಲುಕಿ 45 ವರ್ಷದ ವ್ಯಕ್ತಿ ಸಾವನ್ನಪಿದ್ದರು. ನಂತರ ಏ. 26ರಂದು 55 ವರ್ಷದ ವ್ಯಕ್ತಿಯೊಬ್ಬರು ಅಕ್ಕಿಹೆಬ್ಬಾಳು ರೈಲು ನಿಲ್ದಾಣದ ಬಳಿ ರೈಲಿಗೆ ಸಿಲುಕಿ ಮೃತಪಟ್ಟಿದ್ದ ಬಗ್ಗೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಅದೇ ರೀತಿ ಮಾರ್ಚ್ 26ರಂದು ಕೆಆರ್ ನಗರ ರೈಲು ನಿಲ್ದಾಣದಲ್ಲಿ ಅಪಘಾತವಾಗಿ ಗಾಯಗೊಂಡಿದ್ದ 75 ವರ್ಷದ ವೃದ್ಧನನ್ನು ಕೆಆರ್ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ, ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ. ಏಪ್ರಿಲ್ 30ರಂದು ಬೆಳಗೊಳ ಬಳಿ ರೈಲಿಗೆ ಸಿಲುಕಿ 50 ವರ್ಷದ ವ್ಯಕ್ತಿ ಸಾವನ್ನಪ್ಪಿದ್ದರೆ, ಮೇ 2ರಂದು ಪಾಂಡವಪುರ ರೈಲು ನಿಲ್ದಾಣ ಸಮೀಪ ರೈಲಿಗೆ ಸಿಲುಕಿ 35 ವರ್ಷದ ವ್ಯಕ್ತಿ ಸಾವನ್ನಪ್ಪಿದ್ದಾರೆ.

ಏಪ್ರಿಲ್ 26ರಂದು ಮೈಸೂರು ರೈಲು ನಿಲ್ದಾಣದ ಪ್ಲಾಟ್‌ಫಾರಂ ಸಂಖ್ಯೆ 3ರಲ್ಲಿ ಮಲಗಿದ್ದ 65 ವರ್ಷದ ವ್ಯಕ್ತಿ ಆಸ್ಪತ್ರೆಯಲ್ಲಿ ಮೇ 3ರಂದು ಮೃತಪಟ್ಟಿದ್ದಾರೆ. ಮೇ 12ರಂದು ಅಶೋಕಪುರಂ ರೈಲು ನಿಲ್ದಾಣದ ಬಳಿ 50 ವರ್ಷದ ವ್ಯಕ್ತಿ ಮೃತಪಟ್ಟಿದ್ದಾರೆ. ಅಲ್ಲದೇ ಮೇ 15ರಂದು ನಾಗನಹಳ್ಳಿ ಬಳಿ ರೈಲಿಗೆ ಸಿಲುಕಿ 45 ವರ್ಷದ ಮಹಿಳೆ ಸಾವನ್ನಪ್ಪಿದ್ದಾರೆ.

ರೈಲಿಗೆ ಸಿಲುಕಿ ಕಡಕೊಳ ಸಮೀಪ ಮೇ 29ರಂದು 50 ವರ್ಷದ ವ್ಯಕ್ತಿ ಸಾವನ್ನಪ್ಪಿದ್ದರೆ, ಜೂನ್ 4ರಂದು ಹೊಸ ಅಗ್ರಹಾರ ಬಳಿ ರೈಲಿಗೆ ಸಿಲುಕಿ 60 ವರ್ಷದ ವ್ಯಕ್ತಿ ಸಾವನ್ನಪ್ಪಿದ್ದಾರೆ. ಮಂಡ್ಯ ರೈಲ್ವೇ ಸ್ಟೇಷನ್ ಸಮೀಪ ರೈಲಿನಿಂದ ಬಿದ್ದು 45 ವರ್ಷದ ಅಪರಿಚಿತ ವ್ಯಕ್ತಿ ಸಾವನ್ನಪ್ಪಿದ್ದು, ಕವಲಂದೆ ರೈಲು ನಿಲ್ದಾಣದ 1ನೇ ಪ್ಲಾಟ್‌ಫಾರಂನಲ್ಲಿ 50 ವರ್ಷದ ವ್ಯಕ್ತಿ ಅಸುನೀಗಿದ್ದಾರೆ. ಮೃತ ವ್ಯಕ್ತಿಗಳ ವಾರಸುದಾರರ ಬಗ್ಗೆ ಮಾಹಿತಿ ಇದ್ದಲ್ಲಿ ಮೈಸೂರು ರೈಲ್ವೇ ಪೊಲೀಸ್ ಠಾಣೆ (0821–2516579, ಮೊಬೈಲ್ ಸಂಖ್ಯೆ: 9480802122)ಗೆ ಮಾಹಿತಿ ನೀಡುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ಸಾಯಿಬಾಬಾ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಿದ ಶಾಸಕ ಜಿಟಿ ದೇವೇಗೌಡ




ಮೈಸೂರು, ಜು. 11– ಮೈಸೂರಿನ ರಾಮಕೃಷ್ಣನಗರದ ಇ ಮತ್ತು ಎಫ್ ಬ್ಲಾಕ್‌ನಲ್ಲಿರುವ ಶ್ರೀ ಪ್ರಸನ್ನ ಗಣಪತಿ ಮತ್ತು ಶ್ರೀ ಶಿರಡಿ ಸಾಯಿ ಶಕ್ತಿ ಸನ್ನಿಧಿ ಟ್ರಸ್ಟ್ ವತಿಯಿಂದ ಗುರುಪೂರ್ಣಿಮೆ ನಿಮಿತ್ತ ಸಾಯಿಬಾಬಾ ಮೂರ್ತಿಗೆ ವೇದ ಘೋಷಗಳೊಂದಿಗೆ ಜಲಾಭಿಷೇಕ, ವಿಶೇಷ ಪೂಜೆ ಧಾರ್ಮಿಕ ಕಾರ್ಯಕ್ರಮಗಳು ನಡೆದವು.

ಈ ಸಂದರ್ಭದಲ್ಲಿ ಶಾಸಕ ಜಿ ಟಿ ದೇವೇಗೌಡ ದೇವಸ್ಥಾನಕ್ಕೆ ಭೇಟಿ ನೀಡಿ, ಸಾಯಿಬಾಬಾ ದರ್ಶನ ಪಡೆದರು. ಬಳಿಕ ಮಾತನಾಡಿದ ಅವರು, ಪ್ರತಿಯೊಬ್ಬರೂ ಜೀವನದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಗುರುವಿನ ಅನುಗ್ರಹಕ್ಕೆ ಒಳಗಾಗಿರುತ್ತಾರೆ. ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂಬ ಮಾತಿದೆ. ಗುರುಗಳ ಆಶೀರ್ವಾದ ಮಾರ್ಗದರ್ಶನ, ಆಶೀರ್ವಾದ ಇಲ್ಲದಿದ್ದರೆ ಏನು ಮಾಡಲು ಸಾಧ್ಯವಿಲ್ಲ. ಎಲ್ಲರೂ ಗುರುವಿನ ಪ್ರೀತಿಗೆ ಪಾತ್ರರಾಗಿ ಅವರ ಆಶೀರ್ವಾದ ಪಡೆದು ಪುನೀತರಾಗಬೇಕು ಎಂದರು.


ಬೆಳಗ್ಗೆಯಿಂದ ಸಂಜೆಯವರೆಗೂ ಸಾವಿರಾರು ಭಕ್ತರು ಕುಟುಂಬ ಸಮೇತ ಸಾಯಿಬಾಬಾ ದೇವಸ್ಥಾನಕ್ಕೆ ಭೇಟಿ ನೀಡಿ ಸಾಯಿಬಾಬಾ ದರ್ಶನ ಪಡೆದರು, ಭಕ್ತರಿಗೆ ಪ್ರಸಾದದ ವ್ಯವಸ್ಥೆ ಕಲ್ಪಿಸಲಾಗಿತ್ತು. ಟ್ರಸ್ಟ್ ಅಧ್ಯಕ್ಷ ಚಾಮಯ್ಯ, ಗೌರವ ಅಧ್ಯಕ್ಷರಾದ ಡಾ.ಸೀತಾ ಲಕ್ಷ್ಮಿ, ಖಜಾಂಚಿ ಗಂಗಾಧರ್, ಮಹದೇವೇಗೌಡ, ಶ್ಯಾಮ್, ಮಿರ್ಲೆ ಪಣೀಶ್ ಇನ್ನಿತರರು ಉಪಸ್ಥಿತರಿದ್ದರು.

ಹುಟ್ಟುಹಬ್ಬಕ್ಕೆ ಅಭಿನಂದನೆ



ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡರ ಹುಟ್ಟುಹಬ್ಬವನ್ನು ಜೆಡಿಎಸ್ ಯುವ ಮುಖಂಡ ಪೈ. ದಿನೇಶ್‌ಗೌಡ ಹಾಗೂ ಸುರೇಶ್ ಧರ್ಮ ಅವರು ಕೇಕ್ ಕತ್ತರಿಸುವ ಮೂಲಕ ಆಚರಿಸಿ ಅಭಿನಂದಿಸಿದರು. ಈ ವೇಳೆ ಮಾಜಿ ಸಚಿವ ಸಾ.ರಾ. ಮಹೇಶ್, ಮಾಜಿ ಶಾಸಕ ಅಶ್ವಿನ್‌ಕುಮಾರ್, ಭರತ್‌ಗೌಡ, ಮಾಜಿ ಮೇಯರ್ ನಿಂಗಪ್ಪ ಮಾಜಿ ಕಾರ್ಪೋರೇಟರ್ ಪ್ರೇಮಾ ಶಂಕರೇಗೌಡ, ಪೈ.ಚಿಕ್ಕಪುಟ್ಟಿ ಅಪೆಕ್ಸ್ ಶ್ರೀನಿವಾಸ್, ಕೃಷ್ಣನಾಯಕ, ಪ್ರಕಾಶ್, ಜೇಸುದಾಸ್, ದಿವಾಕರ್, ನಂಜುಂಡಸ್ವಾಮಿ, ಮುರಳಿ, ಸುರೇಶ್ ಮತ್ತು ಶ್ರೀರಾಂಪುರ ಗ್ರಾಮಸ್ಥರು ಉಪಸ್ಥಿತರಿದ್ದರು.

ಇಂದು ಬೆಂಗಳೂರಲ್ಲಿ ಯುವ ಪುಸ್ತಕಗಳ ಸರಣಿ ಬಿಡುಗಡೆ ಸಮಾರಂಭ





ಡಾ.ವಿಕ್ರಂ ಸಂಪತ್

ಮೈಸೂರು, ಜು.11–ಯುವ ಪುಸ್ತಕಗಳ ಸರಣಿ ಬಿಡುಗಡೆ ಸಮಾರಂಭವನ್ನು ನಾಳೆ (ಜು.12) ಸಂಜೆ 4.30 ಗಂಟೆಗೆ ಬೆಂಗಳೂರು ಹೆಬ್ಬಾಳಿನ ಹೋಟೆಲ್ ಕೋರ್ಟ್‌ಯಾರ್ಡ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಕಾರ್ಯಕ್ರಮವನ್ನು ಖ್ಯಾತ ಇತಿಹಾಸಕಾರ ಮತ್ತು ಲೇಖಕ ಡಾ.ವಿಕ್ರಮ್ ಸಂಪತ್ ಸ್ಥಾಪಿತ ಭಾರತೀಯ ಐತಿಹಾಸಿಕ ಮತ್ತು ಸಾಂಸ್ಕೃತಿಕ ಸಂಶೋಧನಾ ಪ್ರತಿಷ್ಠಾನವು ಓಲಾ ಫೌಂಡೇಶನ್ ಸಹಯೋಗದೊಂದಿಗೆ ಆಯೋಜಿಸಲಾಗಿದೆ.

ಯುವದ ಹಲವಾರು ಉಪಕ್ರಮಗಳಲ್ಲಿ ವಿದ್ಯಾರ್ಥಿಗಳಿಗಾಗಿ ರಾಷ್ಟ್ರವ್ಯಾಪಿ ಪ್ರಬಂಧ ಸ್ಪರ್ಧೆ, ಭಾರತದ ಶಾಲೆಗಳಲ್ಲಿ ಇತಿಹಾಸ ಶಿಕ್ಷಣದ ಸ್ಥಿತಿಗತಿ ಕುರಿತು ಸಮೀಕ್ಷೆ ಮತ್ತು ಉತ್ತಮ ಗುಣಮಟ್ಟದ ಇತಿಹಾಸ ವಿಷಯದ ಮಕ್ಕಳ ಪುಸ್ತಕಗಳು ಸೇರಿವೆ. ಯುವ ಪುಸ್ತಕ ಸರಣಿಯು ಪ್ರಾಚೀನ ನಾಗರಿಕತೆಗಳು ಮತ್ತು ಮಧ್ಯಕಾಲೀನ ಸಾಮ್ರಾಜ್ಯಗಳಿಂದ ಹಿಡಿದು ಸ್ಫೂರ್ತಿದಾಯಕ ಆಡಳಿತಗಾರರು ಮತ್ತು ಸಾಂಸ್ಕೃತಿಕ ನಾವೀನ್ಯತೆಗಳವರೆಗೆ ಹಲವಾರು ವಿಷಯಗಳನ್ನು ಒಳಗೊಂಡಿದೆ. ಕಾರ್ಯಕ್ರಮವು ಡಾ.ವಿಕ್ರಮ್ ಸಂಪತ್ ಮತ್ತು ತಂತ್ರಜ್ಞ ಸಂದೀಪ್‌ಸಿಂಗ್ ಚೌಹಾನ್ ಅವರು ಸಹ–ಸ್ಥಾಪಿಸಿದ ಎಐ– ನೆರವಿನ, ಮಾನವ ಸಂಸ್ಕರಿಸಿದ ತಂತ್ರಜ್ಞಾನ ಪರಿಹಾರಗಳ ನವೋದ್ಯಮವಾದ NAAVAIನ ಉದ್ಘಾಟನೆ ಮತ್ತು ಮೊದಲ ಸಾರ್ವಜನಿಕ ಕೊಡುಗೆಯನ್ನು ಸಹ ಬಿಂಬಿಸುತ್ತದೆ. ಗೌರವ ಅತಿಥಿಗಳಾಗಿ ಇನ್ಫೋಸಿಸ್ ಫೌಂಡೇಷನ್‌ನ ಡಾ.ಸುಧಾಮೂರ್ತಿ, ಸಂಸದ ಯದುವೀರ್ ಒಡೆಯರ್, ಶ್ರೀ ಸತ್ಯಸಾಯಿ ಯೂನಿವರ್ಸಿಟಿ ಫಾರ್ ಹ್ಯೂಮನ್ ಎಕ್ಸೆಲೆನ್ಸ್ ಅಂಡ್ ಶ್ರೀ ಮಧುಸೂದನ್ ಸಾಯಿ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಅಂಡ್ ರಿಸರ್ಚ್‌ನ ಸಂಸ್ಥಾಪಕ ಕುಲಪತಿ ಸದ್ಗುರು ಶ್ರೀ ಮಧು ಸೂದನ್ ಸಾಯಿ ಭಾಗವಹಿಸಲಿದ್ದಾರೆ. ಡಾ.ವಿಕ್ರಂ ಸಂಪತ್ ಪ್ರಾಸ್ತಾವಿಕ ನುಡಿಗಳನ್ನಾಡುವರು.

ಸನ್ಮಾನ



ಲಯನ್ಸ್ ಕ್ಲಬ್ ಆಫ್ ಮೈಸೂರಿನ 2025–26ನೇ ಸಾಲಿನ ನೂತನ ಅಧ್ಯಕ್ಷ ನಿವೃತ್ತ ಡಿವೈಎಸ್ಪಿ ಲಯನ್.ಕೆ.ಎಸ್.ಕೃಷ್ಣಮೂರ್ತಿ ಅವರನ್ನು ಕದಂಬ ರಂಗವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ ಸನ್ಮಾನಿಸಿ, ಗೌರವಿಸಿದರು.

ರಾಜ್ಯ ಸರ್ಕಾರದಿಂದ ದೇವನಹಳ್ಳಿ ರೈತರ ಹೋರಾಟವನ್ನು ಹತ್ತಿಕ್ಕುವ ಪ್ರಯತ್ನ

ಬಹುಭಾಷಾ ನಟ ಪ್ರಕಾಶ್ ರಾಜ್ ಕಿಡಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ರೈತ ಸಂಘಟನೆ, ದಲಿತ ಸಂಘಟನೆ ಜತೆಗೂಡಿ ನಡೆಸಿದ ಜಂಟಿ ಸುದ್ದಿಗೋಷ್ಠಿಯಲ್ಲಿ ಬಹುಭಾಷಾ ನಟ ಪ್ರಕಾಶ್ ರಾಜ್ ಮಾತನಾಡಿದರು.

ಮೈಸೂರು, ಜು.11(ಜಿಎ)–ರಾಜ್ಯ ಸರ್ಕಾರವು ಚಿಕ್ಕಬಳ್ಳಾಪುರ ತಾಲೂಕಿನ ದೇವನಹಳ್ಳಿ ರೈತರ ಹೋರಾಟವನ್ನು ಒಡೆಯುವ ಪ್ರಯತ್ನ ಮಾಡುತ್ತಿದೆ ಎಂದು ಬಹುಭಾಷ ನಟ ಪ್ರಕಾಶ್ ರಾಜ್ ಕಿಡಿಕಾರಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ರೈತ ಸಂಘಟನೆ, ದಲಿತ ಸಂಘಟನೆ ಜತೆಗೂಡಿ ನಡೆಸಿದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮ್ಮ ಭೂಮಿಯನ್ನು ಕೆಐಡಿಬಿ ವಶ ಪಡಿಸಿಕೊಳ್ಳಬಾರದು ಎಂದು ದೇವನಹಳ್ಳಿಯಲ್ಲಿ ರೈತರು ದೊಡ್ಡ ಮಟ್ಟದಲ್ಲಿ ಹೋರಾಟ ನಡೆಸುತ್ತಿದ್ದಾರೆ. ಕೆಲ ರೈತರನ್ನು ಕೆಐಡಿಬಿಗೆ ಕರೆತಂದು ಪರಿಹಾರ ಕೇಳಿಸುವ ಮೂಲಕ ರೈತರ ಹೋರಾಟವನ್ನು ಒಡೆಯುವ ಪ್ರಯತ್ನ ಮಾಡುತ್ತಿದ್ದಾರೆ. ರಾಜ್ಯದಲ್ಲಿ ಸರ್ಕಾರ ನಡೆಸುವವರು ಇಂತಹ ನಾಟಕವಾಡಬೇಡಿ ನೋಟಿಫಿಕೇಷನ್ ರದ್ದು ಪಡಿಸಲು ಮುಖ್ಯಮಂತ್ರಿಗಳು ಹತ್ತು ದಿನ ಸಮಯ ಕೇಳಿದ್ದಾರೆ. ಹಾಗಿದ್ದರೂ ಇಂತಂಹ ನಾಟಕ ಮಾಡುತ್ತಿರುವುದು ನಮ್ಮ ಕಣ್ಣಿಗೆ ಕಾಣಿಸುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ಯೋಜನೆಗೆ ಬೇಕಾಗಿರುವುದು ಕೇವಲ 100 ಎಕರೆ ಭೂಮಿ ಮಾತ್ರ ಇರಬಹುದು. ಆದರೆ, 1700 ಎಕರೆ ಜಮೀನು ವಶ ಪಡಿಸಿಕೊಳ್ಳುತ್ತಿರುವುದು ಏಕೆ ಎಂದು ಪ್ರಶ್ನಿಸಿದ ಅವರು, ಮುಂದಿನ ದಿನಗಳಲ್ಲಿ ನೀವು ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತೀರಿ. ಪಂಚತಾರಾ ಹೋಟೇಲ್ ನಿರ್ಮಿಸಿ, ರೈತ ಮಕ್ಕಳನ್ನು ಕಾರು ತೊಳೆಯಲು ಇಟ್ಟುಕೊಳ್ಳುತ್ತೀರಿ ಎಂದು ನಿಮ್ಮ(ರಾಜ್ಯ ಸರ್ಕಾರ) ಮೇಲೆ ನಮಗೆ ಅನುಮಾನ ಮೂಡುವುದು ಸಹಜ ಎಂದರು. ಅಲ್ಲದೇ ರೈತರ ಭೂಮಿ ವಾಪಾಸ್ ಕೊಡುವವರೆಗೂ ನಾವು ಹೋರಾಟ ಕೈಬಿಡುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ಬಿಜೆಪಿ ಸರ್ಕಾರ ರೈತರಿಗೆ ಗಾಯ ಮಾಡಿತು ಎಂದು ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತಂದರೆ, ನೀವು ಅವರನ್ನು ಮೀರಿಸುವ ರೀತಿಯಲ್ಲಿ ದೊಡ್ಡ ಗಾಯ ಮಾಡುತ್ತಿದ್ದೀರಿ ಎಂದು ಹರಿಹಾಯ್ದ ಅವರು, ಸಚಿವ ಎಂ.ಬಿ.ಪಾಟೀಲರು ಪ್ರಶ್ನೆ ಮಾಡುವುದನ್ನಾದರೂ ಸರಿಯಾಗಿ ಕಲಿಯಬೇಕು. ದೇವನಹಳ್ಳಿ ಇರುವುದು ಕರ್ನಾಟಕದಲ್ಲಿ ಅನ್ಯಾಯವಾಗುತ್ತಿರುವುದು ದೇವನಹಳ್ಳಿ ಜನಕ್ಕೆ. ನಾನು ಹೋರಾಟ ಮಾಡುತ್ತೇನೆ. ನಾನು ಕನ್ನಡಿಗನಾಗಿ ಹೋರಾಟ ಮಾಡುತ್ತಿದ್ದೇನೆ. ಒಬ್ಬ ಪ್ರಜೆಯಾಗಿ ಅದು ನನ್ನ ಕರ್ತವ್ಯ ಎಂದರು.

ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ದೇವನಹಳ್ಳಿ ರೈತರ ಭೂಮಿಯನ್ನು ಬಲವಂತವಾಗಿ ವಶಪಡಿಸಿಕೊಳ್ಳುವುದೇ ಆದರೆ ಸರ್ಕಾರ ಈ ಹಿಂದೆ ವಶಪಡಿಸಿಕೊಂಡು ಉಪಯೋಗಕ್ಕೆ ಬಾರದೆ ಉಳಿದ ಜಮೀನನ್ನು ನಾವು ವಶಕ್ಕೆ ಪಡೆಯುತ್ತೇವೆ ಎಂದು ಎಚ್ಚರಿಸಿದರು.

ಒಂದೆಡೆ ಅಂತಿಮ ನೋಟಿಫಿಕೇಷನ್ ಮಾಡುವುದಿಲ್ಲ ಮುಂದಿನ ಸಭೆವರೆಗೂ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ ಎಂದು ಹೇಳಿ ಈಗ ಏಕಾಏಕಿ ಕೇಂದ್ರಕ್ಕೆ ತೆರಳಿ ರಕ್ಷಣಾ ಸಚಿವರಲ್ಲಿ ದೇವನಹಳ್ಳಿ ಮತ್ತು ಬೆಂಗಳೂರು ಸುತ್ತಮುತ್ತ ಡಿಫೆನ್ಸ್ ಕಾರಿಡಾರ್ ಯೋಜನೆ ಜಾರಿಗೊಳಿಸುವಂತೆ ಮುಖ್ಯಮಂತ್ರಿಗಳು ಒತ್ತಾಯಿಸಿದ್ದಾರೆ. ಅಂದರೆ ಅವರ ಉದ್ದೇಶವೇನು? ಎಂದು ಪ್ರಶ್ನಿಸಿದರು.

ವಿಪಕ್ಷದಲ್ಲಿದ್ದಾಗ ಈ ಯೋಜನೆ ರದ್ದಾಗಬೇಕು ಎಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇತ್ತೀಚಿನ ಸಭೆಯಲ್ಲೂ ಬಲವಂತವಾಗಿ ಭೂಮಿ ವಶಪಡಿಸಿಕೊಳ್ಳುವುದಿಲ್ಲ ಎಂದಿದ್ದರು. ಆದರೆ, ಈಗ ಅವರು ನಡೆದುಕೊಳ್ಳುತ್ತಿರುವುದೇನು? ಇದೇನಾ ನಿಮ್ಮ ಕರ್ನಾಟಕ ಮಾದರಿ ಸರ್ಕಾರ ಎಂದು ರೈತ ನಾಯಕಿ ಚುಕ್ಕಿ ನಂಜುಂಡಸ್ವಾಮಿ ಕಿಡಿಕಾರಿದರು.

ಸುದ್ದಿಗೋಷ್ಠಿಯಲ್ಲಿ ದಲಿತ ಮುಖಂಡ ಗುರುಪ್ರಸಾದ್ ಕೆರಗೂಡು, ಬೆಟ್ಟಯ್ಯಕೋಟೆ, ಜಗದೀಶ್ ಸೂರ್ಯ ಮತ್ತಿತರರು ಉಪಸ್ಥಿತರಿದ್ದರು.



ಹಸಿರು ನಮ್ಮ ಉಸಿರು

ಸಾರ್ವಜನಿಕ ಘೋಷಣೆ

ನನ್ನ ಕಕ್ಷಿದಾರರು ಈ ಕೆಳಗಿನ ಆಸ್ತಿಯ ವಿವರದಲ್ಲಿ ನೀಡಲಾದ ನಿವೇಶನವನ್ನು ಪ್ರಸ್ತುತ ಮಾಲೀಕರಾದ ಶ್ರೀ ಎಂ. ವಿ. ಗಣೇಶ್ ಬಾಬು, ಬಿನ್ Late ಎನ್. ವೆಂಕಟೇಶ್, ವಿಳಾಸ ನಂ.645, 1ನೇ ಕ್ರಾಸ್, ಕುಂಬಾರಗೇರಿ, ಚಾಮರಾಜ ಮೊಹಲ್ಲಾ ಮೈಸೂರು ಇವರಿಂದ ಖರೀದಿಸಲು ಒಪ್ಪಿಗೆಯಾಗಿದೆ. ಈ ಆಸ್ತಿಯ ಖರೀದಿ ವ್ಯವಹಾರ ಪ್ರಸ್ತುತ ಪ್ರಕ್ರಿಯೆಯಲ್ಲಿ ಇದ್ದು ಶೀಘ್ರದಲ್ಲಿ ಅಂತಿಮಗೊಳ್ಳಲಿದೆ. ಈ ಆಸ್ತಿಗೆ ಸಂಬಂಧಿಸಿದಂತೆ ಯಾರಾದರೂ ವ್ಯಕ್ತಿಗಳು ಅಥವಾ ಸಂಸ್ಥೆಗಳಿಗೆ ಯಾವುದೇ ಹಕ್ಕು, ವಿರೋಧ, ಸ್ವಾಮ್ಯ, ಆಸಕ್ತಿ, ಬಂಡವಾಳ ಹಕ್ಕು, ಚಾರ್ಜ್, ಬಾಂಧಕ, ಅಡ್ಡಿ ಅಥವಾ ಪವರ್ ಆಫ್ ಅಟಾರ್ನಿ ಇದ್ದರೆ, ಈ ಜಾಹೀರಾತು ಪ್ರಕಟಣೆಯ ದಿನಾಂಕದಿಂದ 7 (ಏಳು) ದಿನಗಳ ಒಳಗಾಗಿ ಸಂಬಂಧಿತ ದಾಖಲೆಗಳೊಂದಿಗೆ ಬರವಣಿಗೆಯ ಮೂಲಕ ನನ್ನನ್ನು ಸಂಪರ್ಕಿಸಲು ಈ ಮೂಲಕ ವಿನಂತಿಸುತ್ತೇನೆ. ನಿಯತ ಅವಧಿಯ ಒಳಗೆ ಎಚ್ಚರಿಕೆ/ ವಿರೋಧ ನೀಡದಿದ್ದಲ್ಲಿ, ಈ ಆಸ್ತಿ ಯಾವುದೇ ಅಡ್ಡಿಗಳಿಂದ ಮುಕ್ತವಾಗಿದೆ ಎಂಬುದಾಗಿ ಪರಿಗಣಿಸಲಾಗುತ್ತದೆ ಮತ್ತು ಇದ್ದರೂ ಸಹ ಅವುಗಳನ್ನು ತ್ಯಜಿತ ಮತ್ತು ವಜಾಗೊಂಡವೆಂದು ಪರಿಗಣಿಸಲಾಗುತ್ತದೆ. ಈ ಆಧಾರದ ಮೇಲೆ ನನ್ನ ಕಕ್ಷಿದಾರರು ಯಾವುದೇ ರೀತಿಯ ದಾವೆ/ಅಡ್ಡಿ/ಬಾಂಧಕ/ಹಕ್ಕುಗಳಿಲ್ಲದಂತೆ ಕ್ರಯ ಪತ್ರ ನೋಂದಣಿ ಪ್ರಕ್ರಿಯೆ ಮುಂದುವರಿಸಲಿದ್ದಾರೆ.

ಆಸ್ತಿಯ ವಿವರ (Schedule Property):

ಬೋಗಾದಿ ಗ್ರಾಮ, ಬೋಗಾದಿ, ಮೈಸೂರಿನಲ್ಲಿ ಇರುವ ಖಾಲಿ ನಿವೇಶನ, ಸೈಟ್ ನಂ.02, ಫಾರ್ಮ್-3 ಖಾತಾ ಪಿ.ಐ.ಡಿ ನಂ. 2277491659, ಅಸೆಸ್ಮೆಂಟ್ ನಂ. 02 ಹೊಂದಿದ್ದು, ಪೂರ್ವದಿಂದ ಪಶ್ಚಿಮದವರೆಗೆ 12.00 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣದವರೆಗೆ 18.00 ಮೀಟರ್‌ಗಳು ಅಳತೆಯುಳ್ಳ, ಒಟ್ಟು 216 ಚದರ ಮೀಟರ್‌ಗಳು ವ್ಯಾಪ್ತಿಯಲ್ಲಿರುವ ನಿವೇಶನಕ್ಕೆ ಚಕ್ಕುಬಂದಿ
ಪೂರ್ವಕ್ಕೆ : ಸೈಟ್ ನಂ.1, ಪಶ್ಚಿಮಕ್ಕೆ : ಸೈಟ್ ನಂ.3, ಉತ್ತರಕ್ಕೆ : ಖಾಸಗಿ ಆಸ್ತಿ, ದಕ್ಷಿಣಕ್ಕೆ : ರಸ್ತೆ

ಸಹಿ/- ಕಾರಿಯಪ್ಪ ಓ.ಜಿ, ವಕೀಲರು
ಅಸ್ತ್ರಾ ಲಾ, ನಂ. ಪಿ-15, ಮೊದಲ ಮಹಡಿ, ನಾಗರಿಕಾ ವೇದಿಕೆ ಬಿಲ್ಡಿಂಗ್, ವಿಶ್ವಮಾನವ ಡಬಲ್ ರೋಡ್, ಕುವೆಂಪುನಗರ, ಮೈಸೂರು-570023 ಮೊ : +91 8951142769

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ
ಪರಿಸರವನ್ನು ಕಾಪಾಡಿ

ಸವಿನೆನಪು
3ನೇ ವರ್ಷದ ಪುಣ್ಯಸ್ಮರಣೆ
12/07/2025



ಶ್ರೀ ಕೆ.ಜಿ. ನಾಯರ್
ಸಂಸ್ಥಾಪಕರು
ಪ್ಲಾಸ್ಟೋಕೆಮ್ ಫ್ಯಾಬ್ರಿಕೇಷನ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್
ನಿಮ್ಮ ಸ್ಮರಣೆ ಸದಾ ನಮ್ಮ ಹೃದಯದಲ್ಲಿರಲಿ
— ಕುಟುಂಬವರ್ಗದವರು, ಸ್ನೇಹಿತರು ಹಾಗೂ ಬಂಧುಮಿತ್ರರು

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,
ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು - 570028.
ದೂರವಾಣಿ ಸಂಖ್ಯೆ:0821-2474475, ಫ್ಯಾಕ್ಸ್ ನಂ.0821-2474476,
ಇ-ಮೇಲ್ : purmymul@gmail.com
IFT No: KMF/2025-26/IND1520 ದಿನಾಂಕ:11.07.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಟೆಂಡರ್ ಮೂಲಕ ಮಾತ್ರ)

ಒಕ್ಕೂಟಕ್ಕೆ ಅಗತ್ಯವಿರುವ ಬಿ.ಎಂ.ಸಿ ಹಾಗೂ ಕಂಡೇನ್ಸಿಂಗ್ ಯುನಿಟ್ ಅನ್ನು ಸರಬರಾಜು ಮಾಡಿ ಅಳವಡಿಸುವ ಸಂಬಂಧ ಅರ್ಹ ಟೆಂಡರ್‌ದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಅಡಿ https://kppp.karnataka.gov.in ಈ ವೆಬ್‌ಸೈಟ್‌ನಲ್ಲಿ ದಿನಾಂಕ:19.07.2025ರ ಸಂಜೆ:5.00 ಗಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗದ ಉಪ ವ್ಯವಸ್ಥಾಪಕರನ್ನು (6364430821/9482231739) ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/-, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

ನಿಧನ



ಯಧು ಎಂ.ಗೌಡ

ಮೈಸೂರು ನಗರದ ಹೂಟಗಳ್ಳಿಯ ಜೆಡಿಎಸ್ ಮುಖಂಡರಾದ ಮಂಚೇಗೌಡರ ದ್ವಿತೀಯ ಪುತ್ರ ಯಧು ಎಂ. ಗೌಡ ಶುಕ್ರವಾರ ರಾತ್ರಿ ನಿಧನರಾದರು. ಇವರ ಅಂತ್ಯಕ್ರಿಯೆ ಶನಿವಾರ (ಜು. 12) ಮಧ್ಯಾಹ್ನ 1.30ಕ್ಕೆ ಹೂಟಗಳ್ಳಿಯ ಅವರ ಜಮೀನಿನಲ್ಲಿ ನೆರವೇರಲಿದೆ.

ದುಃಖತಪ್ತರು:
ಪಟೇಲ್ ನಾಗೇಗೌಡರ ಕುಟುಂಬ, ಹೂಟಗಳ್ಳಿ


10ನೇ ವರ್ಷದ ಪುಣ್ಯಸ್ಮರಣೆ



ರಂಗಪ್ಪ .ಕೆ
ಮಾಜಿ ಗ್ರಾ.ಪಂ.ಸದಸ್ಯರು, ಹೆಬ್ಬಾಳು

ನೀವು ನಮ್ಮನ್ನಗಲಿ ಇಂದಿಗೆ 10 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಶ್ರೀಮತಿ ಜಯಮ್ಮ, ಮಕ್ಕಳು, ಲೋಕೇಶ್ ಆರ್, ಮಂಜು.ಆರ್, ಮಹೇಶ್.ಆರ್, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಕುಟುಂಬ ವರ್ಗದವರು ಹಾಗೂ ಕುಂಬಾರಕೊಪ್ಪಲಿನ ಗ್ರಾಮಸ್ಥರು.

16ನೇ ವರ್ಷದ ಸವಿನೆನಪು



ಕೆ.ಎಸ್.ಸುನೀಲ್ ಕುಮಾರ್
ನನ್ನ ಪ್ರೀತಿಯ ಮಗನೇ ನೀನು ನಮ್ಮನ್ನಗಲಿ 16 ವರ್ಷ ಕಳೆದರೂ ನಿನ್ನ ನೆನಪು ಸದಾ ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ.
ದುಃಖತಪ್ತರು: ತಂದೆ ಕೆ.ಎಸ್.ಕೃಷ್ಣಪ್ಪ, ಕೆಎಸ್‌ಕೆ ಸೈಕಲ್ ಶಾಪ್, ಮತ್ತು ನಂದಿನಿ ಮಿಲ್ಕ್ ಡೈರಿ ಸರಸ್ವತಿಪುರಂ ತಾಯಿ: ಯಶೋಧಮ್ಮ, ತಮ್ಮ: ಸಂಜೀವ್, ತಂಗಿ: ಬೃಂಧಾ, ಸೊಸೆ: ಲಾವಣ್ಯ, ಮೊಮ್ಮಕ್ಕಳು ಹಾಗೂ ಸ್ನೇಹಿತರುಗಳು

ಪುಣ್ಯಸ್ಮರಣೆ
ನಿಮ್ಮ ನೆನಪು ಸದಾ ಜೀವಂತ



ಸಾವಿತ್ರಮ್ಮ-ಹೆಚ್.ಬಸಪ್ಪ
ನೀವು ನಮ್ಮನಗಲಿದರೂ ಸದಾ ನಿಮ್ಮ ಮಾರ್ಗದರ್ಶನದಲ್ಲಿ ನಿಮ್ಮ ಆಶೀರ್ವಾದದೊಂದಿಗೆ ಸದಾ ನಿಮ್ಮ ನೆನಪಿನಲ್ಲಿರುವ ನಿಮ್ಮ ಪ್ರೀತಿಯ ಮೊಮ್ಮಕ್ಕಳು:
ವಿಕಾಸ್ ಎಸ್. ಮತ್ತು ಮನೋಜ ಎಸ್. ಸೌಮ್ಯ ಆರ್. ಮತ್ತು ಶಿಲ್ಪ ಆರ್. ಮಾನಸ ಹೆಚ್.ಎಸ್

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತ ಗಂಗೋತ್ರಿ, ಮೈಸೂರು-570 006
ಆಡಳಿತ ವಿಭಾಗ
ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-02/728/2025-26 ದಿ: 05.07.2025

ಶಿಸ್ತು ಕ್ರಮದ ಅಂತಿಮ ಆದೇಶದ ಕುರಿತು

ಶ್ರೀ ಎಂ.ಶಿವರಾಮಕೃಷ್ಣ, ಹಿರಿಯ ಸಹಾಯಕ(ಅಮಾನತ್ತು), ಪರೀಕ್ಷಾ ವಿಭಾಗ ಇವರು ಕಛೇರಿ ಕೆಲಸಕ್ಕೆ ಅನಧಿಕೃತ ಗೈರು ಹಾಜರಾದ ಹಿನ್ನೆಲೆಯಲ್ಲಿ, ಇಲಾಖಾ ವಿಚಾರಣೆ ನಡೆಸಿ ಆರೋಪ ಸಾಭೀತಾದ ಹಿನ್ನೆಲೆಯಲ್ಲಿ, ದಂಡನೆಯನ್ನು ವಿಧಿಸಿ ಮರುನಿಯುಕ್ತಿಗೊಳಿಸಿ ಆದೇಶ ಹೊರಡಿಸಲಾಗಿತ್ತು. ಆದರೆ ಕಛೇರಿ ಕರ್ತವ್ಯಕ್ಕೆ ಹಾಜರಾಗದ ಹಿನ್ನೆಲೆಯಲ್ಲಿ, ಕರ್ತವ್ಯಕ್ಕೆ ಹಾಜರಾಗಲು ತಿಳಿಸಿ ದಿ: 21.03.2025 ರಂದು ಪತ್ರಿಕಾ ಪ್ರಕಟಣೆಯನ್ನು ಸಹ ಹೊರಡಿಸಲಾಗಿತ್ತು. ಆದರೂ ಸಹ ಕಛೇರಿ ಕರ್ತವ್ಯಕ್ಕೆ ಹಾಜರಾಗದ ಹಿನ್ನೆಲೆಯಲ್ಲಿ, ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿ.ವಿ ಉದ್ಯೋಗಿಗಳ (ಸಿಸಿಎ) ಪರಿನಿಯಮದ ನಿಯಮ 5(1)(ix) ರನ್ವಯ ವಿಶ್ವವಿದ್ಯಾನಿಲಯದ ಸೇವೆಯಿಂದ ವಜಾಗೊಳಿಸಿ (Dissmissal) ಶಿಸ್ತುಕ್ರಮದ ಅಂತಿಮ ಆದೇಶವನ್ನು ದಿ:21.05.2025 ರಂದು ಹೊರಡಿಸಲಾಗಿದೆ.

DIPR/DDMYS/612/KSMCA/355/2025-26 ಸಹಿ/- ಕುಲಸಚಿವ

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ
ದೊಡ್ಡಕೆರೆ ಮೈದಾನ, ಇಂದಿರಾನಗರ, ಮೈಸೂರು-570010.
ದೂ: 0821-2523626, ಇ-ಮೇಲ್: exhibitionauthority@gmail.com
ಸಂಖ್ಯೆ: ಕವಪ್ರಾ/ಮುಕಾನಿ/2025-26 ದಿನಾಂಕ: 11.07.2025

ಪ್ರಕಟಣೆ

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣವನ್ನು ಅಭಿವೃದ್ಧಿಗೊಳಿಸುವ ಕಾಮಗಾರಿಗೆ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ನ ವಿವರಗಳು ಈ ಕೆಳಕಂಡಂತ್ತಿದೆ.

ಕ್ರ. ಸಂ.	ಕಾಮಗಾರಿ ಹೆಸರು	ಟೆಂಡರ್‌ನ ಮೊತ್ತ	ಟೆಂಡರ್ ಸಲ್ಲಿಸುವ ಕೊನೆ ದಿನಾಂಕ
1	Project Management Consultancy services for development of A-Block Area, Fountain areas and drain areas inside Karnataka Exhibition Authority Premises, Mysuru.	ರೂ. 38,50,000.00	18.07.2025ರ ಸಂಜೆ 4.00ಕ್ಕೆ

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಕಚೇರಿ ವೇಳೆಯಲ್ಲಿ ಕಚೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರು (ಸಿವಿಲ್) ರವರನ್ನು ಸಂಪರ್ಕಿಸಿ ಹಾಗೂ ವೆಬ್‌ಸೈಟ್ https://kppp.karnataka.gov.inನಲ್ಲಿ ಮಾಹಿತಿ ಪಡೆಯಬಹುದು ಎಂದು ಈ ಮೂಲಕ ಕೋರಿದೆ. ಮೊಬೈಲ್ ಸಂಖ್ಯೆ : 9900568915. 7892920878. ಇ-ಮೇಲ್ ಸಂಖ್ಯೆ: exhibitionauthority@gmail.com

ಸಹಿ/-
ಸಹಾಯಕ ಕಾರ್ಯಪಾಲಕ ಅಭಿಯಂತರರು
ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ
DIPR/MYS/627/SA/2025-26